ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

## ಭಾಗ–1

# ೬

## ಆರನೆಯ ತರಗತಿ

@KTBS NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

ಡಾ|| ನಾ. ದಾಮೋದರ ಶೆಟ್ಟಿ, ನಿವೃತ್ತ ಪ್ರಾಧ್ಯಾಪಕರು, ಪ್ರಸಾಧನ, ಭಾರತೀ ನಗರ, ಬಿಜೈ, ಮಂಗಳೂರು-೦೪

**ಸದಸ್ಯರು :**

ಶ್ರೀ ಜೆ. ಸುರೇಶ್, ಸಿ.ಆರ್.ಪಿ. ನಲ್ಲೂರು ಕ್ಲಸ್ಟರ್, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ

ಶ್ರೀ ವೀರೇಶ್‌ಕೌಲಗಿ, ಸ.ಶಿ. ಸರ್ಕಾರಿ ಪ್ರೌಢಶಾಲೆ, ಹಿರೇಗೌಜ, ಚಿಕ್ಕಮಗಳೂರು ತಾ.

ಶ್ರೀಮತಿ ಸುಶೀಲ, ಶಿಕ್ಷಣ ಸಂಯೋಜಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

ಶ್ರೀ ಕೆ. ವೆಂಕಟರಾಜ ಯಳಚಿತ್ತಾಯ, ಸ.ಶಿ. ಸ್ವಾಮಿ ವಿವೇಕಾನಂದ ಪ.ಪೂ. ಕಾಲೇಜು (ಪ್ರೌಢಶಾಲಾ ವಿಭಾಗ) ಎಡಪದವು, ದ.ಕ.ಜಿಲ್ಲೆ

ಶ್ರೀ ಎಸ್.ಎಸ್.ಹಳ್ಳೂರ, ಸ.ಶಿ. ಮೋಹನ ರಾಮಣ್ಣ ಸೊನ್ನದ ಸರ್ಕಾರಿ ಪ್ರೌಢಶಾಲೆ, ಛಂಟನೂರ, ಮುಧೋಳ ತಾ, ಬಾಗಲಕೋಟೆ ಜಿಲ್ಲೆ

ಶ್ರೀ ಜಾನ್‌ಚಂದ್ರನ್, ಚಿತ್ರಕಲಾ ಶಿಕ್ಷಕರು, ಸೆಂಟ್ ಅಲೋಶಿಯಸ್ ಪ್ರೌಢಶಾಲೆ, ಕೊಡಿಯಾಲ ಬೈಲು, ಮಂಗಳೂರು

**ಪರಿಶೀಲಕರು :**

ಶ್ರೀ ಕಾ ತ ಚಿಕ್ಕಣ್ಣ, ಜಂಟಿ ನಿರ್ದೇಶಕರು, (ನಿವೃತ್ತ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

**ಸಂಪಾದಕ ಮಂಡಳಿ ಸದಸ್ಯರು :**

ಪ್ರೊ. ಚಂದ್ರಶೇಖರ ಪಾಟೀಲ್, ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ ನಗರ, ಬೆಂಗಳೂರು – ೭೮.

ಡಾ.ಕೆ. ಮರುಳಸಿದ್ದಪ್ಪ, ಸಾಹಿತಿಗಳು, ನಂ. ೧೩೭, ೧೨ ನೇ ಕ್ರಾಸ್, ಜೆ.ಪಿ. ನಗರ 2ನೇ ಹಂತ, ಬೆಂಗಳೂರು – ೭೮.

ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

ಪ್ರೊ. ಅ.ರಾ.ಮಿತ್ರ, ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

**ಸಲಹೆ ಮತ್ತು ಮಾರ್ಗದರ್ಶನ :**

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

ಶ್ರೀಮತಿ ಸಿ. ನಾಗಮಣಿ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

**ಕಾರ್ಯಕ್ರಮ ಸಂಯೋಜಕರು :**

ಶ್ರೀ ಪಾಂಡುರಂಗ , ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

@KTBS NOT TO BE REPUBLISHED

# ಮುನ್ನುಡಿ

೨೦೦೫ ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach), ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

© KTBS NOT TO BE REPUBLISHED

## ಮುಂದುವರಿಯುವ ಮುನ್ನ......

ಪ್ರಿಯರೇ,

ಆರನೆಯ ತರಗತಿಯ ಕನ್ನಡ ಮಾಧ್ಯಮದ ಮಕ್ಕಳು ಯಾವ ಮಟ್ಟದ ಪಾಠಗಳನ್ನು ಓದಬೇಕು ಎಂಬುದರ ಬಗ್ಗೆ ಕರ್ನಾಟಕ ಸರಕಾರದ ಪಠ್ಯಪುಸ್ತಕ ರಚನಾ ಸಂಘವು ಕೊಟ್ಟ ಸ್ಥೂಲ ರೂಪುರೇಷೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ಸಮಿತಿಯು ಬಹಳ ಎಚ್ಚರಿಕೆಯಿಂದ ಈ ಪುಸ್ತಕವನ್ನು ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾದ ಪಾಠವನ್ನು ಆಯ್ಕೆ ಮಾಡುವ ಬಹುದೊಡ್ಡ ಕಸರತ್ತನ್ನು ನಿಭಾಯಿಸಿ, ಅದಕ್ಕೆ ಬೇಕಾದ ಅಭ್ಯಾಸ, ವ್ಯಾಕರಣ ಇತ್ಯಾದಿಗಳನ್ನು ಪೋಣಿಸಿ ಈ 'ಸಿರಿ ಕನ್ನಡ' ವನ್ನು ಸಿದ್ಧಪಡಿಸಿದ್ದೇವೆ.

ಹಾಗೆ ಸಿದ್ಧಪಡಿಸುವಾಗ ಸಾಮರ್ಥ್ಯದ ಜೊತೆಜೊತೆಗೇ ಬದುಕಿಗೆ ನೇರ ಸಂಬಂಧ ಪಡುವ ಮೌಲ್ಯಗಳನ್ನು ಅಳವಡಿಸಿದ್ದೇವೆ. ಸಮಾಜದಲ್ಲಿ ಅತ್ಯುತ್ತಮ ಪ್ರಜೆಯಾಗಿ ರೂಪುಗೊಳ್ಳುವುದಕ್ಕೆ ಸಂಬಂಧಪಡುವ ಅನೇಕ ಅಂಶಗಳು ಇಲ್ಲಿವೆ. ಐದನೆಯ ತರಗತಿಯ ಪಠ್ಯಪುಸ್ತಕದ ಮುಂದುವರಿದ ರೂಪವಿದು.

ಪಾಠದ ಕೊನೆಯಲ್ಲಿ ಪೂರಕ ಪಾಠವನ್ನು ಕೊಡುವ ಕ್ರಮವನ್ನು ಇಲ್ಲೂ ಮುಂದುವರಿಸಿದ್ದೇವೆ. ಆದರೆ ಪಠ್ಯದ ಮಹತ್ತನ್ನೇ ಪೂರಕ ಪಠ್ಯಗಳಿಗೂ ನೀಡಿದ್ದೇವೆ ಎನ್ನಲಾಗುವುದಿಲ್ಲ. ಪೂರಕ ಪಾಠವೆಂದರೆ 'ಮುಂದುವರಿದ ಓದು' ಎಂದರ್ಥ. ಪಾಠ ಓದುವಾಗ ಒದಗಬಹುದಾದ ಕುತೂಹಲವನ್ನು ಅಲ್ಲಲ್ಲಿ ಕೊಟ್ಟಿರುವ ಪೂರಕ ಪಾಠಗಳು ತಣಿಸಬಹುದೆಂಬ ವಿಶ್ವಾಸ ನಮ್ಮದು. ಪರೀಕ್ಷೆಗೆ ಉತ್ತರಿಸದೆ ತಮ್ಮ ಖುಷಿಗೆ ಓದುವುದೆಂದರೆ ಮಕ್ಕಳಿಗೆ ಸಹಜವಾಗಿಯೇ ಪ್ರಿಯವೆನ್ನಿಸುತ್ತದೆ. ಪೂರಕಪಾಠವನ್ನು ಮಕ್ಕಳು ಓದಿರುವುದನ್ನು ಖಾತ್ರಿಪಡಿಸಲು ಆಯಾ ಪೂರಕ ಪಾಠಗಳ ಕೆಳಗೆ ಸರಳವಾದ ಕೆಲವು ಪ್ರಶ್ನೆಗಳನ್ನೂ ನೀಡಲಾಗಿದೆ. ಅಧ್ಯಾಪಕರು ಆ ಪ್ರಶ್ನೆಗಳನ್ನು ಕೇಳಿದರೆ ಮಕ್ಕಳು ಅವನ್ನು ಓದಿರುವುದು ಅಥವಾ ಓದದೇ ಇರುವುದು ಅರಿವಿಗೆ ಬರುತ್ತದೆ. ಮೇಲಾಗಿ ಸಣ್ಣದೊಂದು ಅಂಕ ಅವಕ್ಕೂ ಇದೆಯೆಂಬುದನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವ್ಯಾಕರಣ ಮಾಹಿತಿ ಬಳಿಕ ಒಂದಷ್ಟು ಅಭ್ಯಾಸ ಭಾಗದ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ. ವಿದ್ಯಾರ್ಥಿಗಳು ಪ್ರತ್ಯೇಕವಾದ ಅಭ್ಯಾಸ ಪುಸ್ತಕದಲ್ಲಿ ಉತ್ತರ ಬರೆಯುವುದನ್ನು ರೂಢಿಸಿಕೊಳ್ಳಬೇಕು.

ವ್ಯಾಕರಣ ಭಾಗವನ್ನು ಬಹಳ ಸರಳಗೊಳಿಸಿದ್ದೇವೆ. ಉದಾಹರಣೆಗೆ ಸಂಧಿ, ಸಮಾಸಗಳ ಬಗ್ಗೆ ಸಮಗ್ರ ವಿವರ ಕೊಡದೆ ರುಚಿ ಹುಟ್ಟಿಸುವುದಕ್ಕೆ ಬೇಕಾದಷ್ಟನ್ನು ಮಾತ್ರ ಕೊಟ್ಟಿದ್ದೇವೆ. ಪ್ರಾಸದ ನಿರ್ದಿಷ್ಟವಾದ ಸೂತ್ರವನ್ನು ಕೊಟ್ಟು ಈ ಮಟ್ಟದ ವಿದ್ಯಾರ್ಥಿಗಳಿಗೆ ಹೆಚ್ಚು ತ್ರಾಸ ಕೊಡುವುದರ ಬದಲಿಗೆ ಸರಳವಾಗಿ ಪ್ರಾಸ ಎಂದರೇನು ಎಂಬುದನ್ನು ಮೇಲ್ನೋಟಕ್ಕೆ ತಿಳಿದುಕೊಳ್ಳಲು ಎಷ್ಟುಬೇಕು ಅಷ್ಟನ್ನೇ ಕೊಟ್ಟಿದ್ದೇವೆ. ಸೂತ್ರಗಳನ್ನು ಮುಂದೆ ಕಲಿತುಕೊಳ್ಳಲಿ. ಒಮ್ಮೆಲೆ ತಲೆತುಂಬಬೇಕೆಂಬ ಅವಸರ ನಮಗಿಲ್ಲ. ಆರನೆಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಕೆಲಸದಲ್ಲಿ ಮನಸಾರೆ ಶ್ರಮಿಸಿದ ನನ್ನ ತಂಡದ ಎಲ್ಲ ಸದಸ್ಯರಿಗೂ ಪರಿಶೀಲಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ನನ್ನ ಮನದುಂಬಿದ ಪ್ರಣಾಮಗಳು.

ಈ ಹೊತ್ತಗೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನಮ್ಮ ಸಮಿತಿಗೆ ಒಪ್ಪಿಸಿಕೊಟ್ಟ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೆ, ಉಪನಿರ್ದೇಶಕರಿಗೆ, ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯರವರಿಗೆ, ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಮೊದಲಾದ ಎಲ್ಲರಿಗೂ ನನ್ನ ಹಾಗೂ ನಮ್ಮ ತಂಡದ ಗೌರವಪೂರ್ವಕ ನಮನಗಳು.

**ಡಾ. ನಾ. ದಾಮೋದರ ಶೆಟ್ಟಿ**
**ಅಧ್ಯಕ್ಷರು**
**ಪಠ್ಯಪುಸ್ತಕ ರಚನಾ ಸಮಿತಿ**
**ಆರನೆಯ ಪ್ರಥಮ ಭಾಷೆಯ ಕನ್ನಡ**

© KTBS NOT TO BE REPUBLISHED

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ), ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್. ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಬೀದರ್.

**ಶ್ರೀ ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ ಬಿ. ರವೀಶ್‌ಕುಮಾರ್,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು-೬೧

**ಶ್ರೀ ತಮ್ಮಣ್ಣಗೌಡ ಹೆಚ್.ಸಿ.,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು.

**ಶ್ರೀಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿ ಪೂರ್ವ ಕಾಲೇಜು, ಮದ್ದೂರು ತಾಲ್ಲೂಕು.

**ಶ್ರೀ ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿ.ಪ.ಪೂ.ಕಾಲೇಜು, ಹೊಸನಗರ ತಾ.

**ಶ್ರೀ ಎನ್.ಬಿ.ವೀರನಗೌಡ,** ಬಿ.ಅರ್.ಪಿ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೦೩

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೦೩

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೦೩

NOT TO BE REPUBLISHED @KTBS

## ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

NOT TO BE REPUBLISHED ©KTBS

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

© KTBS NOT TO BE REPUBLISHED

**(ಶ್ರೀಮತಿ ಪ್ರೇಮಾ ಹೆಚ್.ಎಂ.)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೦೩

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೦೩

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭–೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲುಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

©KTBS NOT TO BE REPUBLISHED

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ

ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಶ್ರೀಮತಿ ಪ್ರೇಮಾ ಹೆಚ್.ಎಂ.**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೦೩

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

@KTBS NOT TO BE REPUBLISHED

### ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ–೧.

**ಸಲಹೆಗಾರರು :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೦೩.

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೦೩.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೦೩.

# ಮುನ್ನುಡಿ

೨೦೨೩–೨೪ನೇ ಸಾಲಿನಲ್ಲಿ ಜಾರಿಯಲ್ಲಿರುವ ಒಂದರಿಂದ ಹತ್ತನೇ ತರಗತಿಯವರೆಗಿನ ಕನ್ನಡ ಭಾಷಾ ಪಠ್ಯಪುಸ್ತಕಗಳು ಮತ್ತು ಆರರಿಂದ ಹತ್ತನೇ ತರಗತಿಯವರೆಗಿನ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದಕ್ಕಾಗಿ ವಿಷಯ ತಜ್ಞರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವವರು ಸದಸ್ಯರಾಗಿದ್ದ ಐದು ಸಮಿತಿಗಳನ್ನು ರಚಿಸಿ, ಸರ್ಕಾರವು ಆದೇಶವನ್ನು ಹೊರಡಿಸಿತು. ಈ ಸಮಿತಿಗಳು ಮೂರು ತಿಂಗಳಿಗೂ ಹೆಚ್ಚು ಕಾಲ ಪರಿಷ್ಕರಣೆಯ ಕಾರ್ಯವನ್ನು ನೆರವೇರಿಸಿದೆ. ಪ್ರಸ್ತುತ ಪರಿಷ್ಕರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಲು ಬಯಸುತ್ತೇವೆ.

೧. ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳು ಮತ್ತು ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗದಂತೆ, ಪರಿಷ್ಕರಣೆಗೆ ಒಳಪಟ್ಟ ಪಠ್ಯಪುಸ್ತಕಗಳ ಮೂಲ ಸ್ವರೂಪ ಬದಲಾಗದಂತೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿರಿಸಿಕೊಂಡು ಈ ಪರಿಷ್ಕರಣೆಯನ್ನು ನಡೆಸಲಾಗಿದೆ.

೨. ಪ್ರಸ್ತುತ ಪರಿಷ್ಕರಣ ಸಮಿತಿಗೆ ಪೂರ್ವದಲ್ಲಿಯೇ ಶಾಲಾ ಶಿಕ್ಷಣ ಇಲಾಖೆಯು ಹೊರಡಿಸಿದ್ದ "೨೦೨೩–೨೪ನೇ ಸಾಲಿನ ಪಠ್ಯಪುಸ್ತಕಗಳ 'ತಿದ್ದೋಲೆ'ಯನ್ನು ಸಮಿತಿಯು ಅಳವಡಿಸಿಕೊಂಡಿದೆ.

೩. ವಿವಿಧ ಸಂಘಟನೆಗಳು, ವ್ಯಕ್ತಿಗಳು ಹಾಗೂ ಸರ್ಕಾರದ ಇಲಾಖೆಗಳು ಪಠ್ಯಪುಸ್ತಕದಲ್ಲಿ ನಿರ್ದಿಷ್ಟ ವಿಷಯಾಂಶವನ್ನು ಅಳವಡಿಸುವ/ಕೈಬಿಡುವ/ಪರಿಷ್ಕರಿಸುವ ಕುರಿತು ಮಾಡಿದ ಎಲ್ಲಾ ಮನವಿಗಳನ್ನು ಪರಿಶೀಲಿಸಿ ಸೂಕ್ತವೆನಿಸಿದ ಸಲಹೆಗಳನ್ನು ಅಳವಡಿಸಿಕೊಳ್ಳಲಾಗಿದೆ.

೪. ವಿವಿಧ ವ್ಯಕ್ತಿಗಳು, ಸಂಘಟನೆಗಳು ಸ್ವಯಂ ಪ್ರೇರಣೆಯಿಂದ ಅಪಾರ ಶ್ರಮ ಹಾಗೂ ವ್ಯವಧಾನದಿಂದ ಪಠ್ಯಪುಸ್ತಕಗಳಲ್ಲಿರುವ ವಿಸಂಗತಿ, ಆಶಯ ದೋಷ ಹಾಗೂ ಅಪಕಲ್ಪನೆಗಳನ್ನು ಜಾಲತಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚಿಸಿದ್ದವು. ಈ ಬಹುತೇಕ ಎಲ್ಲಾ ಬರೆಹಗಳನ್ನು ಗಮನಿಸಿ, ಚರ್ಚಿಸಿ ಸೂಕ್ತ ಪರಿಷ್ಕರಣೆಯನ್ನು ಮಾಡಲಾಗಿದೆ.

೫. ನಿರ್ದಿಷ್ಟ ಪಠ್ಯಗಳನ್ನು ಬೋಧಿಸುವ ಶಿಕ್ಷಕರಿಂದ ಪಡೆದುಕೊಂಡ ಅಭಿಪ್ರಾಯಗಳು ಸಹ ಪ್ರಸ್ತುತ ಪರಿಷ್ಕರಣೆಯಲ್ಲಿ ಅಪಾರ ನೆರವು ನೀಡಿವೆ.

NOT TO BE REPUBLISHED ©KTBS

ವಿಷಯಾಂಶಗಳಿಗೆ ಸಂಬಂಧಿಸಿದ ಪರಿಷ್ಕರಣೆಯೊಂದಿಗೆ ಪಠ್ಯಪುಸ್ತಕಗಳಲ್ಲಿರುವ ಎಲ್ಲಾ ಬಗೆಯ ಅಂಕಿ ಅಂಶಗಳು, ಮಾಹಿತಿಗಳು ಮತ್ತು ನಕ್ಷೆಗಳನ್ನು ಈ ಪರಿಷ್ಕರಣೆಯ ಹೊತ್ತಿಗೆ ಲಭ್ಯವಿರುವ ಮಾಹಿತಿಗಳನ್ನು ಒಳಗೊಳ್ಳುವಂತೆ ನವೀಕರಿಸಲಾಗಿದೆ.

ಮಕ್ಕಳ ಪಠ್ಯಪುಸ್ತಕದ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಎಲ್ಲಾ ಪಠ್ಯಪುಸ್ತಕಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎರಡು ಸಂಪುಟಗಳಾಗಿ ವಿಭಾಗಿಸುವ ಸರ್ಕಾರದ ನಿರ್ಣಯಕ್ಕೆ ಅನುಸಾರವಾಗಿ, ಎರಡೂ ಸಂಪುಟಗಳಲ್ಲಿನ ಕಲಿಕಾಂಶಗಳು/ಪಾಠಗಳು ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ವ್ಯವಸ್ಥಿತವಾಗಿ ಅಳವಡಿಸಲಾಗಿದೆ.

ಈ ಪರಿಷ್ಕರಣಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ಲುಪ್ತವಾಗಿ ಕಾರ್ಯನಿರ್ವಹಿಸಿದ ಐದೂ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಅದರಲ್ಲೂ ಪಠ್ಯ ಬೋಧನೆಯ ತಮ್ಮ ಅನುಭವವನ್ನು ಪರಿಷ್ಕರಣೆಯಲ್ಲಿ ಧಾರೆಯೆರೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಪಠ್ಯಪುಸ್ತಕಗಳ ಕುರಿತು ತುಂಬ ಕಳಕಳಿಯಿಂದ ಗಂಭೀರ ಅಧ್ಯಯನ ನಡೆಸಿ ಬರೆಹಗಳನ್ನು ಪ್ರಕಟಿಸಿದ ವ್ಯಕ್ತಿಗಳು, ಸಂಘಟನೆಗಳು ಮಾಡಿದ ಶೋಧಗಳು ಪ್ರಸ್ತುತ ಪರಿಷ್ಕರಣೆಯ ಕಾರ್ಯಕ್ಕೆ ತುಂಬಾ ಸಹಾಯ ಮಾಡಿವೆ. ಅಂತಹ ಎಲ್ಲಾ ಸ್ಪಂದನೆಗಳಿಗೂ ನಾವು ಕೃತಜ್ಞರಾಗಿದ್ದೇವೆ.

ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ ಇಲಾಖಾ ಅಧಿಕಾರಿಗಳು ಮತ್ತು ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೂ, ಸಿಬ್ಬಂದಿಗಳಿಗೂ ವಂದನೆಗಳು.

**ಶ್ರೀಮತಿ ಪ್ರೇಮಾ ಹೆಚ್.ಎಂ.**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.)

**ಡಾ ಎಂ. ಜಿ. ಹೆಗಡೆ**
ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ, ಬೆಂಗಳೂರು

## ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ–2024

**ಮುಖ್ಯ ಸಂಯೋಜಕರು :**

**ಡಾ. ಮಂಜುನಾಥ ಜಿ. ಹೆಗಡೆ,** 'ಅಹಲ್ಯ', ಚಿತ್ರಗಿ ಗ್ರಾಮ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಅಧ್ಯಕ್ಷರು:**

**ಡಾ. ಅಂಜನಪ್ಪ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ತುಂಗಾ ಮಹಾವಿದ್ಯಾಲಯ, ಆನಂದಗಿರಿ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

**ಸದಸ್ಯರು:**

**ಡಾ. ಬಿ.ಸಿ. ನಾಗೇಂದ್ರ ಕುಮಾರ್,** ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು.

**ಶ್ರೀ ಚಿಕ್ಕದೇವೇಗೌಡ,** ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಅಗರ, ಕನಕಪುರ ರಸ್ತೆ, ಬೆಂಗಳೂರು.

**ಶ್ರೀ ಅಜಮೀರ ನಂದಾಪುರ,** ಮುಖ್ಯೋಪಾಧ್ಯಾಯರು, ಜನತಾ ಸೇವಾ ಅನುದಾನಿತ ಕನ್ನಡ ಮಾಧ್ಯಮ ಪ್ರೌಢ ಶಾಲೆ, ಗಂಗಾವತಿ, ಕೊಪ್ಪಳ ಜಿಲ್ಲೆ.

**ಶ್ರೀ ನರಸಿಂಹಮೂರ್ತಿ ಬಿ.ಕೆ.,** ಸ.ಶಿ., ಕರ್ನಾಟಕ ಪಬ್ಲಿಕ್ ಶಾಲೆ, ಸಾರಕ್ಕಿ, ಬೆಂಗಳೂರು.

**ಶ್ರೀಮತಿ ಸುಶೀಲಾ,** ಸ.ಶಿ., ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ), ಮದ್ದೂರು, ಮಂಡ್ಯ ಜಿಲ್ಲೆ.

**ಶ್ರೀ ವಿಶ್ವನಾಥ್ ಜಿ.ಎಸ್.,** ಸ.ಶಿ., ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧಿ, ನಗರ್ತಪೇಟೆ, ಬೆಂಗಳೂರು.

**ಶ್ರೀಮತಿ ನೇತ್ರಾವತಿ ಎಂ. ಎಸ್.,** ಸ.ಶಿ., ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಭುವನೇಶ್ವರಿನಗರ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

@KTBS NOT TO BE REPUBLISHED

# ಪರಿವಿಡಿ

S6Q6E7

## ಗದ್ಯಭಾಗ


| ಕ್ರಮ ಸಂಖ್ಯೆ | ಪಾಠದ ಶೀರ್ಷಿಕೆಗಳು | ಕೃತಿಕಾರರು | ಪುಟ ಸಂಖ್ಯೆ |
|---|---|---|---|
| ೧. | ದೊಡ್ಡವರ ದಾರಿ | ಬೆ.ಗೋ. ರಮೇಶ್ | ೧ |
| ೨. | ಗಂಧರ್ವಸೇನ ! | ಸಮಿತಿ ರಚನೆ | ೧೨ |
| ೩. | ಕೃಷ್ಣ – ಸುಧಾಮ (ನಾಟಕ) | ವಿ.ಎಸ್. ಶಿರಹಟ್ಟಿಮಠ | ೨೦ |
| ೪. | ಡಾ. ರಾಜಕುಮಾರ್ | ಡಾ. ಎಚ್.ಎಸ್. ಸತ್ಯನಾರಾಯಣ | ೩೨ |
| | **ಪದ್ಯ ಭಾಗ** | | |
| ೧. | ಬೇಸಿಗೆ | ಬಿ. ಆರ್. ಲಕ್ಷ್ಮಣರಾವ್ | ೪೧ |
| ೨. | ಮಂಗಳ ಗ್ರಹದಲ್ಲಿ ಪುಟ್ಟಿ | ಸಿ.ಎಂ. ಗೋವಿಂದರೆಡ್ಡಿ | ೪೭ |
| ೩. | ನೀ ಹೋದ ಮರುದಿನ | ಚೆನ್ನಣ್ಣ ವಾಲೀಕಾರ | ೫೫ |
| ೪. | ಮಗು ಮತ್ತು ಹಣ್ಣುಗಳು | ಎಚ್. ಎಸ್. ಶಿವಪ್ರಕಾಶ್ | ೬೦ |
| | **ಪೂರಕ ಪಾಠಗಳು** | | |
| ೧. | ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್ (ಗದ್ಯ) | ಸಮಿತಿ ರಚನೆ | ೬೫ |
| ೨. | ಅವ್ವ (ಪದ್ಯ) | ಲಲಿತಾ. ಕೆ. ಹೊಸಪ್ಯಾಟಿ | ೬೭ |


@KTBS NOT TO BE REPUBLISHED

## ಗದ್ಯ ಭಾಗ

# ೧. ದೊಡ್ಡವರ ದಾರಿ

X9G4K7

– ಬೆ.ಗೋ. ರಮೇಶ್

**ಪ್ರವೇಶ :** ಪ್ರತಿಯೊಬ್ಬರ ಜೀವನದಲ್ಲಿಯೂ ಹಲವಾರು ಮರೆಯಲಾಗದ ಘಟನೆಗಳು ನಡೆಯುತ್ತವೆ. ಅವುಗಳ ಫಲ ಒಮ್ಮೆ ಸಿಹಿ, ಮತ್ತೊಮ್ಮೆ ಕಹಿ. ಕೆಲವು ಘಟನೆಗಳು ಇತರರಿಗೆ ಎಷ್ಟೋ ಅನುಭವ, ಜೀವನ ಪಾಠಗಳನ್ನು ಕಲಿಸಿದ್ದಿವೆ. ಅದರಿಂದ ಮನುಷ್ಯ ಎಚ್ಚರವಾದದ್ದೂ ಇದೆ. ದಾರ್ಶನಿಕರ ಜೀವನದಲ್ಲಿ ನಡೆದ ಘಟನೆಗಳು ದಾರಿದೀಪಗಳಾಗಿ ಇತರರಿಗೆ ಬೆಳಕು ನೀಡುತ್ತವೆ. ಅಂಥವರ ಜೀವನದಲ್ಲಿನ ಘಟನೆಗಳನ್ನು ನಮ್ಮ ಜೀವನದ ಬೆಳಕಿನ ಕಿರಣಗಳನ್ನಾಗಿಸಿಕೊಳ್ಳಬೇಕೆಂಬುದು ಇಲ್ಲಿನ ಆಶಯವಾಗಿದೆ.

### ಡಾ. ರಾಜೇಂದ್ರ ಪ್ರಸಾದ್



ಡಾ. ರಾಜೇಂದ್ರ ಪ್ರಸಾದರು ಭಾರತದ ಪ್ರಥಮ ರಾಷ್ಟ್ರಪತಿಗಳು. ಅತ್ಯಂತ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನ ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿಸದೃಶ ಜೀವನ. ಅವರು ಕೋಪವನ್ನು ಹತ್ತಿಕ್ಕಬಲ್ಲವರಾಗಿದ್ದರು. ಬಾಳಿನಲ್ಲಿ ಶಿಸ್ತು, ಸಂಯಮ, ಸಮಯಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.

ಒಂದು ದಿನ ಕಚೇರಿಯ ಕೆಲಸ ಮುಗಿಸಿ ರಾಜೇಂದ್ರ ಪ್ರಸಾದರು ಮನೆಗೆ ಬಂದಾಗ ಅವರ ಒಂದು ಪುಸ್ತಕದ ಹಲವು ಪುಟಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿರುವುದನ್ನು ನೋಡಿದರು. ಇದೆಲ್ಲ ಮಕ್ಕಳ ಕೆಲಸ ಎಂಬುದು ಅವರಿಗೆ ಹೊಳೆಯಲು ಹೆಚ್ಚು ವೇಳೆ ಬೇಕಾಗಲಿಲ್ಲ. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು. ಆದರೆ ಆ ಮಕ್ಕಳನ್ನು ಅಪರಾಧಿಗಳಾಗಿಸಲು ಅವರ ಮನ ಒಪ್ಪಲಿಲ್ಲ. ಒಂದು ಉಪಾಯ ಹೂಡಿದರು.


ಪ್ರಸಾದರು ಮುಖ ಕೈಕಾಲು ತೊಳೆದು ಬಂದರು. ನಿಧಾನವಾಗಿ ಕೋಣೆಯಲ್ಲಿ ಹರಿದು ಬಿದ್ದಿದ್ದ ಪುಸ್ತಕದ ಪುಟಗಳನ್ನು ಒಂದೊಂದಾಗಿ ಎತ್ತಿ ಮೇಜಿನ ಮೇಲಿಟ್ಟರು. ಬಳಿಕ ಮಕ್ಕಳನ್ನೆಲ್ಲ ಬಳಿಗೆ ಕರೆದರು. ಮಕ್ಕಳು ಓಡೋಡಿ ಬಂದರು. ರಾಜೇಂದ್ರ ಪ್ರಸಾದರು "ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದು ಹೋಗಿವೆ. ಇವೆಲ್ಲ ಪುಸ್ತಕದ ಪುಟಗಳು. ನಿಮ್ಮಲ್ಲಿ ಯಾರು ಯಾರು ಎಷ್ಟೆಷ್ಟು ಪುಟಗಳನ್ನು ಹರಿದಿದ್ದೀರೊ ಅವರಿಗೆ ಆ ಪುಟಗಳ ಸಂಖ್ಯೆಗನುಗುಣವಾಗಿ ಕಾಸು ಕೊಡುತ್ತೇನೆ. ಆಗಬಹುದೆ?" ಎಂದರು.

© KTBS NOT TO BE REPUBLISHED

ಮಕ್ಕಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಒಬ್ಬೊಬ್ಬರು ಕಾಸು ಸಿಗುವುದಲ್ಲ ಎಂಬ ಸಂತೋಷದಿಂದ ತಾವು ಹರಿದ ಪುಟಗಳ ಸಂಖ್ಯೆಯನ್ನು ತಿಳಿಸಿದರು. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ಕಾಸು ಕೊಟ್ಟರು. ಹುಡುಗರಿಗೆ ಖುಷಿಯೋ ಖುಷಿ! ಆಗ ಪ್ರಸಾದರು "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ. ನಮ್ಮ ತಿಳಿವಳಿಕೆಯನ್ನು ಹೆಚ್ಚಿಸುವ ಆಕರಗಳು. ಪುಸ್ತಕದ ಪುಟಗಳನ್ನು ಹರಿದು ಹಾಕುವುದು ಒಳ್ಳೆಯ ಅಭ್ಯಾಸವಲ್ಲ. ತಿಳಿಯಿತೆ?" ಎಂದು ಮಕ್ಕಳಿಗೆ ತಿಳಿಯುವಂತೆ ಹೇಳಿದರು.

ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಯಿತು. ಅವರೆಲ್ಲ ರಾಜೇಂದ್ರರಿಗೆ, "ತಾತಾ ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ. ಜೋಪಾನ ಮಾಡುತ್ತೇವೆ" ಎಂದು ಪ್ರಮಾಣಮಾಡಿ ಹೇಳಿದರು. ಪ್ರಸಾದರಿಗೆ ಸಮಾಧಾನವಾಯಿತು. ಮಕ್ಕಳಲ್ಲಿ ಅಪರಾಧಿ ಮನೋಭಾವ ಮೂಡಲಿಲ್ಲ. ದೊಡ್ಡ ವ್ಯಕ್ತಿಗಳೇ ಹಾಗೆ. ಕೋಪ, ಅಸಹನೆ, ತಾಳ್ಮೆಗೆಡುವುದು ಇವೆಲ್ಲ ಅವರಿಂದ ದೂರ. ಪ್ರಗತಿಯ ಗುಟ್ಟೇ ಅದು.

## ಡಾ. ಜಾಕಿರ್ ಹುಸೇನ್



ಡಾ. ಜಾಕಿರ್ ಹುಸೇನರು ಭಾರತೀಯ ಶಿಕ್ಷಣದ ಅಭಿವೃದ್ಧಿ ಹಾಗೂ ಸುಧಾರಣೆ ಕುರಿತಂತೆ ಹಲವು ಪುಸ್ತಕಗಳನ್ನು ಬರೆದವರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಿಹಾರದ ರಾಜ್ಯಪಾಲರಾಗಿ, ಭಾರತದ ಉಪರಾಷ್ಟ್ರಪತಿಗಳಾಗಿ, ಅನಂತರ ರಾಷ್ಟ್ರಪತಿಗಳಾಗಿ ದುಡಿದವರು. ಕೆಲಕಾಲ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಶಿಕ್ಷಣ ಅವರ ಪ್ರಮುಖ ಕಾರ್ಯಕ್ಷೇತ್ರವಾಗಿತ್ತು.

ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ ಉನ್ನತ ಶಿಕ್ಷಣಕ್ಕೆ ಹೆಸರಾದ ಸಂಸ್ಥೆ. ಅದರ ಸ್ಥಾಪಕರು ಡಾ. ಜಾಕಿರ್ ಹುಸೇನರು. ಅವರು ತಮ್ಮ ಜೀವನದ ಬಹುಭಾಗವನ್ನು ಆ ವಿಶ್ವವಿದ್ಯಾಲಯದಲ್ಲಿಯೇ ಕಳೆದರೆನ್ನಬಹುದು. ಅಲ್ಲಿನ ಒಂದು ಘಟನೆ ತುಂಬಾ ರೋಚಕವಾಗಿದೆ.

ಡಾ. ಜಾಕಿರ್ ಹುಸೇನರು ಶಿಸ್ತು ಮತ್ತು ಶುಚಿಗೆ ಅಪಾರ ಮಹತ್ವ ನೀಡುತ್ತಿದ್ದರು. ಎಲ್ಲ ವಿದ್ಯಾರ್ಥಿಗಳೂ ಪ್ರತಿನಿತ್ಯ ಶುಚಿಯಾದ ಬಟ್ಟೆಗಳನ್ನು ಧರಿಸಿ ಕಾಲೇಜಿಗೆ ಬರಬೇಕು ಹಾಗೂ ಕಾಲಿಗೆ ಹಾಕಿದ ಬೂಟುಗಳನ್ನು ಚೆನ್ನಾಗಿ ಪಾಲಿಶ್ ಮಾಡಿರಬೇಕು ಎಂದು ಹೇಳುತ್ತಿದ್ದರು. ಆದರೆ ಎಷ್ಟೋ ವಿದ್ಯಾರ್ಥಿಗಳು ಜಾಕಿರ್ ಹುಸೇನರು ಹೇಳಿದುದನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ. ಇದರಿಂದ ಶಿಸ್ತಿಗೆ ಭಂಗವಾಗುವುದೆಂದು ಹುಸೇನರು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಿಗೆ ಬುದ್ಧಿಕಲಿಸಲು ತಾವೇ ಒಂದು ದಾರಿ ಕಂಡುಕೊಂಡರು.

ಒಂದು ದಿನ ವಿಶ್ವವಿದ್ಯಾಲಯದ ಪ್ರವೇಶದ್ವಾರದಲ್ಲಿ ಜಾಕಿರ್ ಹುಸೇನರು ಒಬ್ಬ ಬೂಟ್‌ಪಾಲಿಶ್ ಹಾಕುವವನ ವೇಷದಲ್ಲಿ ಕುಳಿತಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂತು.

©KTBS NOT TO BE REPUBLISHED

ಕುಲಪತಿಗಳು ಕೈಯಲ್ಲಿ ಪಾಲಿಶ್ ಡಬ್ಬಿ, ಬ್ರಷ್ ಹಿಡಿದು ಕುಳಿತಿದ್ದ ದೃಶ್ಯ ಕಂಡ ವಿದ್ಯಾರ್ಥಿಗಳು ತಮ್ಮ ವರ್ತನೆಗೆ ನಾಚಿದರು. ಒಂದಿಬ್ಬರು ಪಾಲಿಶ್ ಹಾಕಿಸಿಕೊಂಡೂ ಆಗಿತ್ತು.

ಅಂದಿನಿಂದ ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಧರಿಸಿಕೊಂಡು, ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು. ಇದು ವಿದ್ಯಾರ್ಥಿಗಳ ಬಾಳಿನಲ್ಲಿ ಶಿಸ್ತು ಬೆಳೆಸಿಕೊಳ್ಳಲು ನೆರವಾಯಿತು.

"ಶಿಸ್ತು ಮೂಡಿಸಿಕೊಳ್ಳಿ" ಇದು ಜಾಕಿರ್ ಹುಸೇನರ ಆದೇಶವಾಗಿತ್ತು.

**ಕೌಶಲ : ಮಾತನಾಡುವುದು.**

**ಸಾಮರ್ಥ್ಯ : ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿಖರವಾಗಿ ಮಾತನಾಡುವುದು.**

**ಕವಿ ಕೃತಿ ಪರಿಚಯ:**



**ಬೆ. ಗೋ. ರಮೇಶ್** ಅವರು **೧೯೪೫ ರ ಆಗಸ್ಟ್ ೨೨** ರಂದು **ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ದೊಡ್ಡಹನಸೋಗೆ ಗ್ರಾಮದಲ್ಲಿ** ಜನ್ಮಿಸಿದರು. ತಂದೆ ಬಿ.ಎಸ್. ಗೋವಿಂದರಾಜು, ತಾಯಿ ರಾಧಮ್ಮ.

ರಮೇಶ್ ಬಿ.ಇ. ಪದವೀಧರರಾಗಿ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆಸಲ್ಲಿಸಿ ನಿವೃತ್ತರಾಗಿರುವರು. ಪ್ರವೃತ್ತಿಯಿಂದ ಸಾಹಿತಿಗಳಾಗಿರುವ ಇವರು ಉತ್ತಮ ಭಾಷಾಂತರಕಾರರೂ ಗಮಕಿಗಳೂ ಆಗಿರುವರು. ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವರು, ಕನ್ನಡದಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ಐನೂರು ಪುಸ್ತಕಗಳನ್ನು ರಚಿಸಿರುವರು. ಜೀವನಚರಿತ್ರೆ, ವ್ಯಕ್ತಿ ಚಿತ್ರಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. **ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ಕನ್ನಡ ಕವಿರತ್ನತ್ರಯರು, ವಿಜ್ಞಾನಿಗಳ ಹಾಗೂ ದೇಶಭಕ್ತರ ಜೀವನ ಚರಿತ್ರೆಗಳು** ಇವರ ಗಮನಾರ್ಹ ಕೃತಿಗಳು.

**'ಶಾಂತಿಪ್ರಿಯ'** ಅಂಕಿತದಲ್ಲಿ ಇವರು ರಚಿಸಿದ ಆರುನೂರು ವಚನಗಳ ಸಂಕಲನ **'ವಚನಸಾಗರ'** ಕೃತಿಗೆ ವಚನ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿರುತ್ತದೆ. **ಸರ್ ಎಂ.ವಿ.ರವರ ಪ್ರಶಸ್ತಿ, ಡೆಪ್ಯುಟಿ ಚನ್ನಬಸಪ್ಪ ರಾಜ್ಯ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳು ಸಂದಿವೆ.

ಪ್ರಸ್ತುತ ಪದ್ಯಭಾಗವನ್ನು ಇವರ **"ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ಘಟನೆ"** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

© KTBS NOT TO BE REPUBLISHED

## ಪದಗಳ ಅರ್ಥ

ರಾಷ್ಟ್ರಪತಿ–ರಾಷ್ಟ್ರಾಧ್ಯಕ್ಷ, ರಾಷ್ಟ್ರದ ಪ್ರಥಮ ಪ್ರಜೆ. ಉನ್ನತ–ಎತ್ತರವಾದ, ಮೇಲಾದ. ಹತ್ತಿಕ್ಕು–ಅಡಗಿಸು, ದಮನಮಾಡು. ಚೆಲ್ಲಾಪಿಲ್ಲಿ–ಅಸ್ತವ್ಯಸ್ತ, ಚೆದುರು. ಅನುಗುಣ–ಅನುಸಾರ, ಹೊಂದಿಕೊಂಡು. ಆಕರ–ಮೂಲ ಆಧಾರ. ಮನೋಭಾವ–ಮನಸ್ಸಿನಭಾವನೆ. ದೌರ್ಬಲ್ಯ–ಬಲಹೀನತೆ. ಭಂಗ–ಸೋಲು, ವೈಫಲ್ಯ. ವರ್ತನೆ– ನಡತೆ, ರೀತಿ. ಆದೇಶ–ಆಜ್ಞೆ, ಅಪ್ಪಣೆ. ಸದೃಶ–ಹೋಲುವ, ಸಾಟಿಯಾದ. ಸಂಯಮ–ಹತೋಟಿ, ನಿಯಂತ್ರಣ. ಅಪರಾಧಿ–ತಪ್ಪುಮಾಡಿದವನು. ಭಂಡಾರ–ಬೊಕ್ಕಸ, ಖಜಾನೆ. ಜೋಪಾನ–ರಕ್ಷಣೆ, ಜತನ. ಪ್ರಗತಿ–ಮುನ್ನಡೆ, ಅಭಿವೃದ್ಧಿ. ರೋಚಕ–ಕುತೂಹಲಕಾರಿ, ಸೋಜಿಗದಾಯಕ. ಪ್ರವೇಶದ್ವಾರ–ಒಳಹೋಗುವ ಮುಖ್ಯ ಬಾಗಿಲು. ನೀಟಾಗಿ–ಅಂದವಾಗಿ, ಸೊಗಸಾಗಿ.

### ವಿವರ ತಿಳಿಯಿರಿ:

**ಜನಕ ಮಹಾರಾಜ** : ಮಿಥಿಲೆಯ ರಾಜ, ಸೀತೆಯ ತಂದೆ.

**ತಾಳ್ಮೆಗೆಡು** : ಸಹನೆ ಕಳೆದುಕೊಳ್ಳು, ಕೋಪಕ್ಕೆ ಒಳಗಾಗು.

**ಸಂಸ್ಕೃತಿ** : ದೇಶದ ನಾಗರಿಕತೆಯ ಸಾರ.

**ರಾಜ್ಯಪಾಲ** : ರಾಜ್ಯದ ಮುಖ್ಯಸ್ಥ, ರಾಜ್ಯದ ಪ್ರಥಮ ಪ್ರಜೆ.

**ವಿಶ್ವವಿದ್ಯಾಲಯ** : ಉನ್ನತ ವಿದ್ಯಾಭ್ಯಾಸ ನೀಡುವ ಸಂಸ್ಥೆ.

**ಕುಲಪತಿ** : ವಿಶ್ವವಿದ್ಯಾಲಯದ ಮುಖ್ಯಸ್ಥ.

**ಕಾರ್ಯಕ್ಷೇತ್ರ** : ಕಾರ್ಯರಂಗ, ಕೆಲಸ ನಿರ್ವಹಿಸುವ ವಲಯದ ವ್ಯಾಪ್ತಿ.

**ಪಾಲಿಶ್** : ಹೊಳಪು ಬರುವಂತೆ ಮಾಡುವಿಕೆ.

**ಬುದ್ಧಿಕಲಿಸು** : ತಿಳಿವಳಿಕೆಯನ್ನುಂಟುಮಾಡು, ಸರಿದಾರಿಗೆ ತರು.

©KTBS NOT TO BE REPUBLISHED

## ಅಭ್ಯಾಸಗಳು

**ಅ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ಬಿಟ್ಟಸ್ಥಳ ಭರ್ತಿಮಾಡಿರಿ.**

೧. ಮಕ್ಕಳಿಗೆ ತಮ್ಮ________________ಅರಿವಾಗಬೇಕು ಎಂದೆನಿಸಿತು.

೨. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ____________ ಕೊಟ್ಟರು.

೩. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು ___________ಕಂಡುಕೊಂಡರು.

೪. ಒಂದಿಬ್ಬರು ________________ಹಾಕಿಸಿಕೊಂಡೂ ಆಗಿತ್ತು.

(ಪಾಲಿಶ್, ಕಾಸು, ಕಾಗದದ ಚೂರು, ತಪ್ಪಿನ, ದಾರಿ)

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ರಾಷ್ಟ್ರಪತಿ ೨. ಕಾಸು ೩. ಶಿಸ್ತು ೪. ದಾರಿ

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?

೨. ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಏನನ್ನು ಕೊಟ್ಟರು?

೩. ಯಾವುದು ಒಳ್ಳೆಯ ಅಭ್ಯಾಸವಲ್ಲ ಎಂದು ಪ್ರಸಾದರು ಮಕ್ಕಳಿಗೆ ಹೇಳಿದರು?

೪. ಜಾಮಿಯಾ ಮಿಲಿಯಾ ಎಲ್ಲಿದೆ?

೫. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದರು?

© KTBS NOT TO BE REPUBLISHED

**ಈ. ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು?**

೧. "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ."

೨. "ತಾತಾ, ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ."

**ಉ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿರಿ.

೨. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್‌ಹುಸೇನ್ ಏನು ಮಾಡಿದರು?

## ವ್ಯಾಕರಣ ಮಾಹಿತಿ

### ವ್ಯಾಕರಣ

ಜಗತ್ತಿನಲ್ಲಿ ಮನುಷ್ಯರ ನಡುವಣ ವ್ಯವಹಾರಗಳು ಭಾಷೆಗಳ ಮೂಲಕ ನಡೆಯುತ್ತವೆ. ಅಂದರೆ ಪರಸ್ಪರ ಮಾತು ಮತ್ತು ಬರವಣಿಗೆಯಿಂದ ನಡೆಯುತ್ತವೆ. ನಮ್ಮ ಮನಸ್ಸಿನ ವಿಚಾರಗಳನ್ನು ಮಾತಿನ ಮೂಲಕ ಇನ್ನೊಬ್ಬರಿಗೆ ತಿಳಿಯಪಡಿಸಬಹುದು. ನಮ್ಮ ಮಾತುಗಳನ್ನು ಗೊತ್ತಾದ ಲಿಪಿಯ ಮೂಲಕ ದಾಖಲಿಸುವುದೇ ಬರವಣಿಗೆ. ಮಾತು ಮತ್ತು ಬರಹಗಳು ಭಾಷೆಯ ಎರಡು ರೂಪಗಳು.

**ಕನ್ನಡ ಅಕ್ಷರಮಾಲೆ**
**೪೯ ಅಕ್ಷರಗಳು**

- **ಸ್ವರಗಳು–೧೩**
  - ಹ್ರಸ್ವಸ್ವರ–೬ (೧ಮಾತ್ರೆಯ ಕಾಲ): ಅ ಇ ಉ ಋ ಎ ಒ
  - ದೀರ್ಘಸ್ವರ–೭ (೨ ಮಾತ್ರೆಯ ಕಾಲ): ಆ ಈ ಊ ಏ ಐ ಓ ಔ
- **ವ್ಯಂಜನಗಳು–೩೪**
  - ವರ್ಗೀಯ ವ್ಯಂಜನ–೨೫ ('ಕ್' ದಿಂದ 'ಮ್' ದವರೆಗೆ)
    - ಅಲ್ಪಪ್ರಾಣ–೧೦: ಕ್ ಚ್ ಟ್ ತ್ ಪ್ / ಗ್ ಜ್ ಡ್ ದ್ ಬ್
    - ಮಹಾಪ್ರಾಣ–೧೦: ಖ್ ಛ್ ಠ್ ಥ್ ಫ್ / ಘ್ ಝ್ ಢ್ ಧ್ ಭ್
    - ಅನುನಾಸಿಕ–೦೫: ಙ್ ಞ್ ಣ್ ನ್ ಮ್
  - ಅವರ್ಗೀಯ ವ್ಯಂಜನ– ೯ ('ಯ್'ದಿಂದ'ಳ' ದವರೆಗೆ): ಯ್ ರ್ ಲ್ ವ್ ಶ್ ಷ್ ಸ್ ಹ್ ಳ್
- **ಯೋಗವಾಹಗಳು–೨**
  - ಅನುಸ್ವಾರ(ಂ) ಅಂ
  - ವಿಸರ್ಗ(ಃ) ಅಃ

@KTBS NOT TO BE REPUBLISHED

**ಸ್ವರ, ವ್ಯಂಜನ, ಯೋಗವಾಹಗಳು ಸೇರಿ ಕನ್ನಡ ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ.**

ಬರೆಯುವುದೂ ಮಾತನಾಡುವುದೂ ಮುಖ್ಯವಾಗಿ ಶಬ್ದಗಳ ಮೂಲಕ ನಡೆಯುವ ಸಂಹವನ ಕ್ರಿಯೆ. ಒಂದೊಂದು ಶಬ್ದಕ್ಕೂ ಒಂದೊಂದು ಅರ್ಥವಿದೆ. ಶಬ್ದಗಳ ಉಚ್ಚಾರವಾಗಲಿ,

ಬರವಣಿಗೆಯಾಗಲಿ ಅರ್ಥಪೂರ್ಣವಾಗಿರಬೇಕು. ಮಾತನಾಡುವುದು, ಬರೆಯುವುದು ಸ್ಪಷ್ಟವಾಗಿರಬೇಕು; ಶಬ್ದ ಮತ್ತು ಶಬ್ದಗಳ ಸಂಬಂಧ ಹೀಗೆ ಇರಬೇಕೆಂಬುದನ್ನು ವ್ಯಾಕರಣ ಶಾಸ್ತ್ರವು ಗೊತ್ತುಪಡಿಸುವುದು. ಮನಸ್ಸಿಗೆ ಬಂದ ಹಾಗೆ ಭಾಷೆಯನ್ನು ಬಳಸುತ್ತ ಹೋದರೆ ಕಾಲಾನಂತರದಲ್ಲಿ ಭಾಷೆಯ ಸ್ವರೂಪವೇ ಹಾಳಾಗಿ ಹೋಗಬಹುದು. ಹೀಗಾಗಿ ಭಾಷೆಯನ್ನು ಸ್ಪಷ್ಟವಾಗಿ ಬಳಸುವ ಮೂಲಕ ನಾಡಿನ ಮಕ್ಕಳು ಸುಸಂಸ್ಕೃತರಾಗಬೇಕು.

ನಾವು ಆಡುವ ಮಾತುಗಳೆಲ್ಲ ವಾಕ್ಯದ ರೂಪದಲ್ಲಿರುತ್ತವೆ. ವಾಕ್ಯಗಳು ಪದಗಳಿಂದ ಕೂಡಿರುತ್ತವೆ. ಪದಗಳು ಅಕ್ಷರಗಳಿಂದ ಕೂಡಿರುತ್ತವೆ. ಕನ್ನಡ ಭಾಷೆಯಲ್ಲಿರುವ ೪೯ ಅಕ್ಷರಗಳ ಮಾಲೆಗೆ 'ಅಕ್ಷರಮಾಲೆ' ಅಥವಾ 'ವರ್ಣಮಾಲೆ' ಎನ್ನುತ್ತೇವೆ. ಹಿಂದಿನ ತರಗತಿಗಳಲ್ಲಿ ಸ್ವರ ಮತ್ತು ವ್ಯಂಜನಗಳ ಬಗೆಗೆ ಕೂಲಂಕಷವಾಗಿ ತಿಳಿದಿರುವಿರಿ.

**ಪ್ಲುತ ಸ್ವರಗಳು** : ಎರಡು ಮಾತ್ರಾ ಕಾಲಾವಧಿಗಿಂತ ಹೆಚ್ಚು ಕಾಲಾವಧಿಯಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ಪ್ಲುತ ಸ್ವರಗಳೆನ್ನುವರು. ಉದಾ: ಆSS ಓSS

**ಯೋಗವಾಹಗಳು**: ಸ್ವತಂತ್ರವಾಗಿ ಪ್ರಯೋಗಿಸಲಾಗದೆ, ಯಾವುದಾದರು ಸ್ವರದೊಂದಿಗೆ ಮಾತ್ರ ಪ್ರಯೋಗ ಮಾಡಬಹುದಾದ ಅಕ್ಷರಗಳೇ 'ಯೋಗವಾಹ'ಗಳು. ಯೋಗವಾಹ ಎಂದರೆ 'ಕೂಡಿಹೋಗು' ಎಂದರ್ಥ. ಕನ್ನಡ ವರ್ಣಮಾಲೆಯಲ್ಲಿ ಎರಡು ಯೋಗವಾಹಗಳು ಬಳಕೆಯಲ್ಲಿವೆ.

ಮೊದಲನೆಯದು–ಅನುಸ್ವಾರ/ಬಿಂದು (ಒಂದು ಸೊನ್ನೆ) (ಂ) ; ಎರಡನೆಯದು–ವಿಸರ್ಗ (ಎರಡು ಸೊನ್ನೆ) (ಃ).

@KTBS NOT TO BE REPUBLISHED

### ಅನುಸ್ವಾರವನ್ನು ಬಳಸುವ ರೀತಿ

**ಸ್ವರಗಳೊಡನೆ ಅನುಸ್ವಾರ:**

ಅಂ, ಇಂ, ಊಂ, ಔಂ, ಓಂ– ಹೀಗೆ ಸ್ವರದ ಮುಂದೆ ಅನುಸ್ವಾರ ಬಂದಾಗ 'ಮ್'ಕಾರಕ್ಕೆ ಸಮೀಪವಾದ ಉಚ್ಚಾರವು ಬರುತ್ತದೆ.

**ಪದಗಳ ಮಧ್ಯದಲ್ಲಿ ಅನುಸ್ವಾರ:**

ಉದಾ: ಅಂಕ, ಕಂದ, ಆಂಧ್ರ, ಕಾಂಚನ, ಇಂಗು, ಕಿಂಪುರುಷ, ಉಂಡೆ, ಕುಂಕುಮ, ಎಂದು, ಕೆಂಪು, ಒಂದು, ಕೊಂಚ, ಓಂಕಾರ, ಕೋಂಟೆ, ಕೌಂಗು, ಕೌಂತೇಯ.

ಕನ್ನಡದಲ್ಲಿ ಪದದ ಮಧ್ಯದಲ್ಲಿ ಬರುವ ಅನುನಾಸಿಕ ಮೂಲ ವ್ಯಂಜನಗಳ (ಅರ್ಧಾಕ್ಷರಗಳು– ಙ್, ಞ್, ಣ್, ನ್, ಮ್) ಬದಲು ಅನುಸ್ವಾರವನ್ನು ಬಳಸುತ್ತೇವೆ. ಅನುಸ್ವಾರದ ಮುಂದೆ ವರ್ಗೀಯ ವ್ಯಂಜನಗಳು ಬಂದರೆ ಆ ವ್ಯಂಜನವು ಯಾವ ವರ್ಗಕ್ಕೆ ಸೇರಿರುತ್ತದೆಯೋ ಅದೇ ವರ್ಗದ ಅನುನಾಸಿಕಾಕ್ಷರದ ಉಚ್ಚಾರವು ಬರುತ್ತದೆ. ಅನುಸ್ವಾರದ ಮುಂದೆ ಅವರ್ಗೀಯ ವ್ಯಂಜನಗಳು ಬಂದಾಗ 'ಮ್'ಕ್ಕೆ ಸಮೀಪವಾದ ಉಚ್ಚಾರವೇ ಬರುತ್ತದೆ.

ಉದಾ:

ಕಙ್ಕಣ = ಕಂಕಣ

ಕಞ್ಚು = ಕಂಚು

ಕಣ್ಠ = ಕಂಠ

ಕನ್ದ = ಕಂದ

ಕಮ್ಪು = ಕಂಪು

ಕಮ್ಸ = ಕಂಸ

**(ಇವನ್ನು ಕಮ್ಕಣ, ಕಮ್ಚು ........ಹೀಗೆ ಉಚ್ಚರಿಸಬಾರದು)**

## ವಿಸರ್ಗವನ್ನು ಬಳಸುವ ರೀತಿ

ವಿಸರ್ಗಗಳು ಬಂದಾಗ 'ಹ್' ಕಾರಕ್ಕೆ ಸಮೀಪವಾದ ಉಚ್ಚಾರವು ಬರುತ್ತದೆ.

**ಸ್ವರಗಳೊಡನೆ ವಿಸರ್ಗ:**

ಅಃ, ಓಃ, ಈಃ, ಉಃ.

**ಪದಗಳಲ್ಲಿ ವಿಸರ್ಗ:**

ದುಃಖ, ಪುನಃ, ಸ್ವತಃ, ನಮಃ.

ಅಚ್ಚ ಕನ್ನಡದಲ್ಲಿ ವಿಸರ್ಗವಿರುವ ಪದಗಳಿಲ್ಲ. (ಅನ್ಯದೇಶಿಯ ಪದಗಳನ್ನು ಹೊರತುಪಡಿಸಿ)

ಅನುಸ್ವಾರ ಮತ್ತು ವಿಸರ್ಗ ಎರಡನ್ನೂ (ಯೋಗವಾಹ) ಒಳಗೊಂಡಿರುವ ಪದಗಳಿಗೆ ಉದಾಹರಣೆ.

ಅಂತಃಪುರ, ದುಃಖದಿಂದ, ತೇಜಃಪುಂಜ.

## ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಗುಣಿತಾಕ್ಷರಗಳಾಗುವವು. ಈ ಗುಣಿತಾಕ್ಷರಗಳನ್ನು ರೂಢಿಯಲ್ಲಿ 'ಕಾಗುಣಿತ' ಎನ್ನುತ್ತಾರೆ. ಕಾಗುಣಿತ ಎಂದರೆ ಕ್+ಅ=ಕ, ಕ್+ಆ=ಕಾ, ಕ್+ಇ=ಕಿ, ಇತ್ಯಾದಿ. ಒಂದು ವ್ಯಂಜನಕ್ಕೆ ಒಂದು ಸ್ವರಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುವರು.

ಉದಾ : ಪ್+ಅ= ಪ ; ಸ್+ಆ=ಸಾ ; ಯ್+ಉ=ಯು ಇತ್ಯಾದಿ.

**'ಕ್'** ವ್ಯಂಜನಕ್ಕೆ ಹದಿಮೂರು ಸ್ವರಗಳು ಮತ್ತು ಎರಡು ಯೋಗವಾಹಗಳು ಸೇರಿದಾಗ 'ಕ ಕಾ ಕಿ ಕೀ----------' ಎಂಬ ಹದಿನೈದು ಗುಣಿತಾಕ್ಷರಗಳಾಗುತ್ತವೆ. ಗುಣಿತಾಕ್ಷರಗಳ ಒಂದು ಸಾಲಿಗೆ 'ಬಳ್ಳಿ' ಎಂದೂ ಕರೆಯುವರು.

@KTBS NOT TO BE REPUBLISHED

ವ್ಯಂಜನ+ಸ್ವರ=ಗುಣಿತಾಕ್ಷರ

ಗುಣಿತಾಕ್ಷರಗಳನ್ನು ಬರೆಯುವಾಗ ಸ್ವರಗಳ ಬದಲು ಅವುಗಳ ಚಿಹ್ನೆಗಳನ್ನು ಬಳಸುತ್ತೇವೆ.

| ಸ್ವರಗಳು | ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಂ |
|---|---|---|---|---|---|---|---|---|---|---|---|---|---|---|---|
| ಸ್ವರ ಸಂಜ್ಞೆಗಳು | ʼ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |

## ಸಂಯುಕ್ತಾಕ್ಷರ

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳಿಗೆ ಒಂದು ಸ್ವರಾಕ್ಷರವು ಸೇರಿದಾಗ ಸಂಯುಕ್ತಾಕ್ಷರವಾಗುವುದು.

ಇವುಗಳಲ್ಲಿ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳೆಂದು ಎರಡು ವಿಧಗಳಿವೆ.

ಸಜಾತೀಯ ಸಂಯುಕ್ತಾಕ್ಷರಗಳು – ಅಮ್ಮ, ಅಕ್ಕ, ಅಜ್ಜ, ಅಪ್ಪ ಇತ್ಯಾದಿ.

ವಿಜಾತೀಯ ಸಂಯುಕ್ತಾಕ್ಷರಗಳು – ಶಸ್ತ್ರ, ಅಸ್ತ್ರ, ಅಕ್ಷರ, ಪುಸ್ತಕ ಇತ್ಯಾದಿ.

ಸಂಯುಕ್ತಾಕ್ಷರಗಳನ್ನು ಒತ್ತಕ್ಷರಗಳೆಂದೂ ಕರೆಯುವರು.

©KTBS NOT TO BE REPUBLISHED

ಒತ್ತುಗಳು (ವ್ಯಂಜನ ಚಿಹ್ನೆಗಳು)

್ಕ ್ಖ ್ಗ ್ಘ ್ಙ

್ಚ ್ಛ ್ಜ ್ಝ ್ಞ

್ಟ ್ಠ ್ಡ ್ಢ ್ಣ

್ತ ್ಥ ್ದ ್ಧ ್ನ

್ಪ ್ಫ ್ಬ ್ಭ ್ಮ

್ಯ ್ರ ್ಲ ್ವ ್ಶ ್ಷ ್ಸ ್ಹ ್ಳ

ತ್, ನ್, ಮ್, ಯ್, ರ್, ಲ್, ಈ ವ್ಯಂಜನಗಳ ಚಿಹ್ನೆಗಳು ಮೂಲ ಅಕ್ಷರಗಳಿಗಿಂತ ಭಿನ್ನವಾಗಿರುವುದನ್ನು ಗಮನಿಸಿ. 'ರ್' ವ್ಯಂಜನಕ್ಕೆ ಎರಡು ಚಿಹ್ನೆಗಳಿದ್ದು, ಸಂಯುಕ್ತಾಕ್ಷರಗಳಲ್ಲಿ 'ರ್' ಮೊದಲು ಉಚ್ಚಾರವಾಗಬೇಕಾದ ಸಂದರ್ಭದಲ್ಲಿ ಅರ್ಕಾವತ್ತನ್ನು (ೱ) 'ರ್' ಕೊನೆಗೆ ಉಚ್ಚಾರವಾಗಬೇಕಾದ ಸಂದರ್ಭದಲ್ಲಿ 'ರ್' ಚಿಹ್ನೆ ( ್ರ )ಯನ್ನು ಬಳಸಬೇಕು.

ಉದಾ: ಅರ್ಧ, ಸೂರ್ಯ, ಸೂರ್ಯ, ವಕ್ರ. ಅಗ್ರ.

## ಅಭ್ಯಾಸ

### ಅ. ಆವರಣದಿಂದ ಸೂಕ್ತ ಪದ ಆರಿಸಿ ಖಾಲಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.

೧. ಕನ್ನಡ ವರ್ಣಮಾಲೆಯಲ್ಲಿ ..............ಅಕ್ಷರಗಳಿವೆ. (೪೮, ೪೯, ೫೨)

೨. ಹ್ರಸ್ವ ಸ್ವರಕ್ಕೆ ಉದಾಹರಣೆ..................... (ಇ, ಐ. ಓ)

೩. ಅನುಸ್ವಾರ, ವಿಸರ್ಗವನ್ನು ................ಕರೆಯುತ್ತಾರೆ. (ಸ್ವರ, ವ್ಯಂಜನ, ಯೋಗವಾಹ)

೪. ವ್ಯಂಜನಗಳಿಗೆ ಸ್ವರ ಸೇರಿ ಆಗುವ ಅಕ್ಷರಗಳನ್ನು ............................ಎನ್ನುವರು. (ಗುಣಿತಾಕ್ಷರ, ಸಂಯುಕ್ತಾಕ್ಷರ, ಮಹಾಪ್ರಾಣಾಕ್ಷರ)

೫. ವಿಜಾತೀಯ ಒತ್ತಕ್ಷರವುಳ್ಳ ಪದಕ್ಕೆ ಉದಾಹರಣೆ................. (ಹಗ್ಗ, ಶಕ್ತಿ, ಸುಣ್ಣ)

### ಆ. ಈ ಪದಗಳಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆಯಿರಿ.

**ಉದಾ:** ಸಹಾಯ: ಸ್+ಅ, ಹ್+ಆ, ಯ್+ಅ.

೧. ಆಭರಣ: ೨. ಅವಲಕ್ಕಿ: ೩. ಸಂಭ್ರಮ: ೪. ಪರಮಾಶ್ಚರ್ಯ:

@KTBS
NOT TO BE REPUBLISHED

## ಭಾಷಾ ಆಟಗಳು

### ಅ) ಚಿತ್ರ ನೋಡಿರಿ–ಮಾತನಾಡಿರಿ.

ಕೆಲವು ಸನ್ನಿವೇಶದ ಚಿತ್ರಗಳನ್ನು ಬೋರಲು ಹಾಕುವುದು. ವಿದ್ಯಾರ್ಥಿಯು ಒಂದನ್ನು ತೆಗೆದುಕೊಂಡು ಅವನಿಗೆ ಬಂದಿರುವ ಚಿತ್ರವನ್ನು ಗಮನಿಸಿ, ಅದರ ಕುರಿತಾಗಿ ಮಾತನಾಡಲು ಅವಕಾಶ ಕಲ್ಪಿಸುವುದು.

**ಉದಾಹರಣೆಗೆ:–**

- ಸಂತೆಯ ದೃಶ್ಯ
- ಶಾಲಾ ಸನ್ನಿವೇಶ
- ಕ್ರೀಡಾಂಗಣದಲ್ಲಿ ಆಟ ಆಡುತ್ತಿರುವುದು
- ಪರಿಸರ(ಅರಣ್ಯ) ಚಿತ್ರ
- ಮಳೆ ಬರುತ್ತಿರುವ ದೃಶ್ಯ
- ರಸ್ತೆಯ ಸನ್ನಿವೇಶ
- ರಾಷ್ಟ್ರೀಯ ಹಬ್ಬಗಳ ಆಚರಣೆ
- ಆಸ್ಪತ್ರೆಯ ದೃಶ್ಯ
- ಕಸುಬುದಾರರು ಕೆಲಸ ಮಾಡುತ್ತಿರುವುದು
- ಸಾಮೂಹಿಕ ಭೋಜನ

## ಯೋಜನೆ

- ಭಾರತದ ರಾಷ್ಟ್ರಪತಿಗಳ ಭಾವಚಿತ್ರ ಮತ್ತು ಅವರ ಕಿರು ಪರಿಚಯದ ಆಲ್ಬಂ ತಯಾರಿಸಿರಿ.
- ಒಂದೊಂದು ಘಟನೆಗೆ ಸಂಬಂಧಿಸಿದ ಒಂದೊಂದು ವಾಕ್ಯವನ್ನು ಒಂದೊಂದು ಪುಟದಲ್ಲಿ ಬರೆದು ಕ್ರಮವಾಗಿ ಜೋಡಿಸಿ ಕಿರುಪುಸ್ತಕ ತಯಾರಿಸಿರಿ.

## ಪೂರಕ ಓದು

- ದಾರ್ಶನಿಕರ ಜೀವನದ ಮಹತ್ವದ ಘಟನೆಗಳನ್ನು ಓದಿರಿ.
- ಅಪರೂಪದ ಸನ್ನಿವೇಶಗಳ ಕುರಿತಾದ ಮಾಹಿತಿಗಳನ್ನು ಓದಿರಿ.
- ವಿವಿಧ ಘಟನೆ ಹಾಗೂ ಅವುಗಳ ಪರಿಣಾಮಗಳನ್ನು ಓದಿ ತಿಳಿಯಿರಿ.

## ಶುಭ ನುಡಿ

- ಹಿರಿಯರ ಮಾತನ್ನು ಕೇಳು, ಶ್ರದ್ಧೆಯಿಂದ ಪಾಲಿಸು.
- ಕೆಲವು ಘಟನೆಗಳು ಜೀವನದ ದಿಕ್ಕನ್ನು ಬದಲಾಯಿಸುತ್ತವೆ.
- ಕಳೆದು ಹೋದುದರ ಬಗ್ಗೆ ಚಿಂತಿಸಬೇಡ, ಮುಂದಿನದನ್ನು ಯೋಚಿಸು.

* * * * *

@KTBS NOT TO BE REPUBLISHED

# ೨. ಗಂಧರ್ವಸೇನ!

M1W5U1

– ಸಮಿತಿ ರಚನೆ

**ಪ್ರವೇಶ :** ಎಷ್ಟೋ ಸಂದರ್ಭಗಳಲ್ಲಿ ನಾವು ಮಾತನಾಡುವ ಶೈಲಿ, ದೇಹದ ಹಾವಭಾವಗಳು ನಿಜವಾಗಿ ನೀಡಬೇಕಾದ ಅರ್ಥಕ್ಕಿಂತ ಭಿನ್ನವಾದ ಅರ್ಥಗಳನ್ನು ಕೊಡುವುದಿದೆ. ಮಾತಿನ ಹಿನ್ನೆಲೆಯಲ್ಲಿರುವ ನಿಜವಾದ ಅರ್ಥವನ್ನು ಗ್ರಹಿಸಬೇಕಾದರೆ ಆ ಮಾತಿನ ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ ಇರಬೇಕು. ಹಾಗಾದಾಗ ಮಾತ್ರವೇ ಭಾಷೆಯು ಸರಿಯಾದ ರೀತಿಯಲ್ಲಿ ಸಂವಹನಗೊಳ್ಳುವುದು.

ಇದೊಂದು ಜಾನಪದ ಮೂಲದಿಂದ ಆರಿಸಿಕೊಂಡು ರಚಿಸಲಾದ ಕತೆ.



ಒಂದು ದಿನ ಒಬ್ಬ ರಾಜ ಒಡ್ಡೋಲಗದಲ್ಲಿದ್ದಾಗ, ಅವನ ಮಂತ್ರಿ ಗಟ್ಟಿಯಾಗಿ ಅಳುತ್ತಾ ಬಂದನು. ಅವನ ರೋದನಕ್ಕೆ ಕಾರಣವೇನೆಂದು ರಾಜ ಪ್ರಶ್ನಿಸಿದ. ಮಂತ್ರಿಯು ಸಿಂಹಾಸನವನ್ನು ಚುಂಬಿಸಿ, ಭೂಮಿಯನ್ನು ಮುಟ್ಟಿ ನಮಸ್ಕರಿಸಿ ತನ್ನ ನಾಲಗೆಯನ್ನು ಉದ್ದ ಮಾಡಿ – 'ಮಹಾರಾಜರೇ ಗಂಧರ್ವಸೇನರು ತೀರಿಕೊಂಡರಂತೆ' ಎಂದು ಉದ್ಗರಿಸುತ್ತಾ ಮೂರ್ಛೆ ಹೋದ. ರಾಜನು ಒಡ್ಡೋಲಗವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿ ಕಣ್ಣೀರು ಸುರಿಸುತ್ತ ಗಂಧರ್ವಸೇನರ ಆತ್ಮಶಾಂತಿಗಾಗಿ ನಾಲ್ಕು ದಿನಗಳ ಕಾಲ ರಾಜ್ಯಾದ್ಯಂತ ಎಲ್ಲರೂ ಶೋಕಾಚರಣೆ ಮಾಡಬೇಕೆಂದು ಆಜ್ಞಾಪಿಸಿದ. ಮಂತ್ರಿಯ ಆರೈಕೆಗೆ ವೈದ್ಯರನ್ನು ಕರೆಸಿ ಉಪಚರಿಸುವಂತೆ ರಾಜಭಟರಿಗೆ ತಿಳಿಸಿ ಅಂತಃಪುರಕ್ಕೆ ಬಂದ. ರಾಜ, ಅಲ್ಲಿಯೂ ಕರುಳು

ಕಿತ್ತುಬರುವಂತೆ ಅಳತೊಡಗಿದ. ರಾಣಿಯರು ಅವನ ಶೋಕಕ್ಕೆ ಕಾರಣವನ್ನು ಕೇಳಿದರು. 'ಗಂಧರ್ವಸೇನರು ತೀರಿಕೊಂಡರು' ಎಂದು ರಾಜ ಗದ್ಗದ ಕಂಠದಿಂದ ಹೇಳಿದಾಗ, 'ರಾಜನ ದುಃಖ ತಮ್ಮ ದುಃಖ' ಎಂದು ಅವರು ಕೂಡ ಕರುಳು ಹಿಂಡುವಂತೆ ಎದೆ ಬಡಿದುಕೊಂಡು ಅಳಲಾರಂಭಿಸಿದರು. ಇಡೀ ಅಂತಃಪುರ ದುಃಖ ಹಾಗೂ ಗೊಂದಲದಿಂದ ತುಂಬಿತು.

ರಾಣಿಯ ಸೇವಕಿಯೊಬ್ಬಳಿಗೆ ಈ ಎಲ್ಲಾ ಗೊಂದಲ ಏಕೆಂದು ತಿಳಿಯಲಿಲ್ಲ. ಅವಳು, "ಮಹಾರಾಣಿಯವರೇ, ಎಲ್ಲರು ಏಕೆ ಅಳುತ್ತಿದ್ದಾರೆ?" ಎಂದು ಕೇಳಿದಳು. ರಾಣಿ ನಿಟ್ಟುಸಿರುಬಿಟ್ಟು,"ಪಾಪ! ಗಂಧರ್ವಸೇನರು ತೀರಿಕೊಂಡರಂತೆ" ಎಂದಳು. ಸೇವಕಿ ಚುರುಕು ಬುದ್ಧಿಯವಳು. ಅವಳು ಆಲೋಚನೆ ಮಾಡಿದಳು. ಈ ನಮ್ಮ ಮಹಾರಾಜರಿಗೂ ಆ ಗಂಧರ್ವಸೇನರಿಗೂ ಏನ್ ಸಂಬಂಧ? ಎಂದು ಆತಂಕದಿಂದ ರಾಣಿಯ ಬಳಿ ಕೇಳಿದಳು. ರಾಣಿ ಅದು ತನಗೆ ಗೊತ್ತಿಲ್ಲವೆಂದು ನುಡಿದು ರಾಜನ ಬಳಿಗೆ ಓಡಿಹೋಗಿ, "ಗಂಧರ್ವಸೇನರು ಯಾರು?" ಎಂದು ಕೇಳಿದಳು. ರಾಜನಿಗೂ ಗೊತ್ತಿಲ್ಲ. ಆತ ಕಣ್ ಕಣ್ ಬಿಟ್ಟು "ತಾನೆಂಥ ಮೂರ್ಖತನದ ಕೆಲಸ ಮಾಡಿದೆ" ಅಂದುಕೊಂಡು ಕೂಡಲೇ ಆಸ್ಥಾನಕ್ಕೆ ತೆರಳಿದ. ಈಗಾಗಲೆ ವೈದ್ಯರ ಉಪಚಾರದಿಂದ ಸುಧಾರಿಸಿಕೊಂಡಿದ್ದ ಮಂತ್ರಿಯನ್ನು ಕರೆಸಿಕೊಂಡು, "ಮಂತ್ರಿಗಳೇ, ಯಾರು ಈ ಗಂಧರ್ವಸೇನ?" ಎಂದು ಪ್ರಶ್ನಿಸಿದ. "ಮಹಾರಾಜರೆ ದಯವಿಟ್ಟು ಕ್ಷಮಿಸಿ. ಗಂಧರ್ವಸೇನರು ಯಾರೆಂಬುದು ನನಗೂ ತಿಳಿದಿಲ್ಲ. ಆದರೆ ಪಡೆಯ ಮುಖ್ಯಸ್ಥನು ಗಂಧರ್ವಸೇನ ತೀರಿಕೊಂಡರೆಂದು ಗಟ್ಟಿಯಾಗಿ ಗಂಟಲು ಹರಿಯುವಂತೆ ಕೂಗುತ್ತಾ ಅಳುತ್ತಿರುವುದನ್ನು ಕಂಡು ನಾನೂ ಅತ್ತೆ" ಎಂದು ಮಾರ್ನುಡಿದ. ರಾಜನ ಕೋಪ ನೆತ್ತಿಗೇರಿತು. "ನೀನೊಬ್ಬ ಮೂರ್ಖ. ಕೂಡಲೆ ಹೋಗಿ ಗಂಧರ್ವಸೇನ ಯಾರೆಂದು ಪತ್ತೆ ಮಾಡಿಕೊಂಡು ಬಾ" ಎಂದ. ಮಂತ್ರಿ ರಾಜನಿಗೆ ವಂದಿಸಿ, 'ಕೇಳಿದ ಕಿವಿ ಊರಿಗೆ ಮಾರಿ ತಂದಿತು' ಅಂದು–ಕೊಂಡು ಅಲ್ಲಿಂದ ಕಾಲಿಗೆ ಬುದ್ಧಿಹೇಳಿದ. ಪಡೆಯ ಮುಖ್ಯಸ್ಥನನ್ನು ಕಂಡು, "ಗಂಧರ್ವಸೇನರು ಯಾರು?" ಎಂದು ಪ್ರಶ್ನಿಸಿದ. "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು. ಆದರೆ ಅವರು ತೀರಿಕೊಂಡರೆಂದು ಸ್ವತಃ ನನ್ನ ಹೆಂಡತಿಯೇ ಅಳುತ್ತಿದ್ದಳು. ಈ ಸುದ್ದಿಯನ್ನು ನಿಮಗೆ ಹೇಳಬೇಕೆನಿಸಿತು. ಬಂದು ಹೇಳಿದೆ" ಎಂದನು.

ಮಂತ್ರಿ ತಲೆಯ ಮೇಲೆ ಕೈ ಹೊತ್ತು ಕುಳಿತ. ಇರಲಿ, ಇವನ ಹೆಂಡತಿಯನ್ನು ವಿಚಾರಿಸೋಣ ಎಂದು ಇಬ್ಬರೂ ಆತನ ಮನೆಗೆ ಹೋಗಿ, "ಯಾರಮ್ಮ ಈ ಗಂಧರ್ವಸೇನ?" ಎಂದು ಕೇಳಿದರು. ಅವಳು, "ಸ್ವಾಮೀ, ಗಂಧರ್ವಸೇನರ ಪರಿಚಯ ನನಗಿಲ್ಲ. ಈ ದಿವಸ ಬೆಳಿಗ್ಗೆ ಸ್ನಾನ ಮಾಡಲಿಕ್ಕೆ ಕೆರೆಗೆ ಹೋಗಿದ್ದೆ. ಅಲ್ಲಿ ಮಡಿವಾಳ್ತಿ ತನ್ನ ಗಂಧರ್ವ ಸೇನ ಸತ್ತಿದ್ದಾನೆಂದು ಬಾಯಿ ಬಡಿದುಕೊಂಡು ಒಂದೇ ಸಮನೆ ಅಳುತ್ತಿದ್ದಳು. ಅದನ್ನು ನೋಡಿ ನಾನೂ ಅತ್ತೆ, ಗಂಡನ ಬಳಿ ಹೇಳಿದೆ" ಎಂದಳು. ಮಂತ್ರಿಗೆ ತಲೆಸುತ್ತಿದಂತಾಯ್ತು. ಈ ಗಂಧರ್ವಸೇನ ಯಾರು? ತಲೆತಲೆ ಚಚ್ಚಿಕೊಂಡ. ಏನೇ ಆಗಲಿ ಎಂದುಕೊಂಡು

© KTBS NOT TO BE REPUBLISHED

ಅವರೆಲ್ಲರೂ ಆ ಮಡಿವಾಳ್ತಿಯ ಮನೆಗೆ ಹೋಗಿ, “ಗಂಧರ್ವಸೇನ ಯಾರು?” ಎಂದು ಕೇಳಿದರು. ಅವಳು ದುಃಖಿಸತೊಡಗಿದಳು. “ಸ್ವಾಮಿ, ನನಗೆ ಅದೃಷ್ಟವಿಲ್ಲ. ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ. ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ. ನನ್ನ ಮಗನಿಗಿಂತಲೂ ಹೆಚ್ಚಾಗಿ ಅವನನ್ನು ಮುದ್ದಿನಿಂದ ಬೆಳೆಸಿದ್ದೆ. ನಮ್ಮ ಎಲ್ಲಾ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದ ಸ್ವಾಮಿ, ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ. ನನ್ನ ಹೊಟ್ಟೆ ಮೇಲೆ ಕಲ್‌ಹಾಕ್ ಬಿಟ್ಟ” ಎಂದು ಬೊಬ್ಬಿಟ್ಟು ಅತ್ತಳು. ಇದನ್ನು ಕೇಳಿದ ಮಂತ್ರಿ, ಮುಖ್ಯಸ್ಥ, ಅವನ ಹೆಂಡತಿ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ಅಲ್ಲಿಂದ ಕಂಬಿಕಿತ್ತರು.



NOT TO BE REPUBLISHED

ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು ನಿಜಾಂಶವನ್ನು ಹೇಳಿದ. “ಗಂಧರ್ವಸೇನರು ಸತ್ತರೆಂದು ನಾವೆಲ್ಲ ಶೋಕಿಸಿದೆವಲ್ಲಾ, ಅದು ಬೇರೆ ಯಾರು ಅಲ್ಲ; ಮಡಿವಾಳ್ತಿಯ ಪ್ರೀತಿಯ ಕತ್ತೆ” ಎಂದು ಹೇಳಿದ. ರಾಜ ಅವನಿಗೆ ಹಿಗ್ಗಾಮುಗ್ಗಾ ಬೈದನು. ಆದರೆ ಶಿಕ್ಷಿಸದೆ ಬಿಟ್ಟುಬಿಟ್ಟ. ಈ ಸುದ್ದಿ ಅಂತಃಪುರದ ರಾಣಿಯರ ಕಿವಿಗೂ ಮುಟ್ಟಿತು. ‘ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು’ ಎನ್ನುವಂತೆ ರಾಜ ಮತ್ತು ಅವನ ಆಸ್ಥಾನಿಕರ ಮೂರ್ಖತನಕ್ಕಾಗಿ ರಾಣಿಯರು ತಮ್ಮ ಪಕ್ಕೆಲುಬುಗಳು ನೋಯುವವರೆಗೂ ನಗುತ್ತಲೇ ಇದ್ದರು.

**ಕೌಶಲ** : ಓದುವುದು ಮತ್ತು ಬರೆಯುವುದು.

**ಸಾಮರ್ಥ್ಯ** : ಪದಪುಂಜ, ನುಡಿಗಟ್ಟು ಮತ್ತು ನಾಣ್ಣುಡಿಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು

## ಪದಗಳ ಅರ್ಥ

ಒಡ್ಡೋಲಗ–ರಾಜಸಭೆ, ದರ್ಬಾರು. ರೋದನ–ಅಳುವಿಕೆ, ಪ್ರಲಾಪ. ಚುಂಬನ– ಮುತ್ತು. ಉದ್ಗರಿಸು–ಹೇಳು, ಹೊರಗೆಡಹು. ಪರಿಸಮಾಪ್ತಿ–ಮುಕ್ತಾಯ, ಕೊನೆ. ಶೋಕ–ಅಳಲು, ದುಃಖ. ಗದ್ಗದ ಕಂಠ–ನಿಂತು ನಿಂತು ಬರುವ ಅಸ್ಪಷ್ಟವಾದ ಮಾತು, ಬಿಗಿದ ಕಂಠ. ಅಂತಃಪುರ–ರಾಣಿವಾಸ. ನಿಟ್ಟುಸಿರು–ದೀರ್ಘವಾಗಿ ಬಿಡುವ ಉಸಿರು, ನಿಡಿದಾದ ಶ್ವಾಸ. ಬಡಪಾಯಿ–ಅಶಕ್ತ, ದುರ್ಬಲ, ತೀರಿಕೊಳ್ಳು–ಗತಿಸು, ಮರಣ ಹೊಂದು. ಮಾರ್ನುಡಿ–ಪ್ರತಿಯಾಗಿ ಮಾತನಾಡು, ಮಾರುತ್ತರ ಕೊಡು. ಪತ್ತೆ–ಗುರುತು, ಸುಳಿವು, ವಿಳಾಸ. ಬೊಬ್ಬಿಡು–ಕೂಗು, ಅರಚು, ಗಟ್ಟಿಯಾಗಿ ಹೇಳು. ನಿಜಾಂಶ–ಸತ್ಯ, ದಿಟ. ಪಕ್ಕೆಲುಬು– ಇಬ್ಬದಿಯ ಎಲುಬುಗಳು.

**ವಿವರ ತಿಳಿಯಿರಿ:**

**ಶೋಕಾಚರಣೆ :** ಸತ್ತವರಿಗಾಗಿ ಸಂತಾಪ ಸೂಚಿಸುವುದು.

**ನಾಲಗೆಯನ್ನು ಉದ್ದ ಮಾಡಿ ಹೇಳು :** ಒಂದು ವಿಷಯದ ಬಗ್ಗೆ ತನಗೆ ಪೂರ್ಣ ಗೊತ್ತಿದೆ ಅಂದುಕೊಳ್ಳುತ್ತಾ ನಂಬಿಸಿ ಹೇಳುವುದು, ಅತಿಯಾಗಿ ಮಾತನಾಡುವುದು.

**ಕರುಳು ಕಿತ್ತುಬರುವಂತೆ ಅಳು :** ತನಗಾದ ದುಃಖವನ್ನು ತೋರ್ಪಡಿಸಿಕೊಳ್ಳಲು ಅಳುವ ಒಂದು ರೀತಿ, ಅತೀವವಾದ ಅಳು.

**ಗಂಟಲು ಹರಿಯುವಂತೆ ಕೂಗು :** ಬೊಬ್ಬೆಹಾಕಿ ಹೇಳು, ಜೋರಾಗಿ ಬೊಬ್ಬಿಡು.

**ಕಾಲಿಗೆ ಬುದ್ಧಿ ಹೇಳು :** ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.

## ಅಭ್ಯಾಸಗಳು

**ಅ. ಸರಿಯಾದ ಪದಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.**

೧. ರಾಜನು ______________ವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿದ. (ಒಡ್ಡೋಲಗ, ಬಡ್ಡೋಲಗ, ಓಡ್ಡೋಲಗ)

೨. ಸೇವಕಿ __________ಬುದ್ಧಿಯವಳು. (ಮುರುಕು, ತಳುಕು, ಚುರುಕು)

೩. ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು ___________ಹೇಳಿದ. (ನಿಜಾಂಶ, ಸಾರಾಂಶ, ಮಿಥ್ಯಾಂಶ)

೪. ರಾಜನಿಗೆ ಗಂಧರ್ವಸೇನ ತೀರಿದ ವಿಷಯ ತಿಳಿಸಿದ್ದು ________________ (ಮಂತ್ರಿ, ರಾಣಿ, ಸೇವಕಿ)

೫. ಅಂತಃಪುರ ಇದರ ಅರ್ಥ__________ (ರಾಣಿವಾಸ, ಸೇವಕಿಯರ ವಾಸ, ರಾಜಗೃಹ)

©KTBS NOT TO BE REPUBLISHED

**ಆ. ಈ ಪದಗಳ ಅರ್ಥ ಬರೆಯಿರಿ.**

೧. ನಿಟ್ಟುಸಿರು ೨. ಪರಿಸಮಾಪ್ತಿ ೩. ಮಾರ್ನುಡಿ ೪. ಉದ್ಗರಿಸು

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದ?

೨. ಗಂಧರ್ವಸೇನ ಯಾರು?

೩. ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ?

೪. ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು?

೫. ರಾಣಿಯರು ನಗಲು ಕಾರಣವೇನು?

**ಈ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ರಾಜನ ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿರಿ.

೨. ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮಂತ್ರಿಯು ಮಾಡಿದ ಪ್ರಯತ್ನಗಳೇನು?

**ಉ. ಸಂದರ್ಭ ಸಹಿತ ವಿವರಿಸಿರಿ.**

೧. "ಮಹಾರಾಜರೇ ಗಂಧರ್ವ ಸೇನರು ತೀರಿಕೊಂಡರಂತೆ."

೨. "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು."

೩. "ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ."

೪. "ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು."

**ಊ. ಕೆಳಗಿನವುಗಳನ್ನು ನುಡಿಗಟ್ಟು, ಗಾದೆ, ಒಗಟುಗಳಾಗಿ ವಿಂಗಡಿಸಿ ಬರೆಯಿರಿ.**

೧. ಮೂಗು ತೂರಿಸು, ೨. ಕೇಳಿದ ಕಿವಿ ಊರಿಗೆ ಮಾರಿ ತಂದಿತು, ೩. ಕಾಲಿಗೆ ಬುದ್ಧಿಹೇಳು, ೪. ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ, ೫. ಬೆನ್ನಿಗೆ ಚೂರಿ ಹಾಕು, ೬. ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು, ೭. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ, ೮. ತಲೆ ಹಾಕು, ೯. ಮುಚ್ಚಿಟ್ಟದ್ದು ಮಣ್ಣಿನ ಪಾಲು, ೧೦. ಕರುಳು ಹಿಂಡು, ೧೧. ಮಂಕು ಬೂದಿ, ೧೨. ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.

## ವ್ಯಾಕರಣ ಮಾಹಿತಿ

ನಾವು ಹಿಂದಿನ ತರಗತಿಯಲ್ಲಿ ಕೆಲವು ವ್ಯಾಕರಣಾಂಶಗಳನ್ನು ತಿಳಿದುಕೊಂಡಿದ್ದೆವು. ಅವುಗಳನ್ನು ನೆನಪು ಮಾಡಿಕೊಳ್ಳೋಣ.

★ **ವಚನಗಳು :** ಒಂದು ಎಂಬುದನ್ನು ಸೂಚಿಸುವ ಶಬ್ದಗಳಿಗೆ **ಏಕವಚನ** ಎಂದೂ ಒಂದಕ್ಕಿಂತ ಹೆಚ್ಚು ಎಂಬುದನ್ನು ಸೂಚಿಸುವ ಶಬ್ದಗಳಿಗೆ **ಬಹುವಚನ** ಎಂದು ಕರೆಯುತ್ತೇವೆ. ಕನ್ನಡ ಭಾಷೆಯಲ್ಲಿ ಏಕವಚನ, ಬಹುವಚನಗಳೆಂದು ಎರಡು ಪ್ರಕಾರಗಳಿವೆ.

@KTBS NOT TO BE REPUBLISHED

| ಏಕವಚನ | ಬಹುವಚನ |
|---|---|
| ಅರಸ | ಅರಸರು |
| ನೀನು | ನೀವು |
| ಮರ | ಮರಗಳು |
| ಮಗು | ಮಕ್ಕಳು |

## ★ ಲಿಂಗಗಳು :

**ಕನ್ನಡ ಭಾಷೆಯಲ್ಲಿ ಮುಖ್ಯವಾಗಿ ಮೂರು ಪ್ರಕಾರದ ಲಿಂಗಗಳಿವೆ.**

೧. ಪುಲ್ಲಿಂಗ    ೨. ಸ್ತ್ರೀಲಿಂಗ    ೩. ನಪುಂಸಕ ಲಿಂಗ.

- **ಪುಲ್ಲಿಂಗ :–** ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡು' ಎಂಬರ್ಥವು ಮನಸ್ಸಿಗೆ ಹೊಳೆಯುವುದೋ ಅದು 'ಪುಲ್ಲಿಂಗ'ವೆನಿಸುವುದು.

  **ಉದಾ :–** ಮುದುಕ, ಚಿಕ್ಕಪ್ಪ, ಶಂಕರ, ಅರಸು, ಅಣ್ಣ ಮುಂತಾದವು.

- **ಸ್ತ್ರೀಲಿಂಗ :–** ನಮ್ಮ ಭಾವನೆಗೆ 'ಹೆಣ್ಣು' ಎಂಬ ಅರ್ಥವು ಹೊಳೆದರೆ ಅದು 'ಸ್ತ್ರೀ' ಲಿಂಗವೆನಿಸುವುದು.

  **ಉದಾ :–** ಮುದುಕಿ, ಚಿಕ್ಕಮ್ಮ, ಸರೋಜ, ರಾಣಿ ಮುಂತಾದವು.

- **ನಪುಂಸಕ ಲಿಂಗ :–** ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಹೆಣ್ಣು, ಗಂಡು ಎರಡೂ ಅಲ್ಲದ ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕ ಲಿಂಗ ಎನಿಸುವುದು.

  **ಉದಾ :–** ಮನೆ, ನೆಲ, ಬೆಂಕಿ, ಗದ್ದೆ, ತೋಟ, ಮಗು, ನವಿಲು, ಕೋಳಿ, ನಾಯಿ ಮುಂತಾದವು.

## ★ ನಾಮಪದಗಳು

**ವಸ್ತುವಾಚಕ ನಾಮಪದಗಳಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ.**

೧. ರೂಢನಾಮ    ೨. ಅಂಕಿತನಾಮ    ೩. ಅನ್ವರ್ಥನಾಮ

- **ರೂಢನಾಮ :–** ರೂಢಿಯಿಂದ ಬಂದ ಸಾಮಾನ್ಯ ವಾಚಕಗಳನ್ನು ರೂಢನಾಮ ಎನ್ನುವರು.
  **ಉದಾ:–** ನದಿ, ಪರ್ವತ, ಮನುಷ್ಯ, ದೇಶ, ಹುಡುಗಿ, ಶಾಲೆ, ಮನೆ, ರಾಜ–ಮುಂತಾದವು.

- **ಅಂಕಿತನಾಮ:–** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.

NOT TO BE REPUBLISHED @KTBS

**ಉದಾ:–** ಬ್ರಹ್ಮಪುತ್ರ, ರಾಗಿಣಿ, ಸ್ನೇಹ, ಬೆಂಗಳೂರು, ಹೊನ್ನವಳ್ಳಿ, ಕಾವೇರಿ, ಹಿಮಾಲಯ, ಜೋಸೆಫ್, ಬೋರಣ್ಣ ಮುಂತಾದವು.

- **ಅನ್ವರ್ಥನಾಮ :–** ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳು.

**ಉದಾ:–** ವ್ಯಾಪಾರಿ, ರೋಗಿ ಶಿಕ್ಷಕಿ, ವೈದ್ಯ ಮುಂತಾದವು.

## ವಿಭಕ್ತಿ ಪ್ರತ್ಯಯ:

ಸ್ವತಂತ್ರವಾದ ಅರ್ಥವಿಲ್ಲದ ನಾಮಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ 'ಉ', 'ಅನ್ನು', 'ಇಂದ', 'ಗೆ', 'ಕ್ಕೆ', 'ದೆಸೆಯಿಂದ', 'ಅ', 'ಅಲ್ಲಿ' ಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು.

| | ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯ ಸೇರಿಸಿದಾಗ |
|---|---|---|---|
| ೧. | ಪ್ರಥಮ | ಉ | ಗೌರಿಯು |
| ೨. | ದ್ವಿತೀಯ | ಅನ್ನು | ಗೌರಿಯನ್ನು |
| ೩. | ತೃತೀಯ | ಇಂದ | ಗೌರಿಯಿಂದ |
| ೪. | ಚತುರ್ಥಿ | ಗೆ, ಇಗೆ, ಕ್ಕೆ. | ಗೌರಿಗೆ |
| ೫. | ಪಂಚಮಿ | ದೆಸೆಯಿಂದ | ಗೌರಿಯ ದೆಸೆಯಿಂದ |
| ೬. | ಷಷ್ಠಿ | ಅ | ಗೌರಿಯ |
| ೭. | ಸಪ್ತಮಿ | ಅಲ್ಲಿ | ಗೌರಿಯಲ್ಲಿ |

@KTBS NOT TO BE REPUBLISHED

## ಅಭ್ಯಾಸ

**ಅ. ವಚನ ಬದಲಿಸಿ ಬರೆಯಿರಿ.**

೧. ಗಿಡ　　೨. ತಮ್ಮಂದಿರು　　೩. ಪತ್ರಗಳು　　೪. ಮಗು

**ಆ. ಪುಲ್ಲಿಂಗ ಅಥವಾ ಸ್ತ್ರೀಲಿಂಗ ರೂಪಕ್ಕೆ ಪರಿವರ್ತಿಸಿ ಬರೆಯಿರಿ.**

೧. ಅವನು　　೨. ಇವಳು　　೩. ಗೌಡತಿ　　೪. ಶರಣ

ಇ. ಕೆಳಗಿನವುಗಳಿಗೆ ನಾಲ್ಕು ಉದಾಹರಣೆಗಳನ್ನು ಕೊಡಿರಿ.

೧. ಅನ್ವರ್ಥನಾಮ ೨. ರೂಢನಾಮ ೩. ಅಂಕಿತನಾಮ

## ಭಾಷಾ ಆಟಗಳು

**ಗುಂಪು ಆಟ:–** ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ 'ಸವಾಲ್–ಜವಾಬ್' ಆಟ ಆಡಿಸುವುದು. ಮೊದಲನೆಯ ಗುಂಪು ಒಂದು ಒಗಟು ಹೇಳಿದರೆ ಎರಡನೆಯ ಗುಂಪು ಅದಕ್ಕೆ ಉತ್ತರವನ್ನು ಹೇಳಬೇಕು. (ಉತ್ತರಿಸಲು ಮೂರು ಅವಕಾಶವಿರುವುದು) ಉತ್ತರ ಹೇಳಿದರೆ ಹೇಳಿದ ಗುಂಪಿಗೆ ಅಂಕ. ಹೇಳದೆ ಇದ್ದಲ್ಲಿ ಒಗಟು ಕೇಳಿದ ಗುಂಪಿಗೆ ಅದರ ಎರಡರಷ್ಟು ಅಂಕ ಪ್ರಾಪ್ತಿಯಾಗುವುದು. ಈ ಪ್ರಕಾರ ಐದರಿಂದ ಹತ್ತು ಸುತ್ತುಗಳಲ್ಲಿ ಆಟ ಮುಂದುವರಿಸುವುದು. ಹೆಚ್ಚು ಅಂಕ ಗಳಿಸಿದವರು 'ವಿಜಯಶಾಲಿ ಗುಂಪು'ಎಂದು ಘೋಷಿಸಿ ಪ್ರೋತ್ಸಾಹಿಸುವುದು.

### ಯೋಜನೆ

- ನೀವು ಕೇಳಿರುವ ಹಾಗೂ ಪತ್ರಿಕೆ, ಪುಸ್ತಕಗಳಲ್ಲಿ ಓದಿರುವ ಗಾದೆ, ಒಗಟು, ನುಡಿಗಟ್ಟುಗಳನ್ನು ಸಂಗ್ರಹಿಸಿ ಬರೆದು ಒಂದು ಆಲ್ಬಂ ತಯಾರಿಸಿ ಶಾಲಾ ಕಾರ್ಯಕ್ರಮದಲ್ಲಿ ಅದನ್ನು ಪ್ರದರ್ಶಿಸಿರಿ. ಅನಂತರ ಅದನ್ನು ಶಾಲಾ ಗ್ರಂಥಾಲಯಕ್ಕೆ ಸೇರಿಸಿರಿ.

@KTBS NOT TO BE REPUBLISHED

### ಪೂರಕ ಓದು

೧. ಜನಪದದ ಕಥೆಗಳನ್ನು ಓದಿ ಅರ್ಥೈಸಿಕೊಳ್ಳಿರಿ.

೨. ನುಡಿಗಟ್ಟು, ಪದಪುಂಜಗಳನ್ನು ಸಂಗ್ರಹಿಸಿ, ಅವುಗಳ ಅರ್ಥ ತಿಳಿಯಿರಿ.

೩. ಎಚ್.ಎಲ್.ನಾಗೇಗೌಡ, ಎ.ಕೆ.ರಾಮಾನುಜನ್‌ರವರು ಸಂಗ್ರಹಿಸಿರುವ ಜನಪದ ಕಥೆ, ಗೀತೆಗಳನ್ನು ಓದಿರಿ.

### ಶುಭ ನುಡಿ

- ಯಾವುದೇ ನಿರ್ಣಯ ಕೈಗೊಳ್ಳುವ ಮೊದಲು ತುಂಬಾ ಯೋಚಿಸಿರಿ.
- ಹಳ್ಳಿ ಜೀವನವನ್ನು ಪ್ರೀತಿಸಿರಿ.
- ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.

* * * * *

# ೩. ಕೃಷ್ಣ – ಸುಧಾಮ (ನಾಟಕ)

G2T3C5

– ವಿ.ಎಸ್ ಶಿರಹಟ್ಟಿ ಮಠ

**ಪ್ರವೇಶ :** ಗೆಳೆತನವೆಂಬುದು ಪವಿತ್ರವಾದ ಒಂದು ಸಂಬಂಧ. ಇಲ್ಲಿ ಬಡತನ, ಸಿರಿತನ, ವಿದ್ಯಾವಂತ, ಅವಿದ್ಯಾವಂತ ಇತ್ಯಾದಿಯಾದ ಯಾವುದೇ ಬಗೆಯ ಭೇದ ಭಾವ ಇರುವುದಿಲ್ಲ. ಹುಟ್ಟುತ್ತಾ ಅಣ್ಣ ತಮ್ಮಂದಿರಾಗಿಯೂ ಬೆಳೆಯುತ್ತಾ ದಾಯಾದಿಗಳಾಗಿಯೂ ಬದುಕು ಸಾಗಿಸುವವರು ನಮ್ಮ ನಡುವೆ ಇದ್ದಾರೆ. ಒಂದೇ ತರಗತಿಯಲ್ಲಿ ಕಲಿತ ಬಾಲ್ಯ ಸ್ನೇಹಿತರೂ ಸಿರಿತನ, ಬಡತನ ನಿಮಿತ್ತವಾಗಿ ಬೇರ್ಪಡುತ್ತಾರೆ. ನಿಜವಾದ ಗೆಳೆತನದ ಬೆಸುಗೆ ಮುರಿದು ಹೋಗುವಂಥದ್ದಲ್ಲ ಎಂಬುದನ್ನು ಎತ್ತಿ ತೋರಿಸುವುದು ಪ್ರಸ್ತುತ ಪಾಠದ ಆಶಯವಾಗಿದೆ.

## ದೃಶ್ಯ–೧

[ಸುಧಾಮನ ಗುಡಿಸಲು, ರಾತ್ರಿಯ ಸಮಯ. ಸುಧಾಮ ಯೋಚಿಸುತ್ತಾ ಶತಪತಿಸುತ್ತಿದ್ದಾನೆ. ಆತನ ಮುಖದಲ್ಲಿ ನಿರಾಸೆ ತುಂಬಿದೆ.]



**ಸುಧಾಮ** : (ಸ್ವಗತ) ಜೀವನದಲ್ಲಿ ಬರೀ ಕಷ್ಟಗಳೇ ಬರುತ್ತಿವೆಯಲ್ಲ! ಸುಖದ ದಿನಗಳು ಯಾವಾಗ ಬರುತ್ತವೊ? ಹಾ! (ನಿಟ್ಟುಸಿರುಬಿಟ್ಟು) ಅದೆಲ್ಲಾ ಆ ದೇವರಿಗೇ ಗೊತ್ತು!

**ಹೆಂಡತಿ** : ಬಡತನ ನಮ್ಮ ಬೆನ್ನು ಹತ್ತಿದೆ. ಅದು ನಮ್ಮನ್ನು ಬಿಟ್ಟು ಹೋಗುವುದಿಲ್ಲ.

NOT TO BE REPUBLISHED @KTBS

**ಸುಧಾಮ** : 'ಬಡತನ ನಮಗಿರಲಿ, ಮನೆ ತುಂಬ ಮಕ್ಕಳಿರಲಿ' ಎಂದು ದೇವರಲ್ಲಿ ನೀ ಬೇಡಿಕೊಂಡೆಯೋ ಹೇಗೆ ?

**ಹೆಂಡತಿ** : ಮಕ್ಕಳಿರಲಿ ಅಂದಿದ್ದು ನಿಜ. ಆದ್ರೆ.............

**ಮಗಳು** : (ಮಕ್ಕಳ ಪ್ರವೇಶ) ಅಮ್ಮಾ .... ಅಮ್ಮಾ ..... ಹಸಿವಾಗ್ತಿದೆ.

**ಮಗ** : ನನಗೂ ಹಸಿವು, ಊಟ ಕೊಡಮ್ಮ.

**ಹೆಂಡತಿ** : ನೋಡಿದ್ರಾ, ಮಕ್ಕಳೆಲ್ಲಾ ಹಸಿವಿನಿಂದ ಕಂಗಾಲಾಗಿವೆ. ಪಾಂಡಿತ್ಯವುಳ್ಳ ನನ್ನ ಗಂಡ ದುಡಿದು ತರ್‍ತಾರೇಂತ ತಿಳಿದಿದ್ದೆ.

**ಸುಧಾಮ** : ಯಾವುದಕ್ಕೂ ಕಾಲ ಕೂಡಿ ಬರಬೇಕಲ್ಲ.

**ಹೆಂಡತಿ** : ಅಂತೂ ಇಂತೂ ನಮಗೆ ಬಡತನವೇ ಗತಿ.

**ಸುಧಾಮ** : ಚಿಂತೆ ಮಾಡಿದರೆ ಏನು ಬಂತು? ಜೀವನದಲ್ಲಿ ಬಂದದ್ದನ್ನು ಅನುಭವಿಸಲೇ ಬೇಕು. ಅದೇ ಮಾನವ ಧರ್ಮ.

**ಹೆಂಡತಿ** : ನೀವು ನೀತಿ ಹೇಳುವುದರಲ್ಲಿ ಬಹಳ ಮುಂದು.

**ಸುಧಾಮ** : ನೀತಿ, ನಿಯಮ, ವಿಧೇಯತೆ, ಪಾಂಡಿತ್ಯ ಇದ್ದುದರಿಂದಲೇ ಗುರುಕುಲದಲ್ಲಿ ಶ್ರೀಕೃಷ್ಣ ನನ್ನ ಸ್ನೇಹಿತನಾದದ್ದು.

**ಹೆಂಡತಿ** : ಮಾತುಮಾತಿಗೂ "ಶ್ರೀಕೃಷ್ಣ ನನ್ನ ಸ್ನೇಹಿತನಾಗಿದ್ದ" ಅಂತೀರಿ.

**ಸುಧಾಮ** : ಹೂಂ! ನಿಜಕ್ಕೂ ಆತ ನನ್ನ ಪರಮ ಮಿತ್ರನಾಗಿದ್ದ. ಗುರುಕುಲದಲ್ಲಿ ಒಟ್ಟಿಗೆ ವಿದ್ಯಾಭ್ಯಾಸ ಮಾಡಿದೆವು.

**ಹೆಂಡತಿ** : ಸತ್ಯ ಹೇಳುವಿರಾ! ಆ ಶ್ರೀಮಂತರೆಲ್ಲಿ, ನೀವೆಲ್ಲಿ? ಯಾಕೆ ಸುಮ್ಮನೆ ಬಡಾಯಿ ಬಿಡ್ತೀರಾ?

**ಸುಧಾಮ** : ಯಾಕೆ ಸುಳ್ಳು ಹೇಳಲಿ ನಾನು, ಕೃಷ್ಣ ಸದಾ ನನ್ನ ಜೊತೆಯಲ್ಲಿಯೇ ಇರುತ್ತಿದ್ದ. ಒಟ್ಟಿಗೆ ಕಲಿಯುತ್ತಿದ್ದೆವು. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.

**ಹೆಂಡತಿ** : ಅಂತಹ ಶ್ರೀಮಂತ ಸ್ನೇಹಿತನಿದ್ದರೂ ಇಲ್ಲಿಯವರೆಗೆ ನೀವು ಏಕೆ ಅವರ ಹತ್ತಿರ ಸಹಾಯ ಕೇಳಲಿಲ್ಲ?

**ಸುಧಾಮ** : (ಕ್ಷಣ ಹೊತ್ತು ಮೌನ) ಬಡವನಾದವ ದೊಡ್ಡವರ ಮನೆಗೆ ಸಹಾಯ ಕೇಳಲು ಹೋಗಬಾರದು.

**ಹೆಂಡತಿ** : ಸ್ನೇಹಿತರೆದುರು ಎಂಥ ಸ್ವಾಭಿಮಾನ ! ದಯವಿಟ್ಟು ಹೋಗಿ ಅವರಲ್ಲಿ ಸಹಾಯ ಕೇಳಿ.

**ಸುಧಾಮ** : ಹೇಗೆ ಕೇಳುವುದು?

©KTBS NOT TO BE REPUBLISHED

**ಹೆಂಡತಿ** : ಆತ್ಮೀಯ ಗೆಳೆಯ ಅನ್ನುತ್ತೀರಿ, ಅಂದ ಮೇಲೆ ಅವರು ಸಹಾಯ ಮಾಡೇ ಮಾಡುತ್ತಾರೆ.

**ಸುಧಾಮ** : ಇಲ್ಲ ಅನ್ನಲಾರ, ಆದರೂ ಕೇಳುವುದಕ್ಕೆ ಸಂಕೋಚ.

**ಹೆಂಡತಿ** : ಸಂಕೋಚ ಬೇಡಾರೀ, ಹಸಿದಿರುವ ಮಕ್ಕಳಿಗೋಸ್ಕರವಾದರೂ ಹೋಗಿ ಕೇಳಿ.

**ಸುಧಾಮ** : ಆಗಲಿ, ಹೋಗುತ್ತೇನೆ. ಆದರೆ ಗೆಳೆಯನನ್ನು ನೋಡಲು ಬರಿಗೈಯಲ್ಲಿ ಹೋಗಲಾ?

**ಹೆಂಡತಿ** : ನಿನ್ನೆ ತಂದ ಅವಲಕ್ಕಿಯಲ್ಲಿ ಸ್ವಲ್ಪವೇ ಉಳಿದಿದೆ. ಮಕ್ಕಳ ಉಪಾಹಾರಕ್ಕೆ ಏನೇನೂ ಸಾಲದು. ಅದನ್ನೇ ಕಟ್ಟಿಕೊಡಲೆ?

**ಮಗ** : ಹಸಿವು, ಅದನ್ನಾದರೂ ನನಗೆ ಕೊಡಮ್ಮ.

**ಹೆಂಡತಿ** : ತುಸು ತಡೆದುಕೋ ಕಂದಾ, ದೇವರ ದಯೆಯಿದ್ದರೆ ಈ ಅವಲಕ್ಕಿಯೇ ಬಂಗಾರವಾದೀತು (ಗಂಡನಿಗೆ) ಕಟ್ಟಿಕೊಡಲೆ?

**ಸುಧಾಮ** : ಸರಿ, ಹಾಗೆ ಮಾಡು.

## ದೃಶ್ಯ –೨

[ಕೃಷ್ಣನ ಅರಮನೆ– ಕಾವಲುಗಾರ ಸುಧಾಮನನ್ನು ಅರಮನೆಯೊಳಕ್ಕೆ ಬಿಡದೆ ಬಾಗಿಲಲ್ಲೇ ನಿಲ್ಲಿಸುವನು. ಕೃಷ್ಣ ಆಕಸ್ಮಿಕವಾಗಿ ಹೊರಗೆ ಬರುವನು. ಸುಧಾಮನನ್ನು ನೋಡುವನು.]

**ಕೃಷ್ಣ** : (ಆಶ್ಚರ್ಯದಿಂದ) ಓಹೋ ಸುಧಾಮ! ಯಾವಾಗ ಬಂದೆ? ಬಾ ಒಳಗೆ (ಸುಧಾಮನ ಕೈ ಹಿಡಿಯುವನು. ಕಾವಲುಗಾರ ಆಶ್ಚರ್ಯದಿಂದ ದೂರ ಸರಿಯುವನು.)

**ಸುಧಾಮ** : ಶ್ರೀಕೃಷ್ಣ ಮಹಾರಾಜರು! (ಅತೀವ ಸಂತೋಷದಿಂದ ಆನಂದಬಾಷ್ಪ ಸುರಿಯುತ್ತದೆ. ಮಾತೇ ಹೊರಡದಂತಾಗಿದೆ.)

**ಕೃಷ್ಣ** : ಏಕೆ ಸುಧಾಮ ಕಣ್ಣಲ್ಲಿ ನೀರು?

**ಸುಧಾಮ** : ಬಹಳ ದಿನಗಳ ಅನಂತರ ನಿಮ್ಮನ್ನು ನೋಡುತ್ತಿರುವೆನಲ್ಲ! ಅದಕ್ಕಾಗಿ ಆನಂದದ ಕಣ್ಣೀರು.

**ಕೃಷ್ಣ** : ದೂರದಿಂದ ದಣಿದು ಬಂದಿದ್ದೀಯ. ಸ್ನಾನ ಮುಗಿಸಿ ಊಟ ಮಾಡಿ ವಿಶ್ರಾಂತಿ ತೆಗೆದುಕೋ. ಅಷ್ಟುಬೇಗ ನಿನ್ನನ್ನು ಹೋಗಗೊಡುವುದಿಲ್ಲ.

**ಸುಧಾಮ** : ಅಯ್ಯೋ, ಅಲ್ಲಿ ಮನೆಯಲ್ಲಿ ಯಾರೂ ಇಲ್ಲ. ಮಕ್ಕಳಿಗೆ........

**ಕೃಷ್ಣ** : ಸುಮ್ಮನಿರು, ಬಂದ ತಕ್ಷಣ ಹೋಗಬೇಕಿದ್ದರೆ ಯಾಕೆ ಬಂದೆ? ಯಾರಲ್ಲಿ? ಸುಧಾಮನಿಗೆ ವಿಶ್ರಾಂತಿಯ ವ್ಯವಸ್ಥೆ ಮಾಡಿ. (ಸುಧಾಮನಿಗೆ) ನನಗೂ ತುರ್ತು ಕೆಲಸವಿದೆ. ಅದು ಮುಗಿದ ತಕ್ಷಣ ಬಂದು ಬಿಡುವೆ.

© KTBS NOT TO BE REPUBLISHED

## ದೃಶ್ಯ–೩

( ಕೃಷ್ಣನ ಅರಮನೆ– ಸುಧಾಮನಿರುವ ಕೋಣೆ. ತೆರೆ ಸರಿದಾಗ)

**ಸುಧಾಮ** : (ಸ್ವಗತ) ಶ್ರೀಕೃಷ್ಣನಂತಹ ಮಿತ್ರನನ್ನು ಪಡೆದ ನಾನೇ ಧನ್ಯನು, ನನ್ನನ್ನು ಮರೆತಿಲ್ಲ. ನಾನು ತಂದ ಅವಲಕ್ಕಿಯನ್ನು ತಾನೂ ತಿಂದು ಹೆಂಡತಿಗೂ ಪ್ರೀತಿಯಿಂದ ತಿನ್ನಿಸಿದ. ಇಷ್ಟೊಂದು ಪ್ರೀತಿ ವಿಶ್ವಾಸವಿರುವ ಕೃಷ್ಣನ ಹತ್ತಿರ ನನ್ನ ಬಡತನ ಹೇಳಿ ಆತನ ಮನಸ್ಸಿಗೆ ಬೇಸರವುಂಟುಮಾಡಬಾರದು. ನನ್ನ ಬಡತನ ನನಗಿರಲಿ.

**ಕೃಷ್ಣ** : (ಹಿಂದಿನಿಂದ ಬರುತ್ತಾ) ಏನು ಯೋಚಿಸುತ್ತಿರುವೆ ಸುಧಾಮ?


**ಸುಧಾಮ** : ಏನಿಲ್ಲ ಕೃಷ್ಣ ..... ಏನಿಲ್ಲ, ಸುಮ್ಮನೆ.

**ಕೃಷ್ಣ** : ನೀ ಬಂದು ನನ್ನ ಮನಸ್ಸಿಗೆ ತುಂಬಾ ಸಂತೋಷವನ್ನುಂಟುಮಾಡಿದೆ. ನನಗೆ ಗುರುಕುಲದ ಜೀವನ ನೆನಪಾಗುತ್ತಿದೆ.

**ಸುಧಾಮ** : ಒಟ್ಟಿಗೆ ಊಟ ಮಾಡುತ್ತಿದ್ದೆವು, ಕೂಡಿ ಕಲಿಯುತ್ತಿದ್ದೆವು, ಕಟ್ಟಿಗೆ ತರಲು ಹೋಗುತ್ತಿದ್ದೆವು.

**ಕೃಷ್ಣ** : ಗುರುಮಾತೆ ಕೊಟ್ಟ ಹುರಿದ ಕಡಲೆ ತಿಂದಿದ್ದು! ನಿನ್ನ ಪಾಲಿನ ಕಡಲೆ ನಾ ಕಸಿದುಕೊಂಡಿದ್ದು!

@KTBS NOT TO BE REPUBLISHED



**ಸುಧಾಮ** : (ತಡವರಿಸುತ್ತಾ) ಹಸಿವು......ಬಡತನ.....(ಏನೋ ನೆನಪು ಮಾಡಿಕೊಳ್ಳಲು ಯತ್ನಿಸಿ ಮೌನಿಯಾಗುವನು.)

**ಕೃಷ್ಣ** : ಪ್ರಜೆಗಳ ಹಸಿವು ಹಿಂಗಿಸಲು ಅವರ ಕಷ್ಟ ಕಾರ್ಪಣ್ಯ ನೀಗಿಸಲು ರಾಜನಾದವನು ಶ್ರಮಿಸಬೇಕು. ಆಗ ಮಾತ್ರ ಅವನು ನಿಜವಾದ ರಾಜನಾಗುವನು. ನಿನ್ನನ್ನು ಪೀಡಿಸಿದ್ದು ತಪ್ಪೆಂದು ಕ್ರಮೇಣ ನನ್ನ ಅರಿವಿಗೆ ಬಂತು ನೋಡು.

**ಸುಧಾಮ** : ಕೃಷ್ಣ, ಇಷ್ಟು ದಿನ ಇಲ್ಲಿದ್ದು ಅದನ್ನೆಲ್ಲ ಕಣ್ಣಾರೆ ಕಂಡಿರುವೆ.

**ಕೃಷ್ಣ** : ಸುಧಾಮ, ನಿನಗೇನು ಬೇಕು?

**ಸುಧಾಮ** : ನನಗೇನೂ ಬೇಡ. ನಿನ್ನ ಸತ್ಕಾರ ಜೀವನದಲ್ಲಿ ಮರೆಯುವಂತಿಲ್ಲ. ನಿನ್ನ ಸ್ನೇಹವೊಂದೆ ಸಾಕು. ಇನ್ನು ನನ್ನೂರಿಗೆ ಹೊರಡುವೆ.

**ಕೃಷ್ಣ** : ಇಷ್ಟು ಬೇಗ !

**ಸುಧಾಮ** : ನಾನು ಇಷ್ಟು ದೀರ್ಘಕಾಲ ಮನೆಬಿಟ್ಟು ಇದ್ದವನೆ ಅಲ್ಲ. ಅಲ್ಲಿ ಹೆಂಡತಿ ಮಕ್ಕಳು ನನ್ನ ದಾರಿ ಕಾದು ಕಂಗಾಲಾಗಿರಬಹುದು.

**ಕೃಷ್ಣ** : ಇಲ್ಲಿಗೆ ಬಂದ ವಿಷಯ ಅವರಿಗೆ ಗೊತ್ತಿದೆಯಲ್ಲ.

**ಸುಧಾಮ** : ಗೊತ್ತಿದೆ. ಆದರೆ ನನಗೆ ಮಕ್ಕಳದೇ ಚಿಂತೆ. ಹೊರಡಲು ಅಪ್ಪಣೆ ಕೊಡು ಕೃಷ್ಣಾ.

**ಕೃಷ್ಣ** : ನಿನ್ನ ಇಷ್ಟದಂತೆಯೇ ಆಗಲಿ, ಹೋಗಿ ಬಾ. ಶುಭವಾಗಲಿ ಗೆಳೆಯ. ಅಂದ ಹಾಗೆ ನಿನ್ನ ಮನೆಗೆ ನನ್ನನ್ನು ಕರೆಯಲೇ ಇಲ್ಲ! ಪರವಾಗಿಲ್ಲ. ನೀನು ಕರೆಯದಿದ್ದರೂ ನಾನೇ ಬರುವೆ.

**ಸುಧಾಮ** : ಅಯ್ಯೋ! ನನ್ನ ಮನೆಗೆ! ಬೇಡ ಕೃಷ್ಣಾ!

**ಕೃಷ್ಣ** : ಈಗ ಚಿಂತೆ ಬಿಟ್ಟು ಹೊರಡು. ಒಳ್ಳೆಯದಾಗಲಿ.

NOT TO BE REPUBLISHED @KTBS

## ದೃಶ್ಯ-೪

[ಸುಧಾಮನ ಸುಂದರವಾದ ಮನೆ. ಹೆಂಡತಿ, ಮಕ್ಕಳು ಹೊಸಬಟ್ಟೆ ಧರಿಸಿ ಮನೆಯಲ್ಲಿ ಸಂತೋಷದಿಂದ ಇರುವ ಸನ್ನಿವೇಶ.]

**ಸುಧಾಮ** : (ಆಶ್ಚರ್ಯದಿಂದ ಹೆಂಡತಿಗೆ) ನೀವು ಯಾರ ಮನೆಯಲ್ಲಿದ್ದೀರಿ?

**ಹೆಂಡತಿ** : ಇದು ನಮ್ಮ ಮನೆ ಕಣ್ರೀ!

**ಸುಧಾಮ** : ನಮ್ಮ ಗುಡಿಸಲು ಎಲ್ಲಿ?

**ಹೆಂಡತಿ** : ಆ ಗುಡಿಸಲಿನ ಜಾಗದಲ್ಲಿಯೇ ಈ ಅರಮನೆಯಂತಹ ಮನೆ ನಿರ್ಮಾಣವಾಗಿದೆ.

**ಸುಧಾಮ** : ಅರೆ! ನಾನು ಹೋಗಿ ಬರುವುದರೊಳಗೆ ಇದು ಹೇಗೆ ಸಾಧ್ಯವಾಯ್ತು?

**ಹೆಂಡತಿ** : (ನಗುತ್ತ) ನಿಮ್ಮ ಮಿತ್ರನ ಕೃಪೆಯಿಂದ.

**ಸುಧಾಮ** : (ಆಶ್ಚರ್ಯದಿಂದ) ನನ್ನ ಮಿತ್ರ ಶ್ರೀಕೃಷ್ಣನಿಂದ!

**ಹೆಂಡತಿ** : ಹೌದು, ಆ ಮಹಾರಾಯ ಶ್ರೀಕೃಷ್ಣನಿಂದಲೇ.

**ಸುಧಾಮ** : ನಾನು ಅವನಿಗೆ ಸಹಾಯ ಮಾಡು ಎಂದು ಕೇಳಿಯೇ ಇಲ್ಲ.

**ಹೆಂಡತಿ** : ನಿಜವಾಗಿಯೂ!

**ಸುಧಾಮ** : ಸತ್ಯವಾಗಿಯೂ.

**ಹೆಂಡತಿ** : ನೀವು ದ್ವಾರಕಾ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರ ದಂಡು ಬಂತು. ಬೇಕಾದ ಎಲ್ಲ ವಸ್ತುಗಳನ್ನು ತಂದರು. ಚಕಚಕಾಂತ ಮನೆ ನಿರ್ಮಿಸಿದರು. ನಮಗೆಲ್ಲ ಹೊಸ ಉಡುಪು, ಆಭರಣಗಳನ್ನು ಸಹ ಕೊಟ್ಟರು.

**ಸುಧಾಮ** : ಪರಮಾಶ್ಚರ್ಯ, ನನ್ನ ಮನದ ಇಂಗಿತವನ್ನು ತಿಳಿದುಕೊಂಡು ಎಲ್ಲಾ ರೀತಿಯ ಸಹಾಯ ಮಾಡಿದ್ದಾನೆ ಶ್ರೀಕೃಷ್ಣ.

@KTBS NOT TO BE REPUBLISHED



**ಹೆಂಡತಿ** : ನೀವು ತೆಗೆದುಕೊಂಡು ಹೋದ ಅವಲಕ್ಕಿಯನ್ನು ಅವರಿಗೆ ನೀಡಿದಿರಾ?

**ಸುಧಾಮ** : ಹೂಂ! ಕೊಟ್ಟೆ. ಬಹಳ ಆನಂದದಿಂದ ತಿಂದು, ಹೆಂಡತಿ ರುಕ್ಮಿಣಿಗೂ ತಿನ್ನಿಸಿದ.

**ಹೆಂಡತಿ** : ಅಬ್ಬಾ.......! ಬಡವರ ಮನೆ ಅವಲಕ್ಕಿಯನ್ನು ಸಂತೋಷವಾಗಿ ತಿಂದರಲ್ಲ. ಇದು ಅವರ ನಿಜವಾದ ಸ್ನೇಹ ಹಾಗೂ ದೊಡ್ಡ ಗುಣ. ಮತ್ತೆ ನೀವು ಯಾಕೆ ಸಹಾಯ ಕೇಳಲಿಲ್ಲ?

**ಸುಧಾಮ** : ಆತ ಸತ್ಕಾರ ಮಾಡಿದ್ದು ನೋಡಿ ನನ್ನ ಮನಸ್ಸು ನಾಚಿ ಕುಗ್ಗಿ ಹೋಯಿತು. ಮತ್ತೆ ಏನನ್ನು ಕೇಳಲೂ ಮನಸ್ಸಾಗಲಿಲ್ಲ.

**ಹೆಂಡತಿ** : ನೀವು ಕೇಳಲಿಲ್ಲ ನಿಜ, ಆದರೆ ಆ ಶ್ರೀಕೃಷ್ಣ ಪರಮಾತ್ಮನೇ ತಮ್ಮ ಕರ್ತವ್ಯ ಮಾಡಿದ್ದಾರೆ.

**ಸುಧಾಮ** : ಮಕ್ಕಳೆಲ್ಲಾ ಎಲ್ಲಿದ್ದಾರೆ?

(ಮಕ್ಕಳ ಆಗಮನ)

**ಮಗಳು** : ಅಪ್ಪಾ.....ನನ್ನ ಹೊಸ ಬಟ್ಟೆ ನೋಡಿ, ಎಷ್ಟು ಚೆನ್ನಾಗಿದೆ ಸರ, ಓಲೆ, ಬಳೆ ಎಲ್ಲ......

**ಮಗ** : ಅಪ್ಪಾ..... ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ, ನೋಡಿ.

**ಸುಧಾಮ** : ನನಗೆ ಬೇಡ, ನೀವೆಲ್ಲ ಧರಿಸಿಕೊಳ್ಳಿ. ನನಗೆ ಆ ಕೃಷ್ಣದೇವನ ಸ್ನೇಹವೇ ರೇಷ್ಮೆ ಬಟ್ಟೆ, ಅವನ ಮಾತೆ ನನಗೆ ಆಭರಣ. ಅವನಂತಹ ಗೆಳೆಯನನ್ನು ಪಡೆದ ನಾನೇ ಧನ್ಯ.

(ಎಲ್ಲರೂ ನರ್ತಿಸುವರು.)

(ಹಿನ್ನೆಲೆಯಲ್ಲಿ ಶ್ರೀಕೃಷ್ಣ ಹಾಗೂ ರುಕ್ಮಿಣಿ ನರ್ತಿಸುತ್ತ ಸಾಗುವರು)

**ಕೌಶಲ** : ಆಲಿಸುವುದು.

**ಸಾಮರ್ಥ್ಯ** : ಸಂವಾದ, ಚರ್ಚೆ ಮತ್ತು ನಾಟಕಗಳನ್ನು ಆಲಿಸಿ ಅಭಿನಯಕ್ಕೆ ತಕ್ಕಂತೆ ಅರ್ಥ ಮಾಡಿಕೊಳ್ಳುವುದು.

@KTBS NOT TO BE REPUBLISHED

**ಕವಿ ಕೃತಿ ಪರಿಚಯ:**



**ವಿ.ಎಸ್. ಶಿರಹಟ್ಟಿಮಠರು** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿಯ ಶ್ರೀ ವೀರಭದ್ರೇಶ್ವರ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದಾರೆ.

**ಗದಗ ಜಿಲ್ಲೆಯ ಹೊಂಬಳದಲ್ಲಿ ದಿನಾಂಕ ೧–೨–೧೯೫೩** ರಂದು ಜನಿಸಿದ ವಿ.ಎಸ್. ಶಿರಹಟ್ಟಿಮಠರ ತಂದೆ ಶಂಕರಯ್ಯ, ತಾಯಿ ಗುರುಸಿದ್ಧವ್ವ. ಅನುವಾದಕರಾಗಿ, ನಾಟಕಕಾರರಾಗಿ ಗುರುತಿಸಿಕೊಂಡಿದ್ದಾರೆ. ತುಂಬಿದ ಕೊಡ, ನರಗುಂದ ಬಂಡಾಯ, ಮಾಡಿದ್ದುಣ್ಣೋ ಮಾರಾಯ, ಗುಣವಂತ ರಾಜಕುಮಾರ ಮುಂತಾದ ಅರವತ್ತಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ.

ರಂಗಭೂಮಿ ಹಾಗೂ ಮಕ್ಕಳ ರಂಗಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ೨೦೦೨ ರಲ್ಲಿ **ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿ** ನೀಡಿ ಗೌರವಿಸಿದೆ. ವಿ.ಎಸ್ ಶಿರಹಟ್ಟಿಮಠರವರ **"ಹೂವಿನ ಹಂದರ"** ಕೃತಿಯಿಂದ **'ಕೃಷ್ಣ –ಸುಧಾಮ'** ನಾಟಕವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

## ಪದಗಳ ಅರ್ಥ

ಕಂಗಾಲಾಗು – ಕಂಗೆಡು, ತಬ್ಬಿಬ್ಬಾಗು. ವಿಧೇಯತೆ – ನಮ್ರತೆ, ಅನುಸರಿಸುವ ಗುಣ. ಪಾಂಡಿತ್ಯ – ವಿದ್ವತ್ತು. ಸ್ನೇಹ–ಗೆಳೆತನ, ಮಿತ್ರತ್ವ. ಸಂಕೋಚ – ಕುಗ್ಗುವುದು, ಮುದುಡುವುದು. ಕೃಪೆ – ದಯೆ, ಕರುಣೆ. ಆಶ್ಚರ್ಯ – ವಿಸ್ಮಯ, ಬೆರಗು. ಆಭರಣ– ಒಡವೆ. ಇಂಗಿತ – ಆಶಯ.

**ವಿವರ ತಿಳಿಯಿರಿ:**

**ದಾಯಾದಿ** : ಅಣ್ಣತಮ್ಮಂದಿರ ಮಕ್ಕಳು.

**ಶತಪತಿಸು** : ಹಿಂದಕ್ಕೆ ಮುಂದಕ್ಕೆ ನಡೆದಾಡು.

**ರಾಜಧರ್ಮ** : ಅರಸನು ಪ್ರಜೆಗಳ ಕ್ಷೇಮಕ್ಕಾಗಿ ಪಾಲಿಸಬೇಕಾದ ನೀತಿ.

**ಕಾಲಕೂಡಿಬರು** : ಸಮಯ, ಸಂದರ್ಭ ಒದಗಿ ಬರುವುದು.

**ಗುರುಕುಲ** : ಹಿಂದಿನ ಕಾಲದಲ್ಲಿ ಗುರುಗಳ ಮನೆಯೆ ಪಾಠಶಾಲೆ ಆಗಿರುತ್ತಿತ್ತು. ಅದನ್ನು ಗುರುಕುಲ ಎನ್ನುವರು.

## ಅಭ್ಯಾಸಗಳು

**ಅ. ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ಗೆಳೆಯ　　೨. ಹೆಂಡತಿ　　೩. ರಾಜ　　೪. ದುಡಿಮೆ

© KTBS NOT TO BE REPUBLISHED

**ಆ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಪರಮಮಿತ್ರ   ೨. ವಿಶ್ರಾಂತಿ   ೩. ಸತ್ಕಾರ   ೪. ಸಂತೋಷ   ೫. ಶ್ರಮಿಸು

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸುಧಾಮ ಯಾವುದನ್ನು ಮಾನವಧರ್ಮ ಎನ್ನುತ್ತಾನೆ?

೨. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?

೩. ಸುಧಾಮನ ಕಣ್ಣಲ್ಲಿ ನೀರು ಏಕೆ ಬಂತು?

೪. ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು?

೫. ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು?

**ಈ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕೃಷ್ಣ-ಸುಧಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ?

೨. ಕೃಷ್ಣನು ಸುಧಾಮನಿಗೆ ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿರಿ.

**ಉ. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?**

೧. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.

೨. ಹಸಿದಿರುವ ಮಕ್ಕಳಿಗೋಸ್ಕರವಾದರೂ ಹೋಗಿ ಕೇಳಿ.

೩. ನನಗೆ ಗುರುಕುಲದ ಜೀವನ ನೆನಪಾಗುತ್ತಿದೆ.

೪. ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ.

@KTBS NOT TO BE REPUBLISHED

## ವ್ಯಾಕರಣ ಮಾಹಿತಿ

**ನುಡಿಗಟ್ಟು : ವಿಶೇಷಾರ್ಥವುಳ್ಳ ಮತ್ತು ಒಳಾರ್ಥವುಳ್ಳ ಪದಪುಂಜವನ್ನು ನುಡಿಗಟ್ಟು ಎನ್ನುವರು.**

ನಮ್ಮ ಭಾವನೆಯನ್ನು ಸಂಗ್ರಹಿಸಿ ಅರ್ಥಪೂರ್ಣವಾಗಿ ವ್ಯಕ್ತಪಡಿಸಲು ಸಹಾಯಕವಾಗುವ ಪದಪುಂಜವೇ ನುಡಿಗಟ್ಟು. ಇದು ಭಾಷೆಯ ಬಿಗುವನ್ನು ಹೆಚ್ಚಿಸಿ ಮಾತಿನ ಸೊಬಗನ್ನು ಇಮ್ಮಡಿಗೊಳಿಸುತ್ತದೆ.

ಉದಾ: ೧. ಅಟ್ಟಕ್ಕೇರಿಸು - ಹೊಗಳಿ ಹೊಗಳಿ ಉಬ್ಬಿಸು.

೨. ಗುಡ್ಡವನ್ನು ಬೆಟ್ಟ ಮಾಡು - ಅಲ್ಪ ವಿಷಯವನ್ನು ದೊಡ್ಡದು ಮಾಡು.

೩. ಕಂಬಿ ಕೀಳು – ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.

೪. ನೀರಿನ ಮೇಲೆ ಹೋಮ – ಭಾರಿ ದೊಡ್ಡ ಕೆಲಸ ಮಾಡಿದರೂ ಏನೂ ಪ್ರತಿಫಲ ದೊರಕದೆ ಹೋಗುವುದು.

೫. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ – ಸಣ್ಣವರ ಮೇಲೆ ಬಲ ಪ್ರದರ್ಶನ.

**ಗಾದೆ :**

ನಾಣ್ನುಡಿ, ಲೋಕೋಕ್ತಿ : ಒಂದು ವಿಷಯವನ್ನು ಕುರಿತು ಪರಿಣಾಮಕಾರಿಯಾಗಿ ತಿಳಿ ಹೇಳುವ ಘನವಾದ ಅರ್ಥವನ್ನು ಹೊಂದಿರುವ ಹೇಳಿಕೆಗಳೇ ಗಾದೆ ಮಾತುಗಳು. ನೂರು ಮಾತುಗಳಲ್ಲಿ ಹೇಳುವುದನ್ನು ಒಂದು ವಾಕ್ಯದಲ್ಲಿ ಗಾದೆ ಹೇಳಬಲ್ಲದು. ಗಾದೆ ಜಾನಪದ ಸಾಹಿತ್ಯ ಪ್ರಕಾರಗಳಲ್ಲೊಂದು. ಗಾದೆ ಅನುಭವದಿಂದ ಹುಟ್ಟಿಕೊಳ್ಳುವಂಥದ್ದು.

**ಉದಾ :**

೧. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

೨. ನಾಲಿಗೆ ಚೆನ್ನಾಗಿದ್ದರೆ ನಾಡೆಲ್ಲಾ ಒಳ್ಳೆಯದು.

೩. ಕೈಕೆಸರಾದರೆ ಬಾಯಿ ಮೊಸರು.

೪. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

೫. ಕುಣಿಯಲಾರದವ ನೆಲ ಡೊಂಕು ಅಂದ.

**ಒಗಟು :**

ಒಗಟನ್ನು ಒಂಟು, ಒಡಪು, ಒಡಚು, ಒಡಗತೆ ಇತ್ಯಾದಿಯಾಗಿ ಕನ್ನಡದಲ್ಲಿ ನಾನಾ ರೂಪಗಳಲ್ಲಿ ಹೇಳುತ್ತಾರೆ. ಇಂಗ್ಲಿಷಿನಲ್ಲಿ ಒಗಟಿಗೆ Riddle ಎಂದು ಹೇಳುತ್ತಾರೆ. ಮುಖ್ಯವಾಗಿ ಒಗಟು ಎಂದಾಗ ಒಂದು ಸಮಸ್ಯೆ ಎಂದರ್ಥವಾಗುವುದು. ಒಗಟುಗಳು ಬುದ್ಧಿಪ್ರಧಾನವಾದವುಗಳಾಗಿದ್ದು ಅರ್ಥಗರ್ಭಿತವಾಗಿರುತ್ತವೆ.

**ಉದಾ :** ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ. ( ಕಪ್ಪೆ )

ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ.
ಮೂರು ಕಣ್ಣುಂಟು ಹರನಲ್ಲ, ಹಾಗಾದರೆ ನಾನು ಯಾರು? (ತೆಂಗಿನ ಕಾಯಿ)

ಮುಳ್ಳುಗಳಿವೆ ಅಪಾಯವಿಲ್ಲ. ಸಂಖ್ಯೆಗಳಿವೆ ಲೆಕ್ಕದ ಪುಸ್ತಕವಲ್ಲ,
ಗಂಟೆ ಹೊಡೆಯುತ್ತದೆ ದೇವಾಲಯವಲ್ಲ. ( ಗಡಿಯಾರ )

**ಇಂತಹ ಅನೇಕ ಒಗಟುಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಮಿತ್ರರೊಂದಿಗೆ ಹಂಚಿಕೊಳ್ಳಿರಿ.**

@KTBS NOT TO BE REPUBLISHED

## ಭಾಷಾ ಆಟಗಳು

### ಅ. ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದು.

೧. ಹಳ್ಳಿಜೀವನ ಚಂದವೋ? ಪಟ್ಟಣ ಜೀವನ ಚಂದವೋ?

೨. ನಮ್ಮ ಕೆಲಸ ಮಾತ್ರ ಮಾಡ್ಕೋಬೇಕಾ? ಬೇರೆಯವರ ಕೆಲಸ ಮಾಡಿ ಕೊಡ್ಬೇಕಾ?

೩. ಕಥೆ ಇಷ್ಟಾನಾ? ಹಾಡು ಇಷ್ಟಾನಾ? ಏಕೆ?

### ಆ. ಕೃಷ್ಣ–ಅರ್ಜುನ–ಭೀಮ

೧. ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು.

೨. ಅವರ ಕಿವಿಯಲ್ಲಿ ಮೇಲಿನದೊಂದು ಹೆಸರನ್ನು ಹೇಳುತ್ತಾ ಬರುವುದು.

೩. ಯಾರುಯಾರಿಗೆ ಯಾವ ಹೆಸರು ಬಂದಿದೆಯೋ ಇನ್ನೊಬ್ಬರಿಗೆ ಹೇಳಬಾರದು.

೪. ಎಲ್ಲರನ್ನು ಸ್ವಲ್ಪ ಹಿಂದಕ್ಕೆ ಕಳಿಸುವುದು.

೫. ಹೆಸರಿಗೆ ತಕ್ಕಂತೆ ನಟನೆ ಮಾಡುತ್ತಾ ಒಂದೇ ಪಾತ್ರದವರು ಒಂದು ಕಡೆ ಸೇರಬೇಕು. ಯಾರು ಸನ್ನೆ ಮಾಡಬಾರದು. ಮಾತನಾಡಬಾರದು.

೬. ಯಾವ ಪಾತ್ರದ ಗುಂಪು ಮೊದಲು ಸೇರುತ್ತದೋ ಅವರು ವಿಜಯಶಾಲಿಗಳು.

(ಕೃಷ್ಣನ ಹೆಸರು ಬಂದವರು ಕೊಳಲೂದುವ /ಅಂಬೆಗಾಲಿಟ್ಟು ನಡೆಯುವ / ಬೆಣ್ಣೆ ತಿನ್ನುವ ನಟನೆ ಮಾಡಬಹುದು.)

NOT TO BE REPUBLISHED ©KTBS

## ಯೋಜನೆ

### ಅ. ಕೆಳಗೆ ಹೇಳಿದ ಮಕ್ಕಳ ನಾಟಕ ಪುಸ್ತಕಗಳನ್ನು ಸಂಗ್ರಹಿಸಿರಿ. ಅವುಗಳಲ್ಲಿ ಒಂದು ನಾಟಕವನ್ನು ನಿಮ್ಮ ಶಾಲಾ ಕಾರ್ಯಕ್ರಮದಲ್ಲಿ ಅಭಿನಯಿಸಿರಿ.

೧. ಕುವೆಂಪು– ಬೊಮ್ಮನಹಳ್ಳಿಯ ಕಿಂದರಿ ಜೋಗಿ

೨. ಬಿ.ವಿ.ಕಾರಂತ– ಪಂಜರ ಶಾಲೆ

೩. ವೈದೇಹಿ– ಸೂರ್ಯ ಬಂದ

೪. ಕೆ.ವಿ. ಸುಬ್ಬಣ್ಣ– ನೀಲಿ ಕುದುರೆ

೫. ಚಂದ್ರಶೇಖರ ಕಂಬಾರ– ಕಿಟ್ಟಿಕಥೆ

## ಪೂರಕ ಓದು

೧. ಬುದ್ಧನು ಅಂಗುಲೀಮಾಲನ ಮನಸ್ಸನ್ನು ಪರಿವರ್ತಿಸಿದ ಕಥೆ ಓದಿರಿ.

೨. ಚಂದಮಾಮ, ಅಮರಚಿತ್ರಕಥಾ ಮುಂತಾದ ಪುಸ್ತಕಗಳಲ್ಲಿ ಬರುವ ಪುರಾಣದ ಕಥೆಗಳನ್ನು ಓದಿರಿ.

## ಶುಭ ನುಡಿ

೧. ಯಾವುದು ಜೀವಿಗಳ ಹಿತ ಸಾಧನೆಗೆ ಸಹಕಾರಿಯಾಗುವುದೋ ಅದೇ ಧರ್ಮ.

೨. ಮಾನವೀಯತೆಯೇ ಮನುಷ್ಯ ಧರ್ಮ.

೩. ಪ್ರೀತಿಯು ನಮ್ಮ ಲಾಂಛನವಾಗಿರಲಿ, ಮಾನವೀಯತೆಯು ನಮ್ಮ ಆಲೋಚನೆಯಾಗಿರಲಿ.

* * * * *

@KTBS
NOT TO BE REPUBLISHED

# ೪. ಡಾ. ರಾಜಕುಮಾರ್

I7Y4MZ

– ಡಾ. ಎಚ್.ಎಸ್. ಸತ್ಯನಾರಾಯಣ

**ಪ್ರವೇಶ :** ಯಾವುದೇ ಬಗೆಯ ಮೂಲಭೂತ ಸೌಕರ್ಯಗಳೂ ಇಲ್ಲದೆ ಕಡುಬಡತನದಲ್ಲಿ ಅರಳಿದ ಪ್ರತಿಭೆಯೊಂದು ನಾಡಿನ ಜನರ ಕಣ್ಮಣಿಯಾಗುವುದು, ಎತ್ತರದ ಸಾಧನೆ ಮಾಡಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆ ನಿಲ್ಲುವುದು ಸಾಮಾನ್ಯದ ಮಾತಲ್ಲ. ನಾಡೋಜ, ನಟಸಾರ್ವಭೌಮ ಡಾ. ರಾಜಕುಮಾರ ಅವರ ಬದುಕು ಕೂಡ ಇಂತಹ ಅಸಾಮಾನ್ಯ ಸಾಧನೆಗೆ ಮಾದರಿಯಾಗಿದೆ. ತಮ್ಮ ಅಪೂರ್ವ ಪ್ರತಿಭೆಯ ನಟನೆ, ಗಾಯನ, ಕನ್ನಡ ಪರವಾದ ಉಜ್ವಲ ಪ್ರೀತಿ ಮತ್ತು ಸುಸಂಸ್ಕೃತ ಸಜ್ಜನಿಕೆಯ ನಡವಳಿಕೆಯಿಂದ ಡಾ. ರಾಜಕುಮಾರ್ ಅವರು ನಮ್ಮ ನಾಡು ಕಂಡ ಮೇರು ವ್ಯಕ್ತಿತ್ವವೆನಿಸಿದ್ದಾರೆ. ಅವರ ಬದುಕಿನ ಕೆಲವು ವಿವರಗಳ ಅವಲೋಕನದಿಂದ ನಾಡಿನ ಮಕ್ಕಳು ಸ್ಫೂರ್ತಿಹೊಂದಬಲ್ಲರೆಂಬುದು ಈ ಪಾಠದ ಆಶಯವಾಗಿದೆ.



ಡಾ. ರಾಜಕುಮಾರ್ ಅವರು ಚಾಮರಾಜನಗರ ಜಿಲ್ಲೆಗೆ ಸೇರಿದ ಗಾಜನೂರಿನಲ್ಲಿ 24 ಏಪ್ರಿಲ್ 1929ರಂದು ಜನಿಸಿದರು. ಸಿಂಗಾನಲ್ಲೂರು ಮೂಲದ ಶ್ರೀಯುತ ಪುಟ್ಟಸ್ವಾಮಯ್ಯನವರು ರಾಜಕುಮಾರ್ ಅವರ ತಂದೆ. ತಾಯಿ ಗಾಜನೂರಿನವರಾದ ಶ್ರೀಮತಿ ಲಕ್ಷ್ಮಮ್ಮನವರು. ಈ ದಂಪತಿ ಗಂಡು ಮಗುವನ್ನು ಕರುಣಿಸೆಂದು ತಮ್ಮ ಇಷ್ಟದೈವ ಮುತ್ತತ್ತಿರಾಯನಿಗೆ ಹರಕೆ ಹೊತ್ತಿದ್ದರಂತೆ. ಹಾಗಾಗಿ ಆ ದೇವರ ಹೆಸರನ್ನೇ ಮಗನಿಗೆ ಇಟ್ಟರು. 'ರಾಜ' ಎಂಬುದು 'ರಾಯ' ಎಂಬುದರ ತದ್ಭವ ರೂಪವಾಗಿರುವುದರಿಂದ 'ಮುತ್ತುರಾಯ' ಸ್ವಾಮಿಯ ಹೆಸರು 'ಮುತ್ತುರಾಜ' ಎಂದಾಗಿದ್ದು ಮಾತ್ರವಲ್ಲ ಕನ್ನಡಿಗರ ಮನಗೆದ್ದ ರಾಜಕುಮಾರನೇ ಆಗಿದ್ದು ಆಕಸ್ಮಿಕವಲ್ಲ. ಮುತ್ತುರಾಜನೊಳಗಿನ ಪ್ರತಿಭೆಯು ವಿಕಾಸಗೊಂಡ ಪರಿ ಅದು. ಮಳೆಯಿಲ್ಲದೆ ಕಂಗೆಟ್ಟಿದ್ದ ನೆಲಕ್ಕೆ ಸ್ವಾತಿಯ ಮಳೆಸುರಿದು ತಂಪೆರೆಯುವ ತೆರದಿ ಜೋರು ಮಳೆ ಸುರಿಯುವಾಗ ಹುಟ್ಟಿದ ಮುತ್ತುರಾಜರ ಜನನದಿಂದ ಮನೆಮಂದಿಯೆಲ್ಲ ಸಂಭ್ರಮಪಟ್ಟರು.

ಬಾಲ್ಯದಲ್ಲಿಯೇ ಮುತ್ತುರಾಜರಿಗೆ ಬಡವರ ಕಷ್ಟ ಕಂಡು ಮರುಗುವ ಗುಣವಿತ್ತು. ಶಾಲೆಯಲ್ಲಿ ಕೂತಿದ್ದರೂ ಅವರ ಮನಸ್ಸು ಬಡತನ, ಹಸಿವು, ಕಷ್ಟಗಳತ್ತ ಹೊರಳುತ್ತಿತ್ತು. ಇದರೊಂದಿಗೆ ಹಳ್ಳಿಗಾಡಿನ ಸುಪ್ರಸನ್ನತೆ, ಸುಂದರ ಪರಿಸರ, ಮುಗ್ಧ ಜನರ ಆಚಾರ ವಿಚಾರಗಳು, ಹಳ್ಳ ಕೊಳ್ಳ, ಕಾಡು ಮುಂತಾದವೆಲ್ಲ ಮುತ್ತುರಾಜರ ಭಾವಲೋಕವನ್ನು ಹಿಗ್ಗಿಸುತ್ತಿತ್ತು. ಶಾಲೆಯಲ್ಲಿ ಕಲಿತದ್ದು

©KTBS NOT TO BE REPUBLISHED

ಮೂರನೆಯ ತರಗತಿಯವರೆಗೆ ಮಾತ್ರವಾದರೂ ಆ ವಯಸ್ಸಿನಿಂದಲೇ ಆದ ಲೋಕಾನುಭವದ ಶಿಕ್ಷಣದ ಪಾತ್ರ ಇವರ ವ್ಯಕ್ತಿತ್ವವನ್ನು ರೂಪಿಸಿತು. ಇವರ ತಂದೆ ಪುಟ್ಟಸ್ವಾಮಯ್ಯನವರು ಅದ್ಭುತ ರಂಗ ಕಲಾವಿದರಾಗಿದ್ದರು. ಸೋದರ ಮಾವಂದಿರು ಸೊಗಸಾದ ಗಾಯಕರಾಗಿದ್ದರು. ಈ ಪರಿಸರದಲ್ಲಿ ತಮ್ಮ ಬಾಲ್ಯವನ್ನು ಕಳೆದ ಮುತ್ತುರಾಜರಿಗೆ ಸಹಜವಾಗಿಯೇ ರಂಗಭೂಮಿ ಕೈಬೀಸಿ ಕರೆಯಿತು.

ಮುತ್ತುರಾಜ ಅವರು ಬಾಲ ನಟನಾಗಿ ಕಲಾ ಪ್ರಪಂಚಕ್ಕೆ ಕಾಲಿಟ್ಟರು. ಗುಬ್ಬಿವೀರಣ್ಣನವರ ನಾಟಕ ಕಂಪನಿಯಲ್ಲಿ ಮೊದಮೊದಲು ಸಖಿ, ಸೇವಕಿಯಂತಹ ಸಣ್ಣಪುಟ್ಟ ಪಾತ್ರಗಳನ್ನು ಮಾಡಬೇಕಾಯಿತು. ಆಮೇಲೆ ಮತ್ತೋರ್ವ ಹಿರಿಯ ರಂಗಭೂಮಿಯ ಕಲಾವಿದರಾದ ಶ್ರೀ ಸುಬ್ಬಯ್ಯನಾಯ್ಡು ಅವರ ನಾಟಕ ಕಂಪನಿಗೆ ಸೇರಿ ಅನೇಕ ಮಹತ್ವದ ಪಾತ್ರಗಳನ್ನು ನಿರ್ವಹಿಸುತ್ತಾ ಬೆಳೆಯುತ್ತಿರುವಾಗ ತಂದೆಯವರ ಅಕಾಲಿಕ ಮರಣದ ದುಃಖ ಎದುರಾಯಿತು. ಇಡೀ ಕುಟುಂಬವನ್ನು ಕಾಪಾಡಬೇಕಾದ ಜವಾಬ್ದಾರಿಯನ್ನು ಆತ್ಮವಿಶ್ವಾಸದಿಂದ ಎದುರಿಸಿದ ಮುತ್ತುರಾಜರು, ಈ ಅನುಭವ ಮತ್ತು ಅಭಿನಯ ಎರಡರಿಂದಲೂ ಮಾಗುತ್ತ ಸಾಗಿದರು. ಕಷ್ಟದ ದಿನಗಳಲ್ಲೇ ಕಲಾವಿದನ ಕೈ ಹಿಡಿದು ಸಂಸಾರದ ಬದುಕಿಗೆ ಹೆಗಲೆಣೆಯಾದವರು ಮುತ್ತುರಾಜರ ಸೋದರ ಮಾವನ ಮಗಳಾದ ಪಾರ್ವತಮ್ಮನವರು.

ಭಕ್ತ ಪ್ರಹ್ಲಾದ, ಶ್ರೀನಿವಾಸ ಕಲ್ಯಾಣದಂತಹ ಪೌರಾಣಿಕ ಚಲನಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ 1954ರಲ್ಲಿ ತೆರೆಕಂಡ 'ಬೇಡರ ಕಣ್ಣಪ್ಪ' ಎಂಬ ಚಿತ್ರವು ಮುತ್ತುರಾಜರ ಬದುಕಿನಲ್ಲಿ ಹೊಸ ಅಧ್ಯಾಯ ಬರೆಯಿತು. ಈ ಚಿತ್ರದ ನಿರ್ದೇಶಕರಾದ ಎಚ್.ಎಲ್.ಎನ್. ಸಿಂಹ ಅವರು 'ಮುತ್ತುರಾಜ' ಎಂಬ ಹೆಸರನ್ನು 'ರಾಜಕುಮಾರ' ಎಂದು ಬದಲಾಯಿಸಿ, ಬೆಳ್ಳಿತೆರೆಗೆ ಪರಿಚಯಿಸಿದರು. ತಮ್ಮ ಹೆಸರನ್ನು ಬದಲಾಯಿಸುವುದು ಮುತ್ತುರಾಜರಿಗೆ ಇಷ್ಟವಿರಲಿಲ್ಲವಂತೆ. ಆದರೆ ಕನ್ನಡಿಗರು ರಾಜಕುಮಾರ ಎಂಬ ಹೆಸರನ್ನೇ ತಮ್ಮ ಹೃದಯ ಸಿಂಹಾಸನದಲ್ಲಿರಿಸಿಕೊಳ್ಳುವಂತೆ ತಾವು ಅಭಿನಯಿಸಿದ ಪ್ರತಿಯೊಂದು ಪಾತ್ರಕ್ಕೂ ರಾಜಕುಮಾರ್ ಜೀವ ತುಂಬಿದರು. ರಾಜಕುಮಾರ್ ಅವರು ಅಭಿನಯಿಸಿದ ಭಕ್ತಿಪ್ರಧಾನವಾದ ಭಕ್ತವಿಜಯ, ಓಹಿಲೇಶ್ವರ, ಶ್ರೀಕೃಷ್ಣ ಗಾರುಡಿ, ಭಕ್ತಕುಂಬಾರ, ಸಂತ ತುಕಾರಾಂ, ಭಕ್ತ ಕನಕದಾಸ ಮುಂತಾದ ಚಿತ್ರಗಳನ್ನು ನೋಡಿದ ಚಿತ್ರರಸಿಕರು ರಾಜಕುಮಾರ ಅವರ ಮನೋಜ್ಞ ಅಭಿನಯಕ್ಕೆ ಸೋತುಹೋದರು. ಅತ್ಯಂತ ಯಶಸ್ಸುಗಳಿಸಿದ ಭಕ್ತಪ್ರಹ್ಲಾದ, ಮಯೂರ, ಬಭ್ರುವಾಹನ, ಕವಿರತ್ನ ಕಾಳಿದಾಸ ಮುಂತಾದ ಚಿತ್ರಗಳಲ್ಲಿನ ಅಭಿನಯವಂತೂ ರಾಜಕುಮಾರರಿಗೆ ಅಪಾರವಾದ ಜನಪ್ರೀತಿ, ಕೀರ್ತಿ, ಪುರಸ್ಕಾರಗಳನ್ನು ಹೊತ್ತು ತಂದವು. ಸಂಧ್ಯಾರಾಗ, ಸನಾದಿ ಅಪ್ಪಣ್ಣ, ಜೀವನಚೈತ್ರ, ಕಸ್ತೂರಿ ನಿವಾಸ, ಬಂಗಾರದ ಮನುಷ್ಯ, ದೇವತಾ ಮನುಷ್ಯ ಮುಂತಾದ ಸಾಮಾಜಿಕ ಚಿತ್ರಗಳು ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆಯನ್ನು ಬರೆದವು. ಜನ ಮೆಚ್ಚಿದ 'ರಸಿಕರ ರಾಜ' ಎನಿಸಿದ್ದು ಹೀಗೆ. ಯೋಗದಿಂದ ಸಾಧಿಸಿದ್ದ ಸುಂದರ ಮೈಕಟ್ಟು, ಮುಗ್ಧಸ್ನಿಗ್ಧ ನಗೆಯ ಮುಖಭಾವ, ಸರಳ ಸೊಬಗಿನ ನಯವಂತಿಕೆಯ ಆಚಾರ ವಿಚಾರ ಇವೆಲ್ಲವೂ ರಸಿಕರ ರಾಜನ ಗುಣ ಶ್ರೀಮಂತಿಕೆ ಮತ್ತು ವ್ಯಕ್ತಿತ್ವದ ಬಗೆ.

©KTBS
NOT TO BE REPUBLISHED

ತಮ್ಮ ಸೊಗಸಾದ ಕಂಠ ಮತ್ತು ಹಾಡುಗಾರಿಕೆಯಿಂದಲೂ ಕನ್ನಡಿಗರ ಮನಸೂರೆಗೊಂಡ ರಾಜಕುಮಾರ್ ಅವರು 'ಗಾನಗಂಧರ್ವ' ಎನಿಸಿದರು. 'ಸಂಪತ್ತಿಗೆ ಸವಾಲ್' ಎಂಬ ಚಿತ್ರದಲ್ಲಿ ನಾಯಕ ಎಮ್ಮೆಯ ಮೇಲೆ ಕುಳಿತು ಹಾಡಿದ "ಯಾರೇ ಕೂಗಾಡಲಿ, ಊರೇ ಹೋರಾಡಲಿ" ಎಂಬ ಗೀತೆಯು ದಿನ ಬೆಳಗಾಗುವುದರೊಳಗೆ ರಾಜಕುಮಾರ್ ಅವರನ್ನು ಹಿನ್ನೆಲೆಗಾಯಕರನ್ನಾಗಿ ಪರಿಚಯಿಸಿತು. ಚಿಕ್ಕಂದಿನಿಂದಲೂ ಇವರಿಗೆ ಹಾಡಲು ಬರುತ್ತಿತ್ತು. ಜೊತೆಗೆ, ನಾಟಕಗಳಲ್ಲಿ ಹಾಡಿದ ಅನುಭವವೂ ಇತ್ತು. ಸಂಪತ್ತಿಗೆ ಸವಾಲ್ ಚಿತ್ರದಿಂದ ತಮ್ಮ ಪಾತ್ರಗಳಿಗೆ ತಾವೇ ಹಾಡಲಾರಂಭಿಸಿದ ರಾಜಕುಮಾರ್ ಅವರು ನೂರಾರು ಚಲನಚಿತ್ರ ಗೀತೆಗಳನ್ನೂ, ಸಾವಿರಾರು ಭಕ್ತಿಗೀತೆಗಳನ್ನೂ, ಅನೇಕ ಭಾವಗೀತೆಗಳನ್ನೂ ಹಾಡಿದ್ದಾರೆ. ಜೀವನ ಚೈತ್ರ ಚಿತ್ರದ "ನಾದಮಯ ಈ ಲೋಕವೆಲ್ಲಾ ನಾದಮಯ" ಎಂಬ ಅದ್ಭುತ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಹಿರಿಮೆಯೂ ಇವರದಾಗಿದೆ.

ನಟರಾಗಿ ಮಾತ್ರವಲ್ಲದೆ ಅನನ್ಯ ಕನ್ನಡ ಪ್ರೀತಿಗಾಗಿಯೂ ನಾಡು ರಾಜಕುಮಾರ್ ಅವರನ್ನು ಸದಾ ಸ್ಮರಿಸುತ್ತದೆ. ಎಂತಹ ಆಮಿಷವೊಡ್ಡಿದರೂ ರಾಜಕುಮಾರ ಅವರು ಕನ್ನಡ ಬಿಟ್ಟು ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಲು ಒಪ್ಪಲಿಲ್ಲ. ಅಂತಹ ಕನ್ನಡ ಪ್ರೀತಿ ಅವರದು. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆ, ಮಾನ್ಯತೆಗಳು ದೊರಕಬೇಕೆಂಬ ಸಂಕಲ್ಪದಿಂದಾರಂಭಿಸಿದ ಗೋಕಾಕ್ ಚಳುವಳಿಗೆ ಧುಮುಕಿದ ರಾಜಕುಮಾರ್ ಅವರು ಕನ್ನಡಿಗರ ಭಾವನೆಯ ಸ್ವರೂಪದ ಪ್ರತಿರೂಪದಂತೆ ಕಾಣಿಸಿಕೊಂಡು ಕನ್ನಡದ ಹೋರಾಟಕ್ಕೆ ಬಲ ತಂದರು. ತಾವು ಅಭಿನಯಿಸಿದ ಎಲ್ಲ ಪಾತ್ರಗಳು ಆಡುವ ಸರಳ, ಸೊಗಸಾದ ಕನ್ನಡದ ನುಡಿಗಳಿಂದ ಅವರು ಕನ್ನಡಿಗರ ಎದೆಗಳಲ್ಲಿ ಸವಿಗನ್ನಡದ ಕಂಪು ತುಂಬಿದ್ದನ್ನು ನಾವು ಎಂದಿಗೂ ಮರೆಯುವಂತಿಲ್ಲ.

ಅಶಕ್ತ ಕಲಾವಿದರ ನೆರವಿಗಾಗಿ ರಾಜಕುಮಾರ್ ಅವರು ಅನೇಕ ರಸಸಂಜೆ ಕಾರ್ಯಕ್ರಮಗಳನ್ನು ನಡೆಸಿ ನೆರವಿಗೆ ಬಂದಿದ್ದಾರೆ. ಬಡತನದಲ್ಲಿ ಬೆಳೆದು ಬಂದ ಅವರಿಗೆ ಹಸಿವಿನ, ಅನ್ನದ ಬೆಲೆ ಚೆನ್ನಾಗಿ ತಿಳಿದಿತ್ತು. ಲೆಕ್ಕವಿಲ್ಲದಷ್ಟು ಸಹ ಕಲಾವಿದರು, ತಂತ್ರಜ್ಞರು, ಚಲನಚಿತ್ರ ಕಾರ್ಮಿಕರು, ಸಂಘ ಸಂಸ್ಥೆಗಳು ರಾಜಕುಮಾರ್ ಅವರಿಂದ ಆರ್ಥಿಕ ನೆರವು ಪಡೆದ ಉದಾಹರಣೆಗಳಿವೆ. ರಾಜಕುಮಾರ್ ಅವರ ಕರುಣಾಮಯಿ ಹೃದಯ ಸಂಪನ್ನತೆಗೆ ಇವು ಕೆಲವು ಉದಾಹರಣೆಗಳು ಮಾತ್ರ.

ರಾಜಕುಮಾರರ ಕುಟುಂಬವೇ ಕನ್ನಡ ಚಿತ್ರರಂಗದ ದೊಡ್ಡ ಮನೆಯೆನಿಸಿದೆ. ಶ್ರೀಮತಿ ಪಾರ್ವತಮ್ಮನವರು ಚಿತ್ರ ನಿರ್ಮಾಪಕರಾಗಿ ವಿತರಕರಾಗಿ ದೊಡ್ಡ ಸಾಧನೆಗೈದರೆ, ಮಕ್ಕಳಾದ ರಾಘವೇಂದ್ರ ರಾಜಕುಮಾರ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್ ನಟರಾಗಿ, ಗಾಯಕರಾಗಿ ನಾಡಿನ ಜನರ ಮನಗೆದ್ದವರು. ಪುನೀತ್ ರಾಜಕುಮಾರ್ ತಮ್ಮ ಬಾಲ್ಯದಲ್ಲಿಯೇ 'ಬೆಟ್ಟದ ಹೂ' ಚಿತ್ರದ ಅಮೋಘ ಅಭಿನಯಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ಅವರು ತಂದೆಯಂತೆಯೇ 'ಕರ್ನಾಟಕ ರತ್ನ' ಎನ್ನಿಸಿದ ಸಾಹಸಗಾಥೆ ಬೇರೆಯದೇ ಇದೆ. ರಾಜಕುಮಾರ್ ಅವರ ಮೊಮ್ಮಕ್ಕಳೂ ಸಿನಿಮಾ ನಾಯಕರಾಗಿರುವುದು ಈ ಕಲಾಸಂಪನ್ನತೆಯು ಮೂರನೇ ತಲೆಮಾರಿಗೂ ಹರಿದು ಬಂದಿರುವುದರ ಪ್ರತೀಕವಾಗಿದೆ.

© KTBS NOT TO BE REPUBLISHED

ರಾಜಕುಮಾರ್ ಎಂಬ ಸಮ್ಮೋಹಕ ಪ್ರತಿಭೆಗೆ ಮನಸೋತ ಕನ್ನಡಿಗರು ಅವರನ್ನು ನಟ ಸಾರ್ವಭೌಮ, ಕಲಾ ಕೌಸ್ತುಭ, ಕಲಾ ಕೇಸರಿ, ವರನಟ, ರಸಿಕರ ರಾಜ, ಗಾನಗಂಧರ್ವ, ಕನ್ನಡದ ಕಣ್ಮಣಿ ಮುಂತಾದ ವಿಶೇಷಣಗಳಿಂದ ಕರೆದು ಸಂತೋಷಪಟ್ಟರೆ, 1979ರಲ್ಲಿ ಮೈಸೂರು ವಿಶ್ವ ವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿತು. ಅಂದಿನಿಂದ ಇವರು ಎಲ್ಲರ ಪ್ರೀತಿಯ 'ಡಾಕ್ಟರ್ ರಾಜಕುಮಾರ್' ಎನಿಸಿದರು. ಕೇಂದ್ರ ಸರ್ಕಾರ ಇವರ ಕಲಾಸೇವೆಗೆ 'ಪದ್ಮಭೂಷಣ' ಪ್ರಶಸ್ತಿಯನ್ನಿತ್ತು ಗೌರವಿಸಿತು. ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರದ ಅತ್ಯುಚ್ಚ ಪ್ರಶಸ್ತಿಯಾದ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ'ಯೂ ದೊರೆಯಿತು. ಕರ್ನಾಟಕ ಸರ್ಕಾರವು "ಕರ್ನಾಟಕ ರತ್ನ ಪ್ರಶಸ್ತಿ" ನೀಡಿತು.

ಈ ಮೊದಲೇ ಹೇಳಿದಂತೆ ಬಡತನದ ಪರಿಸರದಲ್ಲಿ ಹುಟ್ಟಿದರೂ ಸಾಧನೆಯ ತಪಸ್ಸಿನಲ್ಲಿ ಶ್ರದ್ಧೆಯಿದ್ದರೆ ಯಾವುದೂ ತೊಡಕಲ್ಲವೆಂಬುದಕ್ಕೆ ರಾಜಕುಮಾರ್ ಅವರ ಬದುಕು ದೊಡ್ಡ ಮಾದರಿಯಾಗಿದೆ. ಅದೇ ಬಗೆಯ ಪರಿಸರದಲ್ಲಿ ಹುಟ್ಟಿದ ನಮ್ಮ ನಾಡ ಮಕ್ಕಳಿಗೆ ಅನುಕರಣೀಯವೂ ಅನುಸರಣೀಯವೂ ಆಗಿದೆ.

**ಕೌಶಲ : ಓದುವುದು**

**ಸಾಮರ್ಥ್ಯ : ಮುದ್ರಿತ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.**

@KTBS NOT TO BE REPUBLISHED

**ಕವಿ ಕೃತಿ ಪರಿಚಯ:**



**ಡಾ.ಎಚ್.ಎಸ್. ಸತ್ಯನಾರಾಯಣ** ಅವರು ಜನಿಸಿದ್ದು **ಚಿಕ್ಕಮಗಳೂರಿನಲ್ಲಿ.** ಶ್ರೀಮತಿ ಇಂದಿರಮ್ಮ– ಶ್ರೀ ಎಚ್.ಕೆ. ಶ್ರೀನಿವಾಸ ದಂಪತಿ ಇವರ ತಂದೆ–ತಾಯಿ. ಬಿ.ಎ. ಪದವಿಯನ್ನು **ತೀನಂಶ್ರೀ ಸ್ಮಾರಕ ಚಿನ್ನದ ಪದಕದೊಂದಿಗೆ** ಪಡೆದು, **"ಪೂರ್ಣಚಂದ್ರ ತೇಜಸ್ವಿಯವರ ಕಥನ ಸಾಹಿತ್ಯದ ಸಾಂಸ್ಕೃತಿಕ ನೆಲೆಗಳು"** ಎಂಬ ಪ್ರೌಢಪ್ರಬಂಧಕ್ಕೆ **ಡಾಕ್ಟ–ರೇಟ್ ಪದವಿ** ಪಡೆದರು. ಸಾಹಿತ್ಯ ವಿಮರ್ಶೆ, ಲಲಿತ ಪ್ರಬಂಧ, ಅಂಕಣ ಬರಹಗಳಲ್ಲಿ ಕೃಷಿಮಾಡಿ **ಅಪೂರ್ವ ಒಡನಾಟ, ಕುವೆಂಪು : ಅಲಕ್ಷಿತರೆದೆಯ ದೀಪ, ಕಣ್ಣೋಟ, ನುಡಿಚಿತ್ರ, ಪನ್ನೇರಳೆ, ನಗೆಮೊಗದ ಅಜ್ಜ ಮಾಸ್ತಿ, ಬಿದಿರ ತಡಿಕೆ, ಗಿರೀಶ್ ಕಾರ್ನಾಡ್ ಬದುಕು–ಬರಹ** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. **ಉದಯೋನ್ಮುಖ ವರ್ಧಮಾನ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ, ಹಿರೇಮಲ್ಲೂರು ಈಶ್ವರನ್ ರಾಜ್ಯ ಪ್ರಶಸ್ತಿ** ಮುಂತಾದ ಗೌರವಗಳಿಗೆ ಪಾತ್ರರಾಗಿರುವ ಡಾ.ಎಚ್.ಎಸ್. ಸತ್ಯನಾರಾಯಣ ಅವರಿಗೆ **ಕರ್ನಾಟಕ ಸರ್ಕಾರವು 2017ರ ಸಾಲಿನ ಅತ್ಯುತ್ತಮ ಉಪನ್ಯಾಸಕ** ಎಂದು **ರಾಜ್ಯ ಪ್ರಶಸ್ತಿಯನ್ನಿತ್ತು** ಪುರಸ್ಕರಿಸಿದೆ. ಪ್ರಸ್ತುತ ಚಿಕ್ಕಮಗಳೂರಿನ ಬಸವನಹಳ್ಳಿ ಬಾಲಿಕಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ.

## ಪದಗಳ ಅರ್ಥ

ಸೌಕರ್ಯ–ಅನುಕೂಲ, ಜನಮಾನಸ–ಜನರ ಮನಸ್ಸು, ನಾಡೋಜ–ನಾಡಿಗೆ ಗುರು, ಉಜ್ವಲ–ಬೆಳಗುವ, ಸಜ್ಜನಿಕೆ–ಒಳ್ಳೆಯ ನಡವಳಿಕೆ, ಮೇರುವ್ಯಕ್ತಿತ್ವ–ಎತ್ತರದ ವ್ಯಕ್ತಿತ್ವ, ವಿಕಾಸ–ಹರಡಿಕೊಳ್ಳು, ಹಿಗ್ಗಿಸು–ಹಿರಿದಾಗಿಸು, ರಂಗಭೂಮಿ–ನಾಟಕವಾಡುವ ಸ್ಥಳ, ಅಕಾಲಿಕ–ಕಾಲವಲ್ಲದ, ಮಾಗುತ್ತ–ಪಕ್ವಗೊಳ್ಳುತ್ತ, ಹೆಗಲೆಣೆ–ನೆರವು ನೀಡು, ಬೆಳ್ಳಿತೆರೆ–ಚಲನಚಿತ್ರ ತೋರುವ ಪರದೆ, ಮನೋಜ್ಞ–ಮನಮೆಚ್ಚುವ, ಸಂಪನ್ನತೆ–ಸಿರಿವಂತಿಕೆ; ಸಮೃದ್ಧತೆ, ಪ್ರತೀಕ–ಸಂಕೇತ, ತೊಡಕು–ಅಡ್ಡಿ.

## ಅಭ್ಯಾಸಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:

1. ರಾಜಕುಮಾರ್ ಅವರ ಮೊದಲ ಹೆಸರೇನು?
2. ರಾಜಕುಮಾರ್ ಅವರ ಜನ್ಮಸ್ಥಳ ಯಾವುದು?
3. ರಾಜಕುಮಾರ್ ಅವರ ತಂದೆ–ತಾಯಿ ಯಾರು?
4. ನಾಯಕ ನಟರಾಗಿ ರಾಜಕುಮಾರ್‌ರವರು ನಟಿಸಿದ ಮೊದಲ ಚಿತ್ರ ಯಾವುದು?
5. ಯಾವ ಚಿತ್ರದ ಗಾಯನಕ್ಕೆ ರಾಜಕುಮಾರ್ ಅವರಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ?
6. ಕರ್ನಾಟಕ ಸರ್ಕಾರ ರಾಜಕುಮಾರ್ ಅವರಿಗೆ ನೀಡಿದ ಅತ್ಯುಚ್ಚ ಪುರಸ್ಕಾರ ಯಾವುದು?

### ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಯಾವ ನಾಟಕ ಕಂಪನಿಗಳಲ್ಲಿ ರಾಜಕುಮಾರ್‌ರವರು ಅಭಿನಯಿಸಿದರು?
2. ರಾಜಕುಮಾರ್ ಅವರು ಅಭಿನಯಿಸಿದ ಭಕ್ತಿ ಪ್ರಧಾನವಾದ ಚಿತ್ರಗಳಾವುವು?
3. ಅಭಿಮಾನಿಗಳು ರಾಜಕುಮಾರ್‌ರವರಿಗೆ ನೀಡಿದ ವಿಶೇಷಣ–ಬಿರುದುಗಳು ಯಾವುವು?
4. ರಾಜಕುಮಾರ್ ಅವರ ಹೃದಯ ಸಂಪನ್ನತೆಗೆ ಒಂದೆರಡು ಉದಾಹರಣೆ ನೀಡಿ.

© KTBS NOT TO BE REPUBLISHED

**ಇ. ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ರಾಜಕುಮಾರ್ ಅವರ ಬಾಲ್ಯ ಜೀವನವನ್ನು ಪರಿಚಯಿಸಿ.
2. ರಾಜಕುಮಾರ್‌ರವರ ಕುಟುಂಬವು ಚಲನಚಿತ್ರ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಯಾವ ಯಾವ ಕ್ಷೇತ್ರಕ್ಕೆ ರಾಜಕುಮಾರ್ ಅವರ ಕೊಡುಗೆಗಳು ಸಂದಿವೆಯೆಂಬುದನ್ನು ಸಂಗ್ರಹಿಸಿ ಬರೆಯಿರಿ.

**ಈ. ಸಂದರ್ಭ ಸೂಚಿಸಿ :**

1. ಮುತ್ತುರಾಯ ಸ್ವಾಮಿಯ ಹೆಸರೇ ಮುತ್ತುರಾಜ ಆಯಿತು.
2. ರಂಗಭೂಮಿ ಕೈ ಬೀಸಿ ಕರೆಯಿತು.
3. ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಲು ಒಪ್ಪಲಿಲ್ಲ.
4. ಶ್ರದ್ಧೆಯಿದ್ದರೆ ಯಾವುದೂ ತೊಡಕಲ್ಲ.

## ಭಾಷಾ ಅಭ್ಯಾಸ

**ಅ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ:**

1. ರಾಜಕುಮಾರ್ ಅವರು ಜನಿಸಿದ್ದು __________
2. __________ ಎಂಬುವರು ರಾಜಕುಮಾರ್ ಅವರ ಶ್ರೀಮತಿಯವರು.
3. ರಾಜಕುಮಾರ್ ಮೊದಲಿಗೆ __________ ಅವರ ನಾಟಕ ಕಂಪನಿಯಲ್ಲಿ ಅಭಿನಯಿಸಿದರು.
4. ಮೈಸೂರು ವಿಶ್ವ ವಿದ್ಯಾಲಯವು ರಾಜಕುಮಾರ್ ಅವರಿಗೆ __________ ಪದವಿ ನೀಡಿದೆ.
5. __________ ಎಂಬುದು ರಾಜಕುಮಾರ್ ಅವರ ಗಾಯನಕ್ಕೆ ಜನ ನೀಡಿದ ಬಿರುದು.

**ಆ. ಹೊಂದಿಸಿ ಬರೆಯಿರಿ.**

| 'ಅ' | 'ಬ' |
|---|---|
| 1. ಜನ್ಮಸ್ಥಳ | ರಾಷ್ಟ್ರಪ್ರಶಸ್ತಿ |
| 2. ಮೊದಲ ಹೆಸರು | ಗಾಜನೂರು |
| 3. ಜೀವನಚೈತ್ರ | ಮುತ್ತುರಾಜ |
| 4. ಮೊದಲ ಚಿತ್ರ | ಸಂಪತ್ತಿಗೆ ಸವಾಲ್ |
| 5. ಮೊದಲ ಗಾಯನ | ಬೇಡರ ಕಣ್ಣಪ್ಪ |

NOT TO BE REPUBLISHED @KTBS

## ಅ. ಕನ್ನಡ ಸಂಧಿಗಳು

### ಲೋಪಸಂಧಿ :

೧. ಮೇಲೆ + ಇಟ್ಟು = ಮೇಲಿಟ್ಟು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. 'ಮೇಲೆ' ಎಂಬ ಪೂರ್ವಪದದ ಕೊನೆಯಲ್ಲಿರುವ ಸ್ವರ 'ಎ' ಎಂಬುದು ಇಲ್ಲಿ ಲೋಪವಾಗಿದೆ.

೨. ಮುಳ್ಳು + ಅನ್ನು = ಮುಳ್ಳನ್ನು

ಇಲ್ಲಿ 'ಮುಳ್ಳು' ಎಂಬ ಪೂರ್ವಪದದ ಕೊನೆಯಲ್ಲಿರುವ ಸ್ವರ 'ಉ' ಎಂಬುದು ಇಲ್ಲಿ ಲೋಪವಾಗಿದೆ. ಹೀಗೆ **ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯಲ್ಲಿರುವ ಸ್ವರವು ಲೋಪವಾದರೆ ಅದನ್ನು 'ಲೋಪಸಂಧಿ'** ಎನ್ನುವರು.

ಇದರಂತೆ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ.

ಒಸರುತ್ತ + ಇದ್ದ = ಒಸರುತ್ತಿದ್ದ : ಅ ಸ್ವರ ಲೋಪವಾಗಿದೆ.

ಹುಡುಗರು + ಎಲ್ಲರು = ಹುಡುಗರೆಲ್ಲರು : ಉ ಸ್ವರ ಲೋಪವಾಗಿದೆ.

ಮೇಲೆ + ಏರು = ಮೇಲೇರು : ಎ ಸ್ವರ ಲೋಪವಾಗಿದೆ.

### ಆಗಮಸಂಧಿ :

೧. ಹೊಲ + ಅನ್ನು = ಹೊಲವನ್ನು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಹೊಲವನ್ನು ಎಂಬ ಪದದಲ್ಲಿ 'ವ' ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

೨.ಹೊಳೆ + ಅಲ್ಲಿ = ಹೊಳೆಯಲ್ಲಿ

ಇಲ್ಲಿ 'ಹೊಳೆಯಲ್ಲಿ' ಎಂಬ ಪದದಲ್ಲಿ 'ಯ' ಎಂಬ ಅಕ್ಷರವು ಬಂದು ಸೇರಿಕೊಂಡಿದೆ.

ಹೀಗೆ **ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಒಂದು ಅಕ್ಷರ ಆಗಮವಾದರೆ ಅದನ್ನು ಆಗಮಸಂಧಿ** ಎನ್ನುವರು.

©KTBS NOT TO BE REPUBLISHED

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

ಗಡಿಬಿಡಿ + ಇಂದ = ಗಡಿಬಿಡಿಯಿಂದ: ಯ ಆಗಮವಾಗಿದೆ.

ಆರಂಭ + ಆಗು = ಆರಂಭವಾಗು : ವ ಆಗಮವಾಗಿದೆ.

## ಆದೇಶಸಂಧಿ :

೧. ಕೋಪ + ಕೊಂಡು = ಕೋಪಗೊಂಡು

ಮೇಲಿನ ಸಂಧಿಕಾರ್ಯವನ್ನು ಗಮನಿಸಿರಿ. ಕೋಪಗೊಂಡು ಎಂಬ ಪದದಲ್ಲಿ ಕ (ಕೊ) ಅಕ್ಷರದ ಬದಲಿಗೆ ಗ (ಗೊ) ಅಕ್ಷರ ಬಂದಿದೆ.

೨. ಮೈ + ತೊಳೆ = ಮೈದೊಳೆ

ಇಲ್ಲಿ ಮೈದೊಳೆ ಎಂಬ ಪದದಲ್ಲಿ 'ತ' (ತೊ) ಅಕ್ಷರದ ಬದಲಿಗೆ 'ದ' (ದೊ) ಅಕ್ಷರ ಬಂದಿದೆ.

ಹೀಗೆ **ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರ ಬಂದರೆ ಅದನ್ನು ಆದೇಶಸಂಧಿ** ಎನ್ನುವರು. ಇಲ್ಲಿ ಉತ್ತರ ಪದದ ಮೊದಲನೆಯ ಅಕ್ಷರವು ಬದಲಾಗುತ್ತದೆ. ಸಾಮಾನ್ಯವಾಗಿ ಕ,ತ,ಪ ಗಳಿಗೆ ಕ್ರಮವಾಗಿ ಗ,ದ,ಬ ಗಳು ಆದೇಶವಾಗಿ ಬರುತ್ತವೆ.

ಈ ರೀತಿಯಾದ ಇನ್ನು ಕೆಲವು ಉದಾಹರಣೆಗಳನ್ನು ಗಮನಿಸೋಣ :

ಕುಡು + ಕೋಲು = ಕುಡುಗೋಲು : 'ಕ' ದ ಬದಲು 'ಗ' ಆಗಿದೆ.

ಬೆಟ್ಟ + ತಾವರೆ = ಬೆಟ್ಟದಾವರೆ : 'ತ' ದ ಬದಲು 'ದ' ಆಗಿದೆ.

ಕಣ್ + ಪನಿ = ಕಂಬನಿ : 'ಪ' ದ ಬದಲು 'ಬ' ಆಗಿದೆ.

ಕನ್ನಡ ಪದಗಳು ಪರಸ್ಪರ ಸೇರಿ ಸಂಧಿಕಾರ್ಯ ನಡೆದಿದೆ. ಆದ್ದರಿಂದ ಇವುಗಳನ್ನು 'ಕನ್ನಡ ಸಂಧಿ' ಎಂದು ಕರೆಯುತ್ತೇವೆ.

ಇದುವರೆಗೆ ನಾವು ಮೂರು ರೀತಿಯ ಸಂಧಿಕಾರ್ಯಗಳನ್ನು ಗಮನಿಸಿದ್ದೇವೆ.

**ಕನ್ನಡ ಸಂಧಿಗಳು**

೧ ಲೋಪಸಂಧಿ

೨ ಆಗಮಸಂಧಿ

೩ ಆದೇಶಸಂಧಿ

@KTBS NOT TO BE REPUBLISHED

## ಭಾಷಾಭ್ಯಾಸ

### ಅ. ಪದಗಳನ್ನು ಕೂಡಿಸಿ ಬರೆಯಿರಿ.

೧. ಮೇಲೆ + ಇಟ್ಟುಕೊಂಡು    ೨. ಶುಭ್ರ + ಆಯಿತು    ೩. ಬಂಡೆ + ಅನ್ನು

### ಆ. ಪದಗಳನ್ನು ಬಿಡಿಸಿ ಸಂಧಿಯ ಹೆಸರು ತಿಳಿಸಿರಿ.

ಸವಿಗನ್ನಡ, ಮರವನ್ನು, ನಾವೆಲ್ಲಾ, ದಾರಿಯಲ್ಲಿ, ಒಂದೊಂದು.

### ಚಟುವಟಿಕೆ:

1. ರಾಜಕುಮಾರ್ ಅವರನ್ನು ಕುರಿತು ಪ್ರಕಟವಾಗಿರುವ ಪುಸ್ತಕಗಳನ್ನು ಸಂಗ್ರಹಿಸಿ, ಅಭ್ಯಾಸ ಮಾಡಿ.
2. ರಾಜಕುಮಾರ್‌ರವರು ಅಭಿನಯಿಸಿರುವ ನಿಮ್ಮ ಮೆಚ್ಚಿನ ಚಲನಚಿತ್ರವನ್ನು ಕುರಿತು ಒಂದು ಪ್ರಬಂಧ ಬರೆಯಿರಿ.
3. ರಾಜಕುಮಾರ್ ಅವರ ವಿವಿಧ ಬಗೆಯ ಪಾತ್ರಗಳ ಚಿತ್ರ ಸಂಗ್ರಹಿಸಿ, ಪುಟ್ಟದೊಂದು ಆಲ್ಬಂ ತಯಾರಿಸಿ.

* * * * *

@KTBS NOT TO BE REPUBLISHED

# ಪದ್ಯ ಭಾಗ

## ೧. ಬೇಸಿಗೆ

– ಬಿ.ಆರ್. ಲಕ್ಷ್ಮಣರಾವ್

L5J1I5

**ಪ್ರವೇಶ :** ಮಾನವರಾದ ನಾವು ಪ್ರಕೃತಿಯಿಂದ ಕಲಿಯಬೇಕಾದದ್ದು ಅಪಾರ. ಪ್ರಕೃತಿಯ ಪ್ರತಿಯೊಂದು ವಸ್ತುವೂ ಪರಸ್ಪರ ಸಂಬಂಧವುಳ್ಳದ್ದಾಗಿರುತ್ತವೆ. ಅಂತೆಯೇ ಋತುಮಾನಗಳು ಕೂಡ ಅವು ಬದಲಾದಂತೆ ಹವಾಮಾನವು ಏರುಪೇರಾಗುತ್ತಿರುತ್ತದೆ. ಒಮ್ಮೆ ಪ್ರಖರವಾದ ಬಿಸಿಲು, ಮತ್ತೊಮ್ಮೆ ಗಡಗಡ ನಡುಗುವ ಚಳಿ, ಮಳೆ, ಗಾಳಿ–ಹೀಗೆ ಏನೇ ಆದರೂ ಯಾವುದೇ ಕೆಲಸಕಾರ್ಯಗಳು ನಿಲ್ಲುವುದಿಲ್ಲ. ಪ್ರಕೃತಿಯು ಸಮತೋಲನವನ್ನು ಕಾಯ್ದುಕೊಂಡು ತನ್ನ ಪಾಲಿನ ಕೆಲಸವನ್ನು ಸದಾ ನಿರ್ವಹಿಸುತ್ತ ಇರುತ್ತದೆ.

ಬಂದಿದೆ ಬೇಸಿಗೆ ರಜಾ
ಇದ್ದರೂ ಬಿಸಿಲಿನ ಸಜಾ
ಬನ್ನಿ ಆಡೋಣ,
ಸೂರ್ಯನ ಮಹಿಮೆಯ ಹಾಡೋಣ.



ಏಕೆ ರವಿಗಿಂತ ತಾಪ?
ಯಾರ ಮೇಲವನ ಕೋಪ?
ಎಂದು ಹಳಿಯಬೇಡಿ,
ಸೂರ್ಯನ ತಪ್ಪು ತಿಳಿಯಬೇಡಿ,
ಮೋಡ ಕೂಡಿಸಲು, ಇಳೆಗೆ ಮಳೆ ತರಲು
ದುಡಿಯುತಿಹನು, ಪಾಪ!

ಭೂಮಿಯ ಪೋಷಕ ಸೂರ್ಯ
ಭೂಮಿಗವನು ಅನಿವಾರ್ಯ
ಹೊಗಳಿಕೆ ಬೇಕಿಲ್ಲ,
ತೆಗಳಿದರೆ ಅವ ಕುಗ್ಗುವುದಿಲ್ಲ.
ಬೆಳಕ ನೀಡುವನು, ಬಿಸಿಯನೂಡುವನು
ಮರೆಯದೆ ಕರ್ತವ್ಯ.

@KTBS NOT TO BE REPUBLISHED

ಇಂಥ ಬಿರು ಬಿಸಿಲಿನಲ್ಲಿ
ಮರಾ ಗಿಡಾ ಪೊದೆ ಬಳ್ಳಿ
ಕಂಗಾಲಾಗಿಲ್ಲ,
ನೋಡಿ ರಂಗಾಗಿವೆ ಎಲ್ಲ
ಚಿಗುರು ಹೂತೊಟ್ಟು, ಹಣ್ಣು ಮಿಡಿ ಬಿಟ್ಟು,
ಇವೆ ಸಂಭ್ರಮದಲ್ಲಿ.



ಸೂರ್ಯನಿಂದ ಕಲಿಯೋಣ.
ಪ್ರಕೃತಿಯಂತೆ ನಲಿಯೋಣ.
ಕಷ್ಟಗಳಿಗಂಜದೆ,
ನಮ್ಮ ಕರ್ತವ್ಯ ಮರೆಯದೆ,
ನಲಿಯುತ ಬಾಳಿ, ನಲಿವನು ಹಂಚಿ,
ಧನ್ಯತೆ ಗಳಿಸೋಣ.

**ಕೌಶಲ** : ಓದುವುದು.
**ಸಾಮರ್ಥ್ಯ** : ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವುದು

@KTBS
NOT TO BE REPUBLISHED

**ಕವಿ ಕೃತಿ ಪರಿಚಯ:**



**ಬಿ.ಆರ್. ಲಕ್ಷ್ಮಣರಾವ್** ಅವರು **ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ ಗ್ರಾಮ**ದಲ್ಲಿ **೦೯–೦೯–೧೯೪೬**ರಲ್ಲಿ ಜನಿಸಿದರು. ತಂದೆ ಬಿ.ಆರ್.ರಾಜಾರಾವ್, ತಾಯಿ ವೆಂಕಟಲಕ್ಷ್ಮಮ್ಮ. ಲಕ್ಷ್ಮಣರಾವ್ ನಿವೃತ್ತ ಉಪಾಧ್ಯಾಯರಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಇವರು **'ಗೋಪಿ ಮತ್ತು ಗಾಂಡಲೀನ, ಟುವಟಾರ, ಇವಳು ನದಿಯಲ್ಲ, ಸುಬ್ಬಾಭಟ್ಟರ ಮಗಳೇ, ಭಾರತ ಬಿಂದು ರಶ್ಮಿ, ಹನಿಗವಿತೆಗಳು, ವಿನೋದ ಕವಿತೆಗಳು,** ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಕತೆ, ಕಾದಂಬರಿ, ಅನುವಾದ, ಲೇಖನಸಂಕಲನಗಳನ್ನು ರಚಿಸಿದ್ದಾರೆ. **'ನನಗ್ಯಾಕೋ ಡೌಟು', 'ಭಲೇ ಮಲ್ಲೇಶಿ'** ಎಂಬ ನಾಟಕಗಳನ್ನು ಬರೆದಿದ್ದಾರೆ. ಭಾವಗೀತೆಗಳ ಧ್ವನಿ ಸಾಂದ್ರಿಕೆಗಳು(ಸಿ.ಡಿ), ಜನಪ್ರಿಯ ದೂರದರ್ಶನ ಧಾರಾವಾಹಿ ಶೀರ್ಷಿಕೆ ಗೀತೆಗಳು ಹಾಗೂ ಜನಪ್ರಿಯ ಚಲನಚಿತ್ರಗೀತೆಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**'ಬೇಸಿಗೆ'** ಎಂಬ ಪದ್ಯವನ್ನು **'ಸುಬ್ಬಾಭಟ್ಟರ ಮಗಳೇ'** ಎಂಬ ಭಾವಗೀತೆಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಸಜಾ – ಶಿಕ್ಷೆ. ಮಹಿಮೆ – ಹಿರಿಮೆ, ಮಹತ್ವ. ರವಿ – ಭಾನು, ಸೂರ್ಯ, ನೇಸರು. ತಾಪ– ಬಿಸಿ, ಶಾಖ. ಹಳಿ – ದೂಷಿಸು, ನಿಂದಿಸು. ಇಳೆ – ಭೂಮಿ, ಧರೆ. ಪೋಷಕ – ಸಲಹುವಾತ, ಪಾಲಕ. ಅನಿವಾರ್ಯ– ಅತ್ಯಗತ್ಯ. ಹೊಗಳು – ಕೊಂಡಾಡು, ಬಣ್ಣಿಸು. ತೆಗಳು – ಹೀಯಾಳಿಸು, ನಿಂದಿಸು. ಮಿಡಿ – ಹೀಚು, ಕಸುಗಾಯಿ. ಊಡು – ಉಣಿಸು, ತಿನ್ನಿಸು. ಕರ್ತವ್ಯ – ಕೆಲಸ, ಜವಾಬ್ದಾರಿ. ಬಿರು – ರಭಸ, ಬಿರುಸು. ಸಂಭ್ರಮ – ಉತ್ಸಾಹ, ಸಡಗರ. ಧನ್ಯತೆ –ಸಂತೃಪ್ತಿ.

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಸೂರ್ಯ ಏಕೆ ದುಡಿಯುತ್ತಿದ್ದಾನೆ?
೨. ಭೂಮಿಯ ಪೋಷಕ ಯಾರು?
೩. ಸೂರ್ಯ ಮರೆಯದೆ ಯಾವ ಕರ್ತವ್ಯ ಮಾಡುವನು?
೪. ಬಿರು ಬಿಸಿಲಿಗೆ ಯಾವುವು ಕಂಗಾಲಾಗಿಲ್ಲ?
೫. ಸೂರ್ಯನಿಂದ ಮಕ್ಕಳು ಕಲಿಯಬೇಕಾದ್ದೇನು?

**ಆ. ಕೆಳಗಿನ ಪದಗಳಿಗೆ ತಲಾ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ಸೂರ್ಯ    ೨. ಇಳೆ    ೩. ಪ್ರಕೃತಿ    ೪. ಸಂಭ್ರಮ

**ಇ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ.**

೧) ಪೋಷಕರು    ೨) ಕರ್ತವ್ಯ    ೩) ಸಂಭ್ರಮ    ೪) ಧನ್ಯತೆ

**ಈ. ಬೇಸಿಗೆ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

NOT TO BE REPUBLISHED @KTBS

## ವ್ಯಾಕರಣ ಮಾಹಿತಿ

### ದೇಶಿಯ, ಅನ್ಯದೇಶಿಯ ಪದಗಳು

**ಅ. ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿರಿ.**

**ಕದ, ಅಂಗಳ, ಚೆನ್ನಾಗಿ, ಮೂಡಣ, ಮರ–ಈ ಪದಗಳೆಲ್ಲ ಅಚ್ಚಗನ್ನಡ ಪದಗಳು. ಇವುಗಳು ದೇಶೀ ಪದಗಳು.**

**ಭೂಮಿ, ಮಿತ್ರ, ಕಾಗದ, ಮೇಜು, ರಸ್ತೆ– ಈ ಪದಗಳೆಲ್ಲ ಅಚ್ಚಗನ್ನಡ ಪದಗಳಲ್ಲ. ಇವುಗಳು ಅನ್ಯದೇಶೀಯ ಪದಗಳು.**

ನಾವು ಕನ್ನಡದಲ್ಲಿ ಬಳಸುವ ಅಚ್ಚಗನ್ನಡ ಪದಗಳು ದೇಶೀಪದಗಳು. ಇವು ಮೂಲ ಕನ್ನಡ ಭಾಷೆಯ ಪದಗಳಾಗಿವೆ. ನಾವು ಬಳಸುವ ಎಲ್ಲಾ ಪದಗಳು ಮೂಲ ಕನ್ನಡ ಪದಗಳಲ್ಲ. ಕೆಲವು ಪದಗಳು ಬೇರೆ ಭಾಷೆಯಿಂದ ಬಂದಿವೆ. ಇವು ಕನ್ನಡಕ್ಕೆ ಬಂದು ಕನ್ನಡ ಪ್ರತ್ಯಯಗಳನ್ನು ಹೊಂದಿ ಕನ್ನಡ ಶಬ್ದಗಳೇ ಆಗಿವೆ. ಇವುಗಳೆಲ್ಲ ಅನ್ಯದೇಶೀಯ ಪದಗಳು.

ಕನ್ನಡಕ್ಕೆ ಸಂಸ್ಕೃತ, ಅರೇಬಿಕ್, ಪರ್ಷಿಯನ್, ಪೋರ್ಚುಗೀಸ್, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಸಾವಿರಾರು ಪದಗಳು ಬಂದಿವೆ. ಇದರಿಂದ ಕನ್ನಡ ಭಾಷೆಯ ಪದ ಸಂಪತ್ತು ಹೆಚ್ಚಿದೆ.

ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

**ಅ) ದೇಶೀ ಪದಗಳು–** ಬೆಲ್ಲ, ನೀರು, ಹುಲ್ಲು, ಹೊಲ, ಆಟ ಮೊದಲಾದವು.

**ಆ) ಅನ್ಯದೇಶೀಯ ಪದಗಳು–**

- ಸಂಸ್ಕೃತ ಭಾಷೆಯಿಂದ ಬಂದ ಪದಗಳು :– ಸಂಗಮ, ಕುಮಾರ, ಅರಣ್ಯ, ಸಹೋದರಿ ಮೊದಲಾದವು.
- ಇಂಗ್ಲಿಷ್ ಭಾಷೆಯಿಂದ ಬಂದ ಪದಗಳು :– ಲೈಟು, ಬ್ಯಾಂಕು, ಪೆನ್ನು, ಬುಕ್ಕು, ಸ್ಕೂಲು, ಬಸ್ಸು ಮೊದಲಾದವು.
- ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು :– ಅಲಮಾರು, ಪಾದ್ರಿ, ಸಾಬೂನು, ಬಟಾಟೆ, ಅನಾನಸು ಮೊದಲಾದವು.
- ಪರ್ಷಿಯನ್ ಭಾಷೆಯಿಂದ ಬಂದ ಪದಗಳು :– ದಿವಾನ, ಸರದಾರ, ದವಲತ್ತು, ಸರಕಾರ, ತಹಸೀಲ್ದಾರ ಮೊದಲಾದವು.

**ಆ. 'ಬೇಸಿಗೆ' ಪದ್ಯವನ್ನು ರಾಗಬದ್ಧವಾಗಿ ಹಾಡಿರಿ.**

**ಇ. ಸೂರ್ಯ, ಚಂದ್ರ, ಭೂಮಿ, ಕುರಿತಾದ ಚುಟುಕುಗಳನ್ನು ರಚಿಸಿರಿ.**

ಉದಾ: ಬಾನಿಗೆ ಬಣ್ಣವ ಕೊಟ್ಟವರಾರು.
ಭುವಿಯಲಿ ಮಜ್ಜಿಗೆ ಎರೆದವರಾರು
ಚಳಿಯ ಹಿತವನು ತಂದವರಾರು
ಚಂದ್ರ......ನಮ್ಮ ಒಲವಿನ ಚಂದ್ರ.

@KTBS NOT TO BE REPUBLISHED

## ಈ. ಈ ಪದಗಳನ್ನು ಗಮನವಿಟ್ಟು ಓದಿ ಅರ್ಥ ಗ್ರಹಿಸಿರಿ.

| | |
|---|---|
| ವರುಣ- ಮಳೆದೇವತೆ | ವರ್ಣ-ಬಣ್ಣ, ಅಕ್ಷರ. |
| ಕೃತಜ್ಞತೆ-ಉಪಕಾರ ಸ್ಮರಣೆ ಇರುವ | ಕೃತಘ್ನತೆ- ಉಪಕಾರ ಸ್ಮರಣೆ ಇಲ್ಲದ. |
| ವಂದಿಸು-ನಮಸ್ಕರಿಸು, | ಹೊಂದಿಸು- ಜೋಡಿಸು |
| ಅರ್ತಿ-ಪ್ರೀತಿ | ಅರ್ಥಿ- ಬೇಡುವವರು |
| ಪಾವನ- ಪವಿತ್ರ | ಪವನ- ಗಾಳಿ |
| ಎಲರು-ಗಾಳಿ | ಎಲ್ಲರೂ-ಸರ್ವರು |
| ಆಡು-ಆಟ, ಮೇಕೆ | ಹಾಡು- ಗಾಯನ |

@KTBS NOT TO BE REPUBLISHED

**ಇಂತಹ ಹತ್ತು ಪದಗಳನ್ನು ಹುಡುಕಿ ಅರ್ಥ ಬರೆಯಿರಿ.**

## ಭಾಷಾ ಆಟ

### ಚಟುವಟಿಕೆ

ಕಾಗದ ಅಥವಾ ರಿಬ್ಬನ್ ತುಂಡೊಂದನ್ನು ಬಾಯಿಯ ಹತ್ತಿರ ಹಿಡಿದುಕೊಳ್ಳಿ. 'ಕ' ದಿಂದ 'ಮ' ವರೆಗೆ ಅಕ್ಷರಗಳನ್ನು ಉಚ್ಚಾರಣೆ ಮಾಡಿರಿ. ಅಲ್ಪ ಪ್ರಾಣಾಕ್ಷರಗಳನ್ನು ಉಚ್ಚರಿಸಿದಾಗ ಕಾಗದ ಅಥವಾ ರಿಬ್ಬನ್ ತುಂಡು ಹೆಚ್ಚು ಅಲುಗಾಡುವುದಿಲ್ಲ. ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಿದಾಗ ಕಾಗದ ಅಥವಾ ರಿಬ್ಬನ್ ತುಂಡು ಹೆಚ್ಚು ಅಲುಗಾಡುವುದನ್ನು ಗಮನಿಸಿ. ಹೀಗೆ ಅಕ್ಷರಗಳನ್ನು ಉಚ್ಚರಿಸಿ ಅಲ್ಪ ಪ್ರಾಣ ಮತ್ತು ಮಹಾಪ್ರಾಣಾಕ್ಷರಗಳನ್ನು ಪಟ್ಟಿ ಮಾಡಿರಿ.

## ಯೋಜನೆ

- ಸೂರ್ಯ, ಚಂದ್ರರ ಕುರಿತಾದ ಪದ್ಯಗಳನ್ನು ಸಂಗ್ರಹಿಸಿ ಬರೆಯಿರಿ.
- ಸೂರ್ಯ, ಚಂದ್ರ, ಬಾವುಟ, ರಾಷ್ಟ್ರಲಾಂಛನ, ರಾಷ್ಟ್ರಪಕ್ಷಿ, ರಾಷ್ಟ್ರಪ್ರಾಣಿ, ರಾಷ್ಟ್ರಪುಷ್ಪ–ಇವುಗಳ ಚಿತ್ರ ಬರೆದು ಬಣ್ಣ ತುಂಬಿರಿ.

## ಪೂರಕ ಓದು

೧. ಪ್ರಕೃತಿಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿ ಓದಿರಿ.

೨. ಕಪ್ಪು ಕುಂಕುಮ ಕೆಂಪು ಕುಂಕುಮ, ಕಾಗೆ ಪುಕ್ಕ ಗುಬ್ಬಿ ಪುಕ್ಕ–ಇಂಥ ನಾಲಿಗೆ ಸುರುಳಿಗಳನ್ನು ಸಂಗ್ರಹಿಸಿ ಗಟ್ಟಿಯಾಗಿ ಓದಿರಿ.

## ಶುಭ ನುಡಿ

೧. ಕರ್ತವ್ಯಕ್ಕೆ ಮಿಗಿಲಾದುದು ಯಾವುದೂ ಇಲ್ಲ.

೨. ಕಾಯಕವೇ ಕೈಲಾಸ.

೩. ನಾವು ನಮ್ಮ ಕಾಲ ಮೇಲೆ ನಿಲ್ಲೋಣ.

* * * * *

©KTBS NOT TO BE REPUBLISHED

# ೨. ಮಂಗಳ ಗ್ರಹದಲ್ಲಿ ಪುಟ್ಟಿ

P4P8P4

– ಸಿ. ಎಂ. ಗೋವಿಂದರೆಡ್ಡಿ

**ಪ್ರವೇಶ :** ಮಕ್ಕಳ ಮನಸ್ಸಿನಲ್ಲಿ ಕುತೂಹಲಭರಿತ ಪ್ರಶ್ನೆಗಳು ಹುಟ್ಟುತ್ತವೆ. ವಿವಿಧ ಕಲ್ಪನೆಗಳು ಕಾಣಿಸುತ್ತವೆ. ಹೊಸ ಹೊಸ ಕನಸುಗಳು ಗೂಡು ಕಟ್ಟುತ್ತವೆ. ಮಕ್ಕಳು ತಮ್ಮ ಕಲ್ಪನೆಯಲ್ಲಿ ನಿರ್ಜೀವ ವಸ್ತುಗಳೊಂದಿಗೂ ಮನಬಿಚ್ಚಿ ಮಾತಾಡಬಲ್ಲರು! ಅಪರಿಚಿತ ಸನ್ನಿವೇಶಗಳೂ ಸಹ ಅವರ ಕನಸುಗಳಲ್ಲಿ ಹತ್ತಿರಕ್ಕೆ ಬಂದುಬಿಡುತ್ತವೆ. ಹೀಗಿರುವ ಅವರ ಕಲ್ಪನೆಗಳಿಗೆ ಮತ್ತಷ್ಟು ಗರಿಗಳನ್ನು ಕಟ್ಟಿ ಇನ್ನಷ್ಟು ಎತ್ತರಕ್ಕೆ ಹಾರಲು ಪ್ರೋತ್ಸಾಹಿಸಿ ಆ ಮೂಲಕ ಪ್ರಸ್ತುತತೆಯ ಅರಿವು ಮೂಡಿಸುವುದು ಇಲ್ಲಿನ ಆಶಯವಾಗಿದೆ.



ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ.

ಒಂದಿನ ಇದ್ದಕ್ಕಿದ್ದಂತೆ
ಪುಟ್ಟಿಗೆ ರೆಕ್ಕೆಯು ಬಂದಿತ್ತು.
ಹಕ್ಕಿಯ ಹಾಗೆ ಹಾರುವ ಮನಕೆ
ಹೆಚ್ಚಿನ ಹರುಷವ ತಂದಿತ್ತು.



ಕೂಡಲೆ ಪುಟ್ಟಿ ಠಣ್ಣನೆ ಜಿಗಿದು
ಆಗಸದೊಡಲಿಗೆ ಹಾರಿದಳು.
ಹಾರುತ ತೇಲುತ ಮುಂದಕೆ ಸಾಗಿ
ಚಂದ್ರನ ಮಡಿಲನು ಸೇರಿದಳು.

ಚಂದ್ರನ ಮೇಲೆ ನೆಟ್ಟಗೆ ನಿಂತು
ಭೂಮಿಯ ಕಡೆಗೆ ನೋಡಿದರೆ
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ.

NOT TO BE REPUBLISHED ©KTBS

ಚಂದ್ರನ ಬಿಟ್ಟು ಮೇಲಕೆ ಹಾರಿ
ಸೇರಲು ಮಂಗಳನಂಗಳವ
ಕೆಂಪಗೆ ಬಣಬಣಗುಟ್ಟುತಲಿತ್ತು
ಕಾಣಲಿಲ್ಲ ಯಾವುದೆ ಜೀವ



ಪುಟ್ಟಿಯು ಕಂಡಳು ಮಂಗಳನಲ್ಲಿ
'ಯೋಗಿ' ಹೆಸರಿನ ಹೆಬ್ಬಂಡೆ
ಒಡನೆ ಕೇಳಿದಳು ಕೆಂಪು ಬಂಡೆಯನು
'ನೀನು ಹೇಗೆ ಇಲ್ಲಿಗೆ ಬಂದೆ?'

ಬಂಡೆಯು ಕಣ್ಣೀರನು ಸುರಿಸುತ್ತಾ
ಹೇಳಿತು ಪುಟ್ಟಿಗೆ ನೋವಿನಲಿ
'ಪುಟ್ಟಿಯೇ, ನಮ್ಮೀ ಮಂಗಳ ಗ್ರಹದ
ದುರಂತ ಕಥೆಯನು ಕೇಳಿ ತಿಳಿ'

ಹಿಂದೊಂದು ಕಾಲದಿ ಈ ಗ್ರಹದಲ್ಲಿ
ಇತ್ತು ಜೀವಜಲ ಹಸಿರು ಮರ
ಆಗಿನ ಜನತೆಯು ನಾಡನು ಕಟ್ಟಲು
ಮರಗಳ ಕಡಿಯೆ ಬಂತು ಬರ

@KTBS
NOT TO BE REPUBLISHED

ಮಳೆ ಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
'ನಿಮ್ಮ ಭೂಮಿಯಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ'

ಬಣಬಣಗುಟ್ಟುವ ಬಯಲನು ಕಂಡು
ಢವಢವಗುಟ್ಟಿತು ಎಳೆ ಹೃದಯ
ಹಸಿರನು ಅಳಿಸದೆ ಗಿಡಮರ ಬೆಳೆಸಿ
ಉಳಿಸುವೆವೆಂದಳು ಈ ಧರೆಯ



ಭೂಮಿಗೆ ಬಂದು ಜನತೆಯ ಕಂಡು
ಹಸಿರನು ಉಳಿಸಲು ಬೇಡಿದಳು
ತಾನು ಕೂಡ ಎಳೆ ಸಸಿಗಳ ನೆಟ್ಟು
ಬೆಳೆಸುತ ಕುಣಿ ಕುಣಿದಾಡಿದಳು.

**ಕೌಶಲ** : ಆಲಿಸುವುದು.

**ಸಾಮರ್ಥ್ಯ** : ಅಪರಿಚಿತ ಸನ್ನಿವೇಶ ಹಾಗೂ ಘಟನೆ ನಡೆದ ಸಂದರ್ಭದ ಸಂಭಾಷಣೆ ಮತ್ತು ಚರ್ಚೆಯನ್ನು ಆಲಿಸಿ ಅರ್ಥಮಾಡಿಕೊಳ್ಳುವುದು

**ಕವಿ ಕೃತಿ ಪರಿಚಯ:**



ಸಿ.ಎಂ. ಗೋವಿಂದರೆಡ್ಡಿಯವರು **೧೧-೦೮-೧೯೫೮ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಚೆನ್ನಿಗರಾಯಪುರ** ಎಂಬ ಊರಿನಲ್ಲಿ ಜನಿಸಿದರು. ಪ್ರಸ್ತುತ ಇವರು ಬೆಂಗಳೂರಿನ ಕಾಡುಗೋಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ಹೊಂದಿದ ಇವರು **'ಬಣ್ಣದ ಚಿಟ್ಟೆ' 'ಮಕ್ಕಳ ಮಂದಾರ' 'ಪದ್ಯ ಹೇಳುವ ಮರ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **'ಪರ್ಲ ಕಾವ್ಯ ಪ್ರಶಸ್ತಿ', 'ಸಿಸು ಸಂಗಮೇಶ ದತ್ತಿ ಬಹುಮಾನ' ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಸೇರಿದಂತೆ ವಿವಿಧ ಬಹುಮಾನಗಳು ದೊರೆತಿವೆ.

ಪ್ರಸ್ತುತ ಪದ್ಯವನ್ನು **'ಮಕ್ಕಳ ಮಂದಾರ'** ಎಂಬ ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

©KTBS NOT TO BE REPUBLISHED

## ಪದಗಳ ಅರ್ಥ

ಆಗಸ- ಆಕಾಶ, ಗಗನ. ಇಷ್ಟ-ಇಚ್ಛೆ, ಮೆಚ್ಚುಗೆ. ರೆಕ್ಕೆ-ಹಕ್ಕಿಗಳ ಪುಕ್ಕ, ಗರಿ. ಒಡಲು-ಶರೀರ, ಹೊಟ್ಟೆ. ಸಾಗು-ಚಲಿಸು, ಮುಂದೆ ಹೋಗು. ಮಡಿಲು-ಉಡಿ. ಧರೆ-ನೆಲ, ಭೂಮಿ. ಹೆಬ್ಬಂಡೆ-ದೊಡ್ಡದಾದ ಬಂಡೆ, ವಿಸ್ತಾರವಾದ ಕಲ್ಲು. ಬರ-ಬರಗಾಲ, ಕ್ಷಾಮ. ಅಳಿ-ಸಾಯು, ನಾಶಹೊಂದು. ಗತಿ-ಸ್ಥಿತಿ, ದಾರಿ. ಬಯಲು-ಅಂಗಳ, ಮೈದಾನ. ಉಳಿಸು-ರಕ್ಷಿಸು, ಕಾಪಾಡು. ನೆಡು-ನಾಟು.

**ವಿವರ ತಿಳಿಯಿರಿ:**

**ಪುಟ್ಟಿ** = ಮಕ್ಕಳನ್ನು ಕರೆಯುವ ಒಂದು ಆಪ್ತ ಸಂಬೋಧನೆ.

**ಮಂಗಳನಂಗಳ** = ಮಂಗಳ ಗ್ರಹದ ಬಯಲು, ಮಂಗಳ ಗ್ರಹದ ವಿಸ್ತಾರ ಪ್ರದೇಶ.

**ಬಣಬಣಗುಟ್ಟು** = ಖಾಲಿ ಖಾಲಿಯಾಗಿ ಕಾಣು, ನೀರವತೆಯಿಂದ ಕೂಡಿರು.

**ಯೋಗಿ ಹೆಸರಿನ ಬಂಡೆ** = ಮಂಗಳ ಗ್ರಹದಲ್ಲಿ ಕಂಡುಬಂದಿದೆ ಎನ್ನಲಾದ ಒಂದು ದೊಡ್ಡ ಬಂಡೆ.

**ದುರಂತ** = ದುಃಖದಲ್ಲಿ ಮುಗಿಯುವ, ಕಷ್ಟದಲ್ಲಿ ಕೊನೆಗೊಳ್ಳುವ.

**ಢವಢವಗುಟ್ಟು** = ಒಮ್ಮೆಲೆ ಭಯವಾಗು, ಹೃದಯ ಜೋರಾಗಿ ಹೊಡೆದುಕೊಳ್ಳು.

## ಅಭ್ಯಾಸಗಳು

**ಅ. ಬಿಟ್ಟ ಸ್ಥಳವನ್ನು ತುಂಬಿರಿ.**

೧. ಒಂದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ___________ಬಂದಿತ್ತು.

೨. ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ___________ಸೇರಿದಳು.

೩. ಪುಟ್ಟಿಯೇ, ನಮ್ಮೀ ಮಂಗಳಗ್ರಹದ ದುರಂತ __________ಕೇಳಿ ತಿಳಿ.

೪. ಹಸಿರನು ಅಳಿಸದೆ ಗಿಡಮರ ಬೆಳೆಸಿ ಉಳಿಸುವೆವೆಂದಳು ಈ _________

**ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

೨. ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

೩. ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

೪. ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು?

೫. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?

**ಇ. ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

೧. ಆಗಸದಲ್ಲಿ______________________

______________________________

______________________________

__________________ಇದು ಕಷ್ಟ.

೨. ಮಳೆಬೆಳೆ_____________________

______________________________

______________________________

__________________ಇದೇ ಗತಿ.

@KTBS
NOT TO BE REPUBLISHED

ಈ. ಸಿ.ಎಂ.ಗೋವಿಂದರೆಡ್ಡಿಯವರ ಸ್ಥಳ, ಕಾಲ, ಕೃತಿಗಳ ವಿವರ ತಿಳಿಸಿರಿ.

ಉ. ನಾಮಪದ, ನಾಮಪ್ರಕೃತಿ ಮತ್ತು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.

೧. ಗಗನ + ಅನ್ನು = ಗಗನವನ್ನು

೨. ಶಾಲೆ + ಇಂದ = ಶಾಲೆಯಿಂದ

ಊ. ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ(ವಿಶೇಷಣ)ಗಳನ್ನು ಗುರುತಿಸಿರಿ.

ಉದಾ: ವಿವೇಕನಿಗೆ ಅಪಾರ ಬುದ್ಧಿವಂತಿಕೆಯಿದೆ. – ಅಪಾರ

೧. ರಫೀಕ್‌ನದು ದೊಡ್ಡಮನೆ. ______________________

೨. ಅವಳಿಗೆ ಹಸಿರು ಬಣ್ಣ ಇಷ್ಟ. ____________________

೩. ಪುಟ್ಟಿಯು ಕಂಡಳು ಕೆಂಪು ಬಂಡೆಯನು. ____________________

ಋ. ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ.

೧. ಡೇವಿಡ್‌ನ ಊರಿನಲ್ಲಿ ನೂರು ಹಸುಗಳಿವೆ. ________________________

೨. ಪೂರ್ಣಚಂದ್ರನು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾನೆ. ______________________

೩. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು. ____________________

ಎ. ಕೊಟ್ಟಿರುವ ಸನ್ನಿವೇಶ/ ಘಟನೆಯನ್ನು ಬೇರೆಯವರಿಂದ ಓದಿಸಿರಿ. ಚೆನ್ನಾಗಿ ಆಲಿಸಿರಿ. ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿರಿ.

ಚಾರ್ಲ್ಸ್ ಡಾರ್ವಿನ್‌ರ ಮೊಮ್ಮಕ್ಕಳು ಒಂದು ಸಲ ತಮ್ಮ ತಾತನನ್ನು ಕೀಟಲೆ ಮಾಡುವುದಕ್ಕಾಗಿ ಒಂದು ಹೂಟ ಹೂಡಿದರು. ಒಂದು ಜೀರುಂಡೆಯನ್ನು ಹಿಡಿದು ತಂದು ಅದರ ರೆಕ್ಕೆಗಳನ್ನು ಕಿತ್ತು ಹಾಕಿದರು. ಅದಕ್ಕೆ ಚಿಟ್ಟೆಯೊಂದರ ರೆಕ್ಕೆಗಳನ್ನು ಅಂಟಿಸಿದರು. ಅಂಟಿಸುವಿಕೆಯನ್ನು ಬಹಳ ಚತುರತೆಯಿಂದ ಮಾಡಿದ್ದರಿಂದ ಅದು ಒಂದು ನೈಜವಾದ ಆದರೆ ಅಪರೂಪವಾದ ಕೀಟದಂತೆ ಕಾಣುತ್ತಿತ್ತು. ಅದನ್ನು ಅವರು ಡಾರ್ವಿನ್‌ರ ಬಳಿಗೆ ಕೊಂಡೊಯ್ದು "ತಾತ, ಇದು ಯಾವ ಜಾತಿಯ ಕೀಟ?" ಎಂದು ಕೇಳಿದರು. ಡಾರ್ವಿನ್ನರು ಅದನ್ನು ಒಂದು ನಿಮಿಷ ಪರೀಕ್ಷಿಸಿ ನೋಡಿ "ಒಂದು ಹೊಸ ಕೀಟ ಜಾತಿಯನ್ನೆ ಪತ್ತೆ ಮಾಡಿ ಬಿಟ್ಟಿದ್ದೀರಲ್ಲ, ತುಂಬಾ ಸಂತೋಷ. ಇದು ನಿಮಗೆ ಎಲ್ಲಿ ಸಿಕ್ಕಿತು? ನೀವು ನೋಡಿದಾಗ ಇದು ಏನು ಮಾಡುತ್ತಿತ್ತು?" ಎಂದು ಕೇಳಿದರು. ತಾತ ನಮ್ಮ ಬಲೆಗೆ ಬಿದ್ದರೆಂದು ಬಹು ಸಂತೋಷಪಟ್ಟ ಆ ಮಕ್ಕಳು "ನಮ್ಮ ಮನೆಯ ಹಿತ್ತಲ ತೋಟದಲ್ಲಿ ಸಿಕ್ಕಿತು. ಗಿಡದ ಎಲೆಯ ಮೇಲೆ ಕುಳಿತಿತ್ತು. ನಾವು ನೋಡಿದಾಗ ಇದು ಹಮ್ ಮಾಡುತ್ತಿತ್ತು (ಗುಂಯ್‌ಗುಡು)" ಎಂದರು. ಅದಕ್ಕೆ ಡಾರ್ವಿನ್ನರು "ಓಹೋ, ಸರಿ ಮತ್ತೆ. ಹಾಗಾದರೆ ಇದು ಹಮ್‌ಬಗ್" (ಹಮ್‌ಬಗ್=ಗುಂಯ್‌ಗುಡುವ ಹುಳು) ಎಂದರು.

©KTBS NOT TO BE REPUBLISHED

**ಪ್ರಶ್ನೆಗಳು:**

೧. ಡಾರ್ವಿನ್ನರು ಹೊಸ ಕೀಟವನ್ನು 'ಹಮ್‌ಬಗ್' ಎಂದು ಏಕೆ ಕರೆದರು?

೨. ಮಕ್ಕಳು ಚಿಟ್ಟೆಯ ರೆಕ್ಕೆಯನ್ನು ಯಾವುದಕ್ಕೆ ಅಂಟಿಸಿದರು?

## ವ್ಯಾಕರಣ ಮಾಹಿತಿ

### ದ್ವಿರುಕ್ತಿ

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

- ಶಿಕ್ಷಕರು ಮತ್ತೆ ಮತ್ತೆ ವಿವರಣೆ ನೀಡಿದರು.
- ಷರೀಫನು ಬನ್ನಿ ಬನ್ನಿ ಎಂದು ಗೆಳೆಯರನ್ನು ಕರೆದನು.

ಮೇಲಿನ ವಾಕ್ಯಗಳಲ್ಲಿ 'ಮತ್ತೆ', 'ಬನ್ನಿ' ಎಂಬ ಪದಗಳು ಎರಡೆರಡು ಬಾರಿ ಬಳಕೆಯಾಗಿವೆ. ಇವುಗಳನ್ನು 'ದ್ವಿರುಕ್ತಿ' ಎನ್ನುವರು.

**(ದ್ವಿ–ಎರಡು, ಉಕ್ತಿ–ಮಾತು)**

ಸಾಮಾನ್ಯವಾಗಿ ವಿಷಯಕ್ಕೆ ಒತ್ತುಕೊಡಲು ದ್ವಿರುಕ್ತಿಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

- ಇತ್ತ ಕಡೆಗೆ **ಬೇಗಬೇಗ** ಬಾ.
- ಗುಡ್ಡಗಳಲ್ಲಿ **ದೊಡ್ಡದೊಡ್ಡ** ಕಲ್ಲುಗಳಿವೆ.

ಇಲ್ಲಿ **'ಬೇಗಬೇಗ', 'ದೊಡ್ಡದೊಡ್ಡ'** ಎಂಬ ಪದಗಳು ದ್ವಿರುಕ್ತಿಗಳಾಗಿವೆ.

### ಜೋಡುನುಡಿ :

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

- "ಚಿಕ್ಕ ಮಕ್ಕಳಿಗೆ ವೇಷಭೂಷಣಗಳನ್ನು ನಾವು ತೊಡಿಸುತ್ತೇವೆ" ಎಂದನು ಪಿಂಟೋ.
- ಉಪವಾಸದ ರಾತ್ರಿ ಹಣ್ಣುಹಂಪಲು ತಿನ್ನುತ್ತಾರೆ.

ಮೇಲಿನ ವಾಕ್ಯಗಳಲ್ಲಿ 'ವೇಷಭೂಷಣ', 'ಹಣ್ಣು ಹಂಪಲು' – ಈ ಪದಗಳಲ್ಲಿ ಎರಡು ಬೇರೆಬೇರೆ ಪದಗಳಿದ್ದು ಅವು ಜೊತೆಜೊತೆಯಾಗಿ ಬಳಕೆಯಾಗಿವೆ. ಇವು ಜೋಡುನುಡಿಗಳು.

©KTBS NOT TO BE REPUBLISHED

ಸಾಮಾನ್ಯವಾಗಿ ಮಾತುಗಳನ್ನು, ವಿಷಯಗಳನ್ನು ಮೆರುಗುಗೊಳಿಸಲು ಜೋಡುನುಡಿಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

- ಎಲ್ಲರೂ ತಮ್ಮ **ನೋವುನಲಿವು**ಗಳನ್ನು ಹಂಚಿಕೊಂಡರು.
- ಅವರು **ಊರುಕೇರಿ** ತಿರುಗಿ ಬಂದರು.

ಇಲ್ಲಿ **'ನೋವುನಲಿವು,' 'ಊರುಕೇರಿ'** ಎಂಬ ಪದಗಳು ಜೋಡುನುಡಿಗಳಾಗಿವೆ.

### ಅನುಕರಣಾವ್ಯಯ :

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ.**

- ಹಂಪಣ್ಣನು **ಸರಸರ** ಹೆಜ್ಜೆ ಹಾಕಿದನು.
- ಗಾಳಿಯು **ಸುಯ್ಯನೆ** ಬೀಸಿತು.

ಮೇಲಿನ ವಾಕ್ಯಗಳಲ್ಲಿ 'ಸರಸರ,' 'ಸುಯ್ಯನೆ' ಈ ಪದಗಳಿಗೆ ನಿರ್ದಿಷ್ಟವಾದ ಅರ್ಥವಿಲ್ಲ. ಇವು ಧ್ವನಿವಿಶೇಷಣವನ್ನು ಅನುಕರಣ ಮಾಡಿದವುಗಳಾಗಿವೆ. ಇವು ಅನುಕರಣಾವ್ಯಯಗಳು.

ಸಾಮಾನ್ಯವಾಗಿ ಧ್ವನಿವಿಶೇಷಣಗಳನ್ನು ಕೇಳಿದಂತೆ ಪುನಃ ಅನುಕರಣೆ ಮಾಡುವಾಗ ಅನುಕರಣಾವ್ಯಯಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ

- ಮಳೆಯ ಹನಿಗಳು **ಪಟಪಟನೆ** ಬಿದ್ದವು.
- ನೀರು **ಜುಳುಜುಳು** ಎಂದು ಹರಿಯಿತು.

ಇಲ್ಲಿ **'ಪಟಪಟನೆ', 'ಜುಳುಜುಳು'** ಎಂಬ ಪದಗಳು ಅನುಕರಣಾವ್ಯಯಗಳಾಗಿವೆ.

### ಭಾಷಾ ಆಟಗಳು

ಅ. ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿಕೊಂಡು ಒಂದೇ ರೀತಿಯ ಅಪರಿಚಿತ ಸನ್ನಿವೇಶದ ಚಿತ್ರವನ್ನು ವೀಕ್ಷಿಸಲು ಅವಕಾಶ ನೀಡಿ, ಸರದಿಯಂತೆ ಚರ್ಚಿಸಲು/ ಮಾತನಾಡಲು ಹೇಳುವುದು. ಸರದಿ ಬಂದಾಗ ಮಾತನಾಡದೆ ಇದ್ದರೆ ಅವರು ಆಟದಿಂದ ಹೊರಗೆ ಹೋಗುವುದು.

ತಂಡ ಒಂದರಿಂದ ಒಬ್ಬರಾದ ಅನಂತರ ತಂಡ ಎರಡರಿಂದ ಒಬ್ಬರು ಮಾತನಾಡುವುದು.

**ಸನ್ನಿವೇಶದ ಚಿತ್ರಗಳು:**

೧. ವಿಮಾನ ನಿಲ್ದಾಣ

೨. ಬಂದರು

©KTBS NOT TO BE REPUBLISHED

೩. ಪೌರಾಣಿಕ ನಾಟಕದ ಒಂದು ಸನ್ನಿವೇಶ

೪. ಉಪಗ್ರಹ ಉಡಾವಣೆಯ ದೃಶ್ಯ

೫. ವಸ್ತು ಪ್ರದರ್ಶನದ ಚಿತ್ರಗಳು

೬. ಕೃಷಿ ಯಂತ್ರೋಪಕರಣಗಳು

೭. ಕಾರ್ಖಾನೆಗಳು

೮. ಮಾಲ್‌ಗಳು

## ಯೋಜನೆ

- ನಿಮಗೆ ಅಪರಿಚಿತವೆನಿಸುವ ಸನ್ನಿವೇಶದ ಚಿತ್ರಗಳನ್ನು ಸಂಗ್ರಹಿಸಿರಿ.
- ಎರಡು ಪ್ರಾಣಿ, ಪಕ್ಷಿಗಳ, ಮನುಷ್ಯನ, ಗೊಂಬೆಯ ಚಿತ್ರಗಳನ್ನು ಹಾಳೆಯ ಎದುರು ಬದುರು ಅಂಟಿಸಿರಿ. ಅವು ಏನು ಸಂಭಾಷಣೆ ನಡೆಸಬಹುದು ಎಂದು ಊಹಿಸಿ. ಅವುಗಳ ಮಾತುಗಳನ್ನು ಬರೆಯಿರಿ.

©KTBS NOT TO BE REPUBLISHED

## ಪೂರಕ ಓದು

- ಅಪರಿಚಿತ ಸನ್ನಿವೇಶಗಳ ಕುರಿತಾದ ಲೇಖನಗಳನ್ನು ಓದಿರಿ.
- 'ಮಂಗಳಗ್ರಹದಲ್ಲಿ ಪುಟ್ಟಿ' ಹಾಡನ್ನು ಅಭಿನಯಿಸಿರಿ.
- ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರವಾಗುವ ವಿವಿಧ ಸಂಭಾಷಣೆ, ಚರ್ಚೆಗಳನ್ನು ಆಲಿಸಿರಿ.

## ಶುಭ ನುಡಿ

- ಕನಸುಗಳನ್ನು ಕಟ್ಟಬೇಕು. ಅವುಗಳನ್ನು ನನಸು ಮಾಡಬೇಕು.
- ಅಪರಿಚಿತವಾಗಿರುವುದನ್ನು ಅರಿಯಬೇಕು. ಅದು ಪರಿಚಿತವಾಗುತ್ತದೆ.
- ಕಗ್ಗಲ್ಲಿನಲ್ಲಿ ಸುಂದರ ಮೂರ್ತಿಗಳು ಅರಳುತ್ತವೆ.

* * * * *

# ೩. ನೀ ಹೋದ ಮರುದಿನ

R9U9Z1

– ಚೆನ್ನಣ್ಣ ವಾಲೀಕಾರ

**ಪ್ರವೇಶ :** ಹೊಸಗನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ದಲಿತ-ಬಂಡಾಯ, ಮಹಿಳಾ ಸಾಹಿತ್ಯ ಎಂಬ ವಿವಿಧ ದೃಷ್ಟಿಕೋನಗಳಲ್ಲಿ ಬೆಳೆದು ಬಂದಿದೆ. ದಲಿತರು ತಮ್ಮ ಬದುಕಿನ ಶೋಷಣೆ ನೋವುಗಳನ್ನು ಹಾಡಾಗಿ ಹೊಮ್ಮಿಸಿದ್ದೆ ದಲಿತ ಸಾಹಿತ್ಯ. ಸ್ವಾತಂತ್ರ್ಯ, ಸಂವಿಧಾನ ಬಂದರೂ ನಮ್ಮ ಬದುಕು ಇನ್ನೂ ಬದಲಾಗಲಿಲ್ಲ ಎಂಬ ನೋವಿದೆ. ಬದಲಾವಣೆಯ ಗಾಳಿ ಬೀಸಲಿ ಬದುಕು ಹಸನಾಗಲಿ ಎಂಬ ಆಶಯವನ್ನು ಈ ಕವಿತೆ ಹೊಂದಿದೆ.

ನೀ ಹೋದ ಮರುದಿನ ಮೊದಲಂಗೆ ನಮ ಬದುಕು
ಆಗ್ಯಾದೋ ಬಾಬಾ ಸಾಹೇಬ
ನಿನ್ನಂಗ ದುಡಿದವರು ಕಳಕಳಿಯ ಪಡುವವರು
ಇನ್ನುತನ ಬರಲಿಲ್ಲ ಒಬ್ಬ

ಪ್ರತಿನಿತ್ಯ ಎದ್ದಾಗ ನಮಸುದ್ದಿ ಸಂಭ್ರಮವು
ದೇಕುವುದು ತಪ್ಪಿಲ್ಲ ನಮಗ
ಹೋದ ಹೋದಲ್ಲೆಲ್ಲ ಮೇಲವರ ಆಟಗಳು
ಉರಿಹಚ್ಚಿ ಬಿಡುತಾರ ಒಳಗ

ಎಲ್ಲಿ ಕೇಳಿದರಲ್ಲಿ ಬೂಟುಗಾಲಿನ ಸದ್ದು
ತರತರದ ನೋವುಗಳು ನಮಗ
ತಮ್ಮಂಗ ಇರದಿದ್ರೆ ತಲೆ ಕಡಿದು ಹಾಕುವರು
ಹೆಸರೀಗೆ ಸ್ವಾತಂತ್ರ್ಯ ನಮಗ

ಕೈಕಾಲು ಕಿವಿ ಮೂಗು ಮೈ ಮನಸು ತಲೆ ಕಣ್ಣು
ಕಳಕೊಂಡ ಬರಡು ಗಿಡ ನಾವು
ಮೈ ತುಂಬ ಮನತುಂಬ ಸಿಕ್ಕವರ ಮುಖಮುದ್ರೆ
ಚೀರಾಟ ಹಾರಟ ಸಾವೋ



@KTBS NOT TO BE REPUBLISHED

ಹೋಗ್ಬಾರೋ ದಾರಿಯಲಿ ಅಡುಗಲ್ಲುಗಳು ಸೇರಿ
ಮುಳಕಲ್ಲು ಹಾಸ್ಯಾವೊ ಪೂರ
ಹೆಚ್ಚಿಗೆ ಬೆಳೆದವರ ಉಳಿದವರ ಜೀವಗಳ
ಹಗಲಾಗ ಹೊಡೆದಾರ ಟಾರಾ

ಎಷ್ಟಂತ ಉರಿತಾರ ಎಷ್ಟಂತ ಹರಿತಾರ
ತಾಳದಕ್ಕೂ ಮಿತಿಯುಂಟು ಇಲ್ಲಿ
ತಾಳಿ ತಾಳಿಯೂ ಒಮ್ಮೆ ಚೇಳಾಗಿ ಕುಟುಕುವನು
ಸಾಮಾನ್ಯನಲ್ಲೋ ಬಡಜೀವಿ

ದುಡಿದುಡಿದು ಹುಟ್ಟಿರಲು ಕತ್ತಲಿರುವಾ ತನಕ
ಕೊತ್ತಿಗಳು ಹೊತ್ಯಾವ ಜೋರಾ
ರೋಡಿಗಿದ್ದವರೆಲ್ಲಾ ಗ್ವಾಡ್ಯಾಗ ಕುಂತಾರ
ಇನ್ನಿಲ್ಲ ನಮ ದಾರಿ ದೂರ

ಬಾಬಾ ಸಾಹೇಬರೇನು ಹುಚ್ಚರಲ್ಲವೇ ಅಲ್ಲ
ಗಾಂಧಿಜೊತೆ ಇರಲಿಲ್ಲ ಸುಮ್ಮ
ಅಷ್ಟು ಒದ್ದಾಡಿದಕೆ ಇಂಗೈತೆ ನಮ್ ಬದುಕು
ತಿಳಿಯೀತೆ ಈಗ್ಲಾದ್ರೂ ತಮ್ಮ

**ಕೌಶಲ :** ಬರೆಯುವುದು.

**ಸಾಮರ್ಥ್ಯ :** ಆಲಿಸಿದ ಮತ್ತು ಓದಿದ ವಿಷಯಗಳನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವುದು.

**ಕವಿ ಕೃತಿ ಪರಿಚಯ:**

ಡಾ. ಚೆನ್ನಣ್ಣ ವಾಲೀಕಾರರವರು ೧೯೪೩ ಏಪ್ರಿಲ್ – ೬ ರಂದು ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿಯಲ್ಲಿ ಜನಿಸಿದರು. ತಂದೆ: ಧೂಳಪ್ಪ ವಾಲೀಕಾರ, ತಾಯಿ: ಸಾಬಮ್ಮ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ, ಪಿಹೆಚ್.ಡಿ ಪಡೆದ ಇವರು ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ.

@KTBS NOT TO BE REPUBLISHED



ದಲಿತ-ಬಂಡಾಯಯದ ಹಿನ್ನೆಲೆಯಲ್ಲಿ **'ಮರದ ಮೇಲಿನ ಗಾಳಿ'**, **'ಪ್ಯಾಂಥರ್ ಪದ್ಯಗಳು'**, **'ಧಿಕ್ಕಾರದ ಹಾಡುಗಳು'** ಎಂಬ ಕವನ ಸಂಕಲನಗಳನ್ನು ರಚಿಸಿದ್ದಾರೆ. **'ಕಪ್ಪು ಕತೆಗಳು'**, **'ಹೆಪ್ಪುಗಟ್ಟಿದ ಸಮುದ್ರ'**, **'ಕುತ್ತದಲಿ ಕುದ್ದವರ ಕತೆಗಳು'** ಎಂಬ ಕಥಾಸಂಕಲನಗಳನ್ನು, **'ವ್ಯೋಮಾವ್ಯೋಮ'**, **'ಸುನೀತಗಳ ಸುಖಾವ್ಯಾವೃತ'** ಎಂಬ ಮಹಾಕಾವ್ಯಗಳನ್ನು, **'ಬೊಂಕದ ಕೆಳಗಿನ ಜನ'**, **'ಅವಿವೇಕಿ ರಾಜ ಕಥೆ'**, **'ತಲೆ ಹಾಕುವವರು'** ಎಂಬ ನಾಟಕಗಳೊಂದಿಗೆ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿ ಗೌರವ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಕವಿತೆಯನ್ನು ಇವರ **'ಸಮಗ್ರ ಕಾವ್ಯ ಸಂಪುಟ'**ದಿಂದ ಆರಿಸಿಕೊಳ್ಳಲಾಗಿದೆ. ಡಾ. ಚೆನ್ನಣ್ಣ ವಾಲೀಕಾರರವರು ೨೩.೧೧.೨೦೧೯ ರಂದು ನಿಧನರಾಗಿದ್ದಾರೆ.

## ಪದಗಳ ಅರ್ಥ

ಬರಡು - ಸತ್ವಹೀನ; ಕೊತ್ತಿಗಳು - ಬೆಕ್ಕುಗಳು; ಟಾರಾ - ಡಾಂಬರು.

**ವಿವರ ತಿಳಿಯಿರಿ :**

ಬಾಬಾ ಸಾಹೇಬ - ಡಾ. ಬಿ. ಆರ್. ಅಂಬೇಡ್ಕರ್

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

೧. ಯಾರು ಹೋದ ಮೇಲೆ ನಮ್ಮ ಬದುಕು ಮೊದಲಿನಂತೆ ಆಗಿದೆ ಎಂದು ಕವಿ ಹೇಳಿದ್ದಾರೆ?

೨. ಕವಿ ಯಾವುದು ಪ್ರತಿನಿತ್ಯ ತಪ್ಪಿಲ್ಲ ನಮಗೆ ಎಂದಿದ್ದಾರೆ?

೩. ಕವಿ ಏನನ್ನು ಕಳೆದುಕೊಂಡ ಬರಡು ಗಿಡ ನಾವು ಎಂದಿದ್ದಾರೆ?

೪. ತಾಳಿ ತಾಳಿ ಒಮ್ಮೆ ಏನಾಗಿ ಕುಟುಕುವನು?

೫. 'ನೀ ಹೋದ ಮರುದಿನ' ಪದ್ಯವನ್ನು ಬರೆದವರು ಯಾರು?

**ಆ. ಸ್ವಂತ ವಾಕ್ಯದಲ್ಲಿ ಬಳಸಿರಿ.**

೧. ಸ್ವಾತಂತ್ರ್ಯ    ೨. ಬದುಕು    ೩. ಸಂಭ್ರಮ    ೪. ಕುಟುಕು

@KTBS NOT TO BE REPUBLISHED

**ಇ. ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

ನೀ ಹೋದ ________________________

________________________________

________________________________

____________________ ಬರಲಿಲ್ಲ ಒಬ್ಬ ॥ನೀ ಹೋದ॥

ಕೈಕಾಲು ________________________

________________________________

________________________________

________________________ ಹಾರಟ ಸಾವೋ ॥ನೀ ಹೋದ॥

NOT TO BE REPUBLISHED @KTBS

## ವ್ಯಾಕರಣ ಮಾಹಿತಿ

### ಲೇಖನ ಚಿಹ್ನೆಗಳು

ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳೆಂದು ಕರೆಯುವರು.

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

೧. **ಒಂದಾನೊಂದು ಕಾಲದಲ್ಲಿ ಒಂದು ದಟ್ಟವಾದ ಅರಣ್ಯವಿತ್ತು.**

೨. **ಲಘುಪತನಕ ಮರದ ಮೇಲಕ್ಕೆ ಹಾರಿತು.**

**ಇಲ್ಲಿ ವಾಕ್ಯದ ಕೊನೆಯಲ್ಲಿ ಪೂರ್ಣವಿರಾಮ ಚಿಹ್ನೆ (.) ಬಳಕೆಯಾಗಿದೆ.** ಇದನ್ನು **'ಬಿಂದು'** ಎಂದೂ ಕರೆಯುತ್ತಾರೆ. ಇದು ವಾಕ್ಯದ ಪೂರ್ಣಾರ್ಥ ಕ್ರಿಯೆಯನ್ನು ಸೂಚಿಸುತ್ತದೆ. ಇದು ವಾಕ್ಯದ ಕೊನೆಯಲ್ಲಿ ಬಳಕೆಯಾಗುತ್ತದೆ.

೩. **ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ.**

**೪. ಅಷ್ಟು ಸಾಕು; ಮುಂದಿನದು ನನಗೆ ಬಿಡು.**

ಇಲ್ಲಿ ವಾಕ್ಯದ ನಡುವೆ **'ಅರ್ಧವಿರಾಮ ಚಿಹ್ನೆ' (;)** **ಬಳಕೆಯಾಗಿದೆ.** ಇದು ಪ್ರಧಾನ ವಾಕ್ಯಗಳಲ್ಲಿನ ಉಪವಾಕ್ಯಗಳ ಅಂತ್ಯದಲ್ಲಿ ಬಳಕೆಯಾಗುತ್ತದೆ.

**೫. ಮಂಥರಕ, ಹಿರಣ್ಯರೋಮ, ಲಘುಪತನಕ ಮತ್ತು ಚಿತ್ರಾಂಗ ನಾಲ್ವರು ಗೆಳೆಯರು.**

**೬. ಬೇಡನು ಕೂಡಲೆ ಮಂಥರಕನನ್ನು ಬಲೆಯನ್ನು ನೆಲಕ್ಕಿಳಿಸಿ ಹೊರಟನು.**

ಇಲ್ಲಿ ವಾಕ್ಯದ ನಡುನಡುವೆ **ಅಲ್ಪವಿರಾಮ ಚಿಹ್ನೆ (,)** **ಬಳಕೆಯಾಗಿದೆ.** ಇದು ಸಂಬೋಧನೆಯ ಮುಂದೆ, **ಕರ್ತೃ, ಕರ್ಮ, ಕ್ರಿಯಾಪದ**ಗಳಿಗೆ ವಿಶೇಷಣಗಳು ಬಂದಾಗ ಬಳಕೆಯಾಗುತ್ತದೆ. ಹಾಗೂ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಅಗತ್ಯಕ್ಕೆ ಹೊಂದಿಕೊಂಡು ಬಳಕೆಯಾಗುತ್ತದೆ.

**೭. ನೀನು ಏಕೆ ಓಡೋಡಿ ಬಂದೆ?**

**೮. ಯಾರಿವರು? ಎಲ್ಲಿಂದ ಬಂದರು?**

ಇಲ್ಲಿ **ವಾಕ್ಯದ ಕೊನೆಯಲ್ಲಿ 'ಪ್ರಶ್ನಾರ್ಥಕ ಚಿಹ್ನೆ' (?) ಬಳಕೆಯಾಗಿದೆ.** ಇದು ಪ್ರಶ್ನೆ ಕೇಳುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಕೆಯಾಗುತ್ತದೆ.

**೯. ಅಬ್ಬಾ! ಎಂಥ ಸೊಗಸಾದ ಹಾಡು.**

**೧೦. ಆಹಾ! ಎಂಥ ಸುಂದರ ದೃಶ್ಯ.**

**ಇಲ್ಲಿರುವ ವಾಕ್ಯದಲ್ಲಿ 'ಭಾವಸೂಚಕ ಚಿಹ್ನೆ' (!) ಬಳಕೆಯಾಗಿದೆ.** ಇದನ್ನು **'ಆಶ್ಚರ್ಯಸೂಚಕ ಚಿಹ್ನೆ'** ಎಂದೂ ಹೇಳುತ್ತಾರೆ. ಇದು ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬಳಕೆ-ಯಾಗುತ್ತದೆ.

ಸಂದರ್ಭಕ್ಕೆ ತಕ್ಕಂತೆ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಬಳಸಬೇಕು. ಇದರಿಂದ ಸ್ಪಷ್ಟವಾಗಿ ಓದಲು, ಅರ್ಥ ತಿಳಿಯಲು ಸಾಧ್ಯವಾಗುತ್ತದೆ. ಇನ್ನೂ ಕೆಲವು ಲೇಖನ ಚಿಹ್ನೆಗಳಿವೆ. ಅವುಗಳ ವಿವರಣೆಯನ್ನು ಮುಂದೆ ತಿಳಿಯೋಣ.

* * * * *

© KTBS NOT TO BE REPUBLISHED

# ೪. ಮಗು ಮತ್ತು ಹಣ್ಣುಗಳು

– ಎಚ್. ಎಸ್. ಶಿವಪ್ರಕಾಶ್

**ಪ್ರವೇಶ :** ಮಾನವನಿಗೆ ಪ್ರಕೃತಿಯೇ ಮೊದಲ ಗುರು. ಎಲ್ಲರಿಂದಲೂ ಎಲ್ಲದರಿಂದಲೂ ಮಾನವ ಪಾಠ ಕಲಿಯಬೇಕು. ಪ್ರಾಣಿ, ಪಕ್ಷಿ, ಮರ–ಗಿಡಗಳಿಂದಲೂ ಕಲಿಯುವ ವಿಷಯಗಳು ಬಹಳಷ್ಟಿವೆ. ‘ಎಲ್ಲರೊಳಗೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ’ ಎನ್ನುವ ಹಾಗೆ ಹಣ್ಣುಗಳಿಂದಲೂ ಕಲಿಯಬೇಕಾದ ಪಾಠಗಳಿವೆ. ಹಣ್ಣಿನ ಹಾಗೆ ಬದುಕು ಮಾಗಿದರೆ ಬಾಳು ಸಿಹಿಯಾಗಿರುತ್ತದೆ ಎಂಬ ಆಶಯದ ಪದ್ಯವಿದು.



NOT TO BE REPUBLISHED

ಹಣ್ಣಿನಂಗಡಿ ಮುಂದೆ ಕಣ್ಣರಳಿಸುವ ಮಗು
ಇಲ್ಲಿ ಈ ತಿರುವಲ್ಲಿ ಥಟ್ಟನವತರಿಸಿದ ಕಪ್ಪು ಲಾರಿಯ ಹಾಗೆ
ಗಾಳಿ ಕೀಟಲೆ ಉಗುರೊ
ತುಂಟರೆಸೆಯುವ ಕಲ್ಲೋ ॥೧॥

ಕಾಯಿಯಲ್ಲೇ ನಿನ್ನ ಕೆಡವದಿರಲಿ
ಹಣ್ಣಿನಂಗಡಿಯಾಗು ನೀನೂನು
ಗಿರವಿಯಂಗಡಿ ಗುಜರಿಗಳ ಧೂಳು ಹಬ್ಬಿದ
ಊರ ಮಾರುಕಟ್ಟೆಯ ನಡುವೆ ॥೨॥

ಹಣ್ಣಾಗಬೇಕು ಮಗು
ಮೈಯೆಲ್ಲ ಮಾಗಿಹಣ್ಣಿನ ಸುಕ್ಕು ಬರುವವರೆಗೆ
ಪಕ್ವತನ ಬಿರಿದ ಬಾಳೆಹಣ್ಣಿದೆಯಲ್ಲ
ಅದರ ಹಾಗೇ ಕೊಂಚ ಬಾಗಬೇಕು ॥೩॥

  ಕೊಬ್ಬಿದರೆ ಚಕೋತನೆಯ ಹಾಗೆ
  ಕುಗ್ಗಿದರೆ ನಿಂಬೆ ಹಣ್ಣಿನ ಹಾಗೆ
  ಹುಳಿಗಟ್ಟುವುದು ನಿನ್ನೊಳಗೆ
  ಸರಿಗಾತ್ರವಾಗಿ ಸಮನಿಸಲಿ ನಿನ್ನತನ ॥೪॥

ಕಿತ್ತಲೆಯ ಹಾಗೆ, ಮೋಸಂಬಿ ಹಾಗೆ
ರಸಪೂರಿ ಮಾವಿನ ಹಣ್ಣಿನಂತೆ
ಅಂಜೂರದಂತೆ ಅಪರೂಪವಾಗು ಜನರ ಕಣ್ಣಿಗೆ;
ಕಂಡರೆ ಕಾಣು ಕಲ್ಲಂಗಡಿಯಾಗಿ ॥೫॥

  ಬೇಸಿಗೆಯ ಕಮರಿರುವ ಕಣ್ಣುಗಳಿಗೆ
  ದಳದಳಕೊಯ್ದು ಅರಳಿಸಿದ ದಾಳಿಂಬೆಯೊಳಗೆ
  ಥಳಥಳ ಕೆಂಡ ಬಣ್ಣ ಮಣಿಮಣಿ
  ಹನಿಹನಿ ತನಿರಸದ ಖನಿಯಾಗು; ॥೬॥

ಹಬ್ಬಿಕೋ ದ್ರಾಕ್ಷಿ ಬಳ್ಳಿಯ ಹಾಗೆ
ಆಯುಷ್ಯ ಚಪ್ಪರದ ಉದ್ದಗಲ;
ತಬ್ಬಿಕೋ ಬಿಡಬೇಡ;
ಹಣ್ಣು ತೊಡಿಸಲು ನಿನಗೆ ॥೭॥


  ತಾನೆ ಮಣ್ಣಾಗುತ-ಬರಲು ತೋಟಗಾತಿ
  ಬೆಲೆಯ ರಾಕೆಟ್ಟು ಯಾನ ಹೊರಡದಿರು
  ಸೇಬು ಹಣ್ಣಿನ ಜೊತೆಗೆ
  ಎಲ್ಲರಿಗೂ ದಕ್ಕುವ ಎಲಚಿಯಾಗು ॥೮॥

NOT TO BE REPUBLISHED @KTBS

**ಕೌಶಲ : ಮಾತನಾಡುವುದು.**

**ಸಾಮರ್ಥ್ಯ : ಇತರರೊಡನೆ ಮಾತನಾಡುವಾಗ ಗೌರವ ಸೂಚಕ ಪದಗಳನ್ನು ಬಳಸುವುದು.**

## ಕವಿ ಕೃತಿ ಪರಿಚಯ:



ಶ್ರೀ ಎಚ್. ಎಸ್. ಶಿವಪ್ರಕಾಶ್ ಅವರು ೧೯೫೪ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಮಹಾಚೈತ್ರ, ಸುಲ್ತಾನ್ ಟಿಪ್ಪು, ನವಿಲು ನಗರ, ಮಳೆಬಿದ್ದ ನೆಲದಲ್ಲಿ ಮೊದಲಾದ ಕೃತಿಗಳನ್ನು ರಚಿದ್ದಾರೆ. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಪದಗಳ ಅರ್ಥ

ಗಿರಿವಿಯಂಗಡಿ – ವಸ್ತುಗಳನ್ನು ಅಡವಿಟ್ಟುಕೊಂಡು ಹಣ ನೀಡುವ ಅಂಗಡಿ; ಗುಜರಿ – ಹಳೆಯ ವಸ್ತುಗಳನ್ನು ಮಾರುವ ಸ್ಥಳ; ಪಕ್ವತನ – ಮಾಗಿದ; ಕೊಬ್ಬು – ದಪ್ಪನಾಗು; ಕಮರು – ಕಂದು; ಖನಿ – ಗಣಿ, ಆಕರ; ದಕ್ಕು – ದೊರಕು.

@KTBS NOT TO BE REPUBLISHED

## ಅಭ್ಯಾಸಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕವಿಯ ಪ್ರಕಾರ ಮಗು ಏನಾಗಬೇಕು?

೨. ಮಗು ಯಾವ ಹಣ್ಣಿನ ಹಾಗೆ ಬಾಗಬೇಕು?

೩. ಯಾವ ಹಣ್ಣಿನಂತೆ ಕುಗ್ಗಬೇಕು ಎಂದು ಕವಿಗಳು ಹೇಳುತ್ತಾರೆ?

೪. ಅಪರೂಪವಾದ ಹಣ್ಣು ಯಾವುದು?

೫. ಕಮರಿರುವ ಕಣ್ಣುಗಳಿಗೆ ಹೇಗೆ ಕಾಣಬೇಕು?

### ಆ. ಬಿಟ್ಟಸ್ಥಳ ತುಂಬಿರಿ.

೧. ಥಳ ಥಳ ಕೆಂಡ ____________ ಮಣಿ ಮಣಿ.

೨. ಹಬ್ಬಿಕೋ ______________ ಬಳ್ಳಿಯ ಹಾಗೆ.

೩. ಎಲ್ಲರಿಗೂ ________________ ಎಲಚಿಯಾಗು.

೪. ಬೆಲೆಯ ________ ಯಾನ ಹೊರಡದಿರು.

೫. ಸರಿಗಾತ್ರವಾಗಿ ಸಮನಿಸಲಿ ______

**ಇ. ಈ ಪದಗಳನ್ನು ಬಿಡಿಸಿ ಬರೆಯಿರಿ.**

೧. ಹಣ್ಣಿನಂಗಡಿ        ೨. ಕಣ್ಣರಳಿಸು        ೩. ತುಂಟರೆಸೆಯುವ

೪. ಹುಳಿಗಟ್ಟುವುದು        ೫. ನಿನ್ನೊಳಗೆ        ೬. ಅಪರೂಪವಾಗು

**ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಕೊಬ್ಬಿದರೆ ______________________________

________________________________________

________________________________________

________________________________ನಿನ್ನತನ

@KTBS NOT TO BE REPUBLISHED

**ವ್ಯಾಕರಣ ಮಾಹಿತಿ**

**ನಾವು ಹಿಂದಿನ ಪಾಠದಲ್ಲಿ ಕೆಲವು ಲೇಖನ ಚಿಹ್ನೆಗಳನ್ನು ಪರಿಚಯ ಮಾಡಿಕೊಂಡಿದ್ದೇವೆ. ಈಗ ಇನ್ನೂ ಕೆಲವು ಲೇಖನ ಚಿಹ್ನೆಗಳನ್ನು ತಿಳಿಯೋಣ.**

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

೧. **ನೌಕಾಸೇನೆ :–** ಭಾರತೀಯ ನೌಕಾಸೇನೆ ಭೂಸೇನೆಯಷ್ಟೇ ಹಳೆಯದು. ಜಲಮಾರ್ಗದಲ್ಲಿ ವೈರಿಗಳನ್ನು ತಡೆಯಲು ನೌಕಾಸೇನೆ ಬಳಕೆಯಾಗುತ್ತದೆ.

ಇಲ್ಲಿ ವಾಕ್ಯದ ಶಿರೋನಾಮೆಯ ಅನಂತರ ವಿವರಣಾತ್ಮಕ ಚಿಹ್ನೆ (:–) ಬಳಕೆಯಾಗಿದೆ. ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಈ ಚಿಹ್ನೆ ಬಳಕೆಯಾಗುತ್ತದೆ.

೨. ಒಂದು ಬಿಲದೊಳಗೆ 'ಹಿರಣ್ಯರೋಮ' ಎಂಬ ಮೂಷಿಕವು ಮನೆಮಾಡಿಕೊಂಡಿತ್ತು.

ಮೇಲಿನ ವಾಕ್ಯದಲ್ಲಿ 'ಹಿರಣ್ಯರೋಮ' ಈ ಪದಕ್ಕೆ ವಾಕ್ಯವೇಷ್ಟನ ಚಿಹ್ನೆ ('    ')

ಬಳಕೆಯಾಗಿದೆ. ಇದು ಪಾರಿಭಾಷಿಕ/ಪ್ರಧಾನ/ವಿಶಿಷ್ಟ ಪದಗಳನ್ನು ಬರೆಯುವಾಗ ಬಳಕೆಯಾಗುತ್ತದೆ.

೩. "ಸ್ವಾಮಿ, ನನಗೆ ಅದೃಷ್ಟವಿಲ್ಲ. ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ. ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ" ಎಂದು ಮಡಿವಾಳಿ ಬೊಬ್ಬಿಟ್ಟು ಅತ್ತಳು.

ಮೇಲಿನ ವಾಕ್ಯದಲ್ಲಿ ಉದ್ಧರಣ ಚಿಹ್ನೆ (" ") ಬಳಕೆಯಾಗಿದೆ. ಇದು ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಹೇಳುವಾಗ ಬಳಕೆ-ಯಾಗುತ್ತದೆ.

೪. ನರಿಯು ಕೊಕ್ಕರೆ(ನೀರುಹಕ್ಕಿ)ಯನ್ನು ಹಿಡಿಯಲು ಹೊಂಚು ಹಾಕಿತು.

ಮೇಲಿನ ವಾಕ್ಯದಲ್ಲಿ ಆವರಣ ಚಿಹ್ನೆ ( ) ಬಳಕೆಯಾಗಿದೆ. ಇದು ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಕೆಯಾಗುತ್ತದೆ.

* * * * *

@KTBS
NOT TO BE REPUBLISHED

## ಪೂರಕ ಪಾಠಗಳು

# ೧. ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್

– ಸಮಿತಿ ರಚನೆ



ನಮ್ಮ ಕನ್ನಡ ಸಾಹಿತ್ಯಕ್ಕೆ ಸುಮಾರು ೧೫೦೦ ವರ್ಷಗಳ ಇತಿಹಾಸವಿದೆ. ಜನಪದ ಗೀತೆ, ಕಥೆಗಳು, ಲಾವಣಿ ಹಾಗೂ ರಂಗಭೂಮಿ ಕನ್ನಡ ಸಾಹಿತ್ಯವನ್ನು ಜನಸಾಮಾನ್ಯರಿಗೆ ಮೌಖಿಕವಾಗಿ ತಲುಪಿಸುತ್ತ ಬಂದಿವೆ. ಪುರಾಣ, ಇತಿಹಾಸ ಮುಂತಾದ ಪ್ರಸಿದ್ಧವಾದ ಸಾಹಿತ್ಯವನ್ನು ಮನೋರಂಜನೆಯ ಜೊತೆಗೆ ರವಾನಿಸುವ ಕಾರ್ಯವನ್ನು ರಂಗಭೂಮಿ ವಹಿಸಿಕೊಂಡಿದೆ. ಶ್ರವ್ಯ ದೃಶ್ಯ ಸಾಧನವಾದ ರಂಗಭೂಮಿಯ ಪಾತ್ರಗಳು ಬಹು ಬೇಗನೆ ಜನರನ್ನು ತಲುಪುತ್ತವೆ. ರಂಗಭೂಮಿ ಕಲೆಯನ್ನು ಉಳಿಸಿ ಬೆಳೆಸುವುದರಲ್ಲಿ ಹಲವಾರು ಮಹನೀಯರು ತಮ್ಮ ಜೀವನವನ್ನೇ ಮುಡುಪಾಗಿರಿಸಿದ್ದಾರೆ. ಅಂತಹ ಮಹಾನ್ ಕಲಾವಿದರಲ್ಲಿ ಮಹಮ್ಮದ್ ಪೀರ್ ಒಬ್ಬರು.

ಮಹಮ್ಮದ್ ಪೀರ್ ಕನ್ನಡ ವೃತ್ತಿ ರಂಗಭೂಮಿಯ ಪ್ರಸಿದ್ಧ ನಟ. ಮೈಸೂರಿನ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದರು. ಇವರ ತಂದೆ ಪೈಲ್ವಾನ್ ಮೊಹಿಯುದ್ದೀನ್. ತಾಯಿ ಮುಬಾರಕ್ಬಿ. ತಂದೆತಾಯಿಯರನ್ನು ಬಾಲ್ಯದಲ್ಲಿಯೆ ಕಳೆದುಕೊಂಡ ಪೀರ್ ಅವರು ಅನಂತರ ಸೋದರಮಾವನ ಆಶ್ರಯದಲ್ಲಿ ಬೆಳೆದರು. ಇವರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿರುವಾಗಲೆ ನಾಟಕದಲ್ಲಿ ಅಭಿರುಚಿ ಹತ್ತಿತು. ಅವಕಾಶ ದೊರೆತಾಗಲೆಲ್ಲಾ ತಪ್ಪದೆ ನಾಟಕಗಳನ್ನು ನೋಡುತ್ತಿದ್ದ ಇವರ ಮೇಲೆ ವರದಾಚಾರ್ಯ, ಕೃಷ್ಣಮೂರ್ತಿರಾವ್, ಬಳ್ಳಾರಿ ರಾಘವ ಅವರ ಪ್ರಭಾವವಾಯಿತು. ನಾಟಕದ ಗೀಳಿನಿಂದಾಗಿ ವಿದ್ಯಾಭ್ಯಾಸ ಕುಂಠಿತಗೊಂಡಿತು. ೧೯೧೫ರಲ್ಲಿ ಮೈಸೂರಿನಲ್ಲಿಯೇ ಇದ್ದ ಗಿರಿಧರಲಾಲ್ ಕಂಪನಿ ಪ್ರವೇಶಿಸುವ ಮೂಲಕ ಇವರು ರಂಗಭೂಮಿಗೆ ಪದಾರ್ಪಣ ಮಾಡಿದರು.

ಕೃಷ್ಣಲೀಲಾ ಇವರು ಅಭಿನಯಿಸಿದ ಮೊದಲ ನಾಟಕ. ೧೯೨೦ರಲ್ಲಿ ಪೀರ್ ಅವರು ಈ ಸಂಸ್ಥೆಯನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಗುರುಕಾರ್ ಕಂಪನಿ ಎಂದು ಪ್ರಸಿದ್ಧವಾಗಿದ್ದ ನಟಭಯಂಕರ ಗಂಗಾಧರರಾಯರ 'ಭಾರತ ಜನಮನೋಲ್ಲಾಸಿನಿ' ನಾಟಕ ಕಂಪನಿಗೆ ಸೇರಿದರು. ಇಲ್ಲಿ ಎಂಟು ವರ್ಷಗಳ ಕಾಲ ದುಡಿದರು. ಇಲ್ಲಿರುವಾಗ 'ಕಾಳಿದಾಸ'ದಲ್ಲಿ ಕುರುಬ, 'ಸದಾರಮೆ'ಯಲ್ಲಿ ಕಳ್ಳ, 'ಪ್ರಭಾಮಣಿ'ಯಲ್ಲಿ ವಿರೋಚನ, 'ಸುಭದ್ರಾ'ದಲ್ಲಿ ಬ್ರಾಹ್ಮಣ– ಇಂತಹ ಹಾಸ್ಯ

ಪಾತ್ರಗಳು ಅವರ ಪಾಲಿನದಾದವು. ಬರುಬರುತ್ತಾ ಪೀರ್ ಅವರು ಕಂಪನಿಯ ನಟರಾಗಿಯಷ್ಟೇ ಅಲ್ಲದೆ ಆ ಕಂಪನಿಯ ಸಲಹೆಗಾರರಾಗಿ, ಕಾರ್ಯದರ್ಶಿಯಾಗಿ, ಸ್ಟೇಜ್ ಮ್ಯಾನೇಜರ್ ಆಗಿ ಕೊನೆಗೆ ಕಂಪನಿಯ ಮ್ಯಾನೇಜರ್ ಆದರು. ಕೆಲವು ಸಹ ನಟರ ಸಹಕಾರದಿಂದ ೧೯೩೨ರಲ್ಲಿ ಚಂದ್ರಕಲಾ ನಾಟಕ ಮಂಡಳಿಯನ್ನು ಸ್ಥಾಪಿಸಿದರು.

ಐದೂವರೆ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಈ ಸಂಸ್ಥೆ ಪೀರ್‌ರವರ ನೇತೃತ್ವದಲ್ಲಿ ಸಾಧಿಸಿದ ಕಲಾಸಿದ್ಧಿ ಅಸಾಮಾನ್ಯ. ಈ ಕಂಪನಿಯ ಮೊದಲ ಪ್ರಯೋಗ ದ್ವಿಜೇಂದ್ರಲಾಲ್‌ರಾಯರ 'ಷಾಜಹಾನ' ಪ್ರಚಂಡ ಜನಪ್ರಿಯತೆ ಪಡೆಯಿತು. ಒಂದೇ ನಾಟಕ ಒಂಬತ್ತು ದಿನಗಳು ಸತತ ಪ್ರದರ್ಶಿತವಾದ ಕೀರ್ತಿ ಇದರದಾಯಿತು. ಎಚ್.ಎಲ್.ಎನ್.ಸಿಂಹ ಅವರ 'ಸಂಸಾರ ನೌಕೆ' (೧೯೩೨), ಪುಟ್ಟಸ್ವಾಮಯ್ಯನವರ 'ಗೌತಮ ಬುದ್ಧ' (೧೯೩೪) ಮುಂತಾದ ಹೊಸ ಬಗೆಯ ನಾಟಕಗಳನ್ನು ಈ ಮಂಡಳಿ ಆಡಿತು. ಈ ಮೂರು ವಿಶಿಷ್ಟ ನಾಟಕಗಳಲ್ಲದೆ ಪ್ರಭಾಮಣಿ ವಿಜಯ, ವೀರಸಿಂಹ ಚರಿತ್ರೆ, ಸದಾರಮೆ, ಸುಭದ್ರಾ ಪರಿಣಯ ಮೊದಲಾದ ನಾಟಕಗಳೂ ಈ ಮಂಡಳಿಯ ನಾಟಕಗಳಾದವು. 'ಸಂಸಾರ ನೌಕ'ದಲ್ಲಿ ಸುಂದರ, 'ಷಾಜಹಾನ್' ನಾಟಕದಲ್ಲಿ ದಾರಾ, 'ಗೌತಮಬುದ್ಧ'ದಲ್ಲಿ ಗೌತಮ ಈ ಪಾತ್ರಗಳ ಅಭಿನಯ ವಿಶೇಷ ಖ್ಯಾತಿಗೆ ಪಾತ್ರವಾಗಿ ಪೀರ್ ಅವರ ಹೆಸರು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಯಿತು. ವರದಾಚಾರ್ಯ, ರಾಘವರ ಅನಂತರ ರಂಗಾಭಿನಯ ಕಲೆ ಪ್ರಖರವಾದುದು ಪೀರ್ ಅವರಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ಕನ್ನಡ ರಾಘವ ಎಂದೇ ಪ್ರಸಿದ್ಧರಾದ ಪೀರ್ ಅವರಿಗೆ ೧೯೩೫ರಲ್ಲಿ ಹುಬ್ಬಳ್ಳಿಯಲ್ಲಿ ಮುದವೀಡು ಕೃಷ್ಣರಾಯರ ನೇತೃತ್ವದಲ್ಲಿ ನಾಟ್ಯ ಕಲಾ ದುರಂಧರ ಪ್ರಶಸ್ತಿ ನೀಡಲಾಯಿತು.

ಐದೂವರೆ ಅಡಿ ಎತ್ತರ, ವಿಶಾಲ ಹಣೆ, ಅಗಲ ಕಣ್ಣುಗಳು, ಆಕರ್ಷಕ ಧ್ವನಿಯ ಪೀರ್ ಅವರದು ಸರಳ ಜೀವನ. ದಕ್ಷ ಅಭಿನಯ ಹಾಗೂ ಧ್ವನಿಪೂರ್ಣ ಸಂಭಾಷಣಾ ವೈಖರಿ ಇವರ ನಾಟಕಗಳ ಜೀವಾಳ. ಅಬ್ಬರದ ಸಂಗೀತ, ಹಾಡುಗಳಿಂದ ಅನೇಕ ವೇಳೆ ನಾಟಕದ ಓಟಕ್ಕೆ ಕುಂದು ಬರುತ್ತದೆ ಎಂಬುದು ಇವರ ಅಭಿಪ್ರಾಯ. ಸಂಗೀತ ಪ್ರಧಾನ ನಾಟಕಗಳ ಮಹತ್ವ ಕಡಿಮೆಯಾಗಿದ್ದಾಗ, ಜನಪ್ರಿಯತೆ ಕುಂದುತ್ತಿದ್ದಾಗ, ಸಾಹಿತ್ಯ ಮೌಲ್ಯವುಳ್ಳ ಗದ್ಯ ಕೃತಿಗಳೂ ಅಭಿನಯ ಯೋಗ್ಯ ಎಂದು ತೋರಿಸಿದ ಕೀರ್ತಿ ಪೀರ್ ಅವರಿಗೆ ಸಲ್ಲಬೇಕು.

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಕನ್ನಡ ರಾಘವ ಎಂದು ಪ್ರಸಿದ್ಧರಾದವರು ಯಾರು?

೨. ಮಹಮ್ಮದ್ ಪೀರ್ ಅವರು ಯಾರ ಆಶ್ರಯದಲ್ಲಿ ಬೆಳೆದರು?

೩. ಮಹಮ್ಮದ್ ಪೀರ್ ಅವರಿಗೆ ನಾಟಕದ ಅಭಿರುಚಿ ಯಾವಾಗ ಹತ್ತಿತು?

೪. ಮಹಮ್ಮದ್ ಪೀರ್ ಅವರ ಯಾವ ಪಾತ್ರಗಳು ವಿಶೇಷ ಖ್ಯಾತಿಗೆ ಪಾತ್ರವಾಗಿವೆ?

೫. ಮಹಮ್ಮದ್ ಪೀರ್‌ರವರ ತಂದೆ ತಾಯಿ ಹೆಸರೇನು?

* * * * *

©KTBS NOT TO BE REPUBLISHED

# ೨. ಅವ್ವ

– ಲಲಿತಾ ಕೆ. ಹೊಸಪ್ಯಾಟಿ

ಬೊಗಸೆ ತುಂಬ ಹೂವ ತಂದು
ಪಾದಕಮಲಕೆರಗುವೆ
ನಿನ್ನ ಅಡಿಗೆ ಮಣಿದು ಮತ್ತೆ
ಭಾಗ್ಯವನ್ನೆ ಬೇಡುವೆ ॥೧॥

ಗರ್ಭದಲ್ಲಿ ಮಾಂಸ ಮುದ್ದೆ
ಅ ಆ ಇ ಈ ತಿಳಿಯದು
ಜನಿಸಿ ಧರೆಗೆ ಬಿದ್ದ ಕ್ಷಣವೆ
'ಅವ್ವ' ಅಂತು ಕೊರಳು ॥೨॥



ನೋವ ನುಂಗಿ ನನ್ನ ನಂಬಿ
ಹಾಲ ನೀನು ಕುಡಿಸಿದೆ
ಕಣ್ಣ ನೀರ ಒರೆಸಿ ನೀನು
ಎದೆಗವಚಿ ರಮಿಸಿದೆ ॥೩॥

ಬಿದ್ದರಂತು ಓಡಿಬಂದು
ಎತ್ತಿಕೊಂಡು ರಮಿಸಿದೆ
ಗೆದ್ದರಂತು ಖುಷಿಯು ನಿನಗೆ
ಹೊತ್ತುಕೊಂಡು ಸಾರಿದೆ ॥೪॥

ವಿದ್ಯೆ ಕಲಿಸಿ ಬುದ್ಧಿನೀಡಿ
ಸಿದ್ಧಿಪಡೆಯೆ ಕಲಿಸಿದೆ
ಯಶದ ಹಿಂದೆ ಹರಕೆ ನೀಡಿ
ಜೀವತ್ಯಾಗ ಮಾಡಿದೆ ॥೫॥

@KTBS NOT TO BE REPUBLISHED

ರೊಕ್ಕಕೆಲ್ಲ ಲೆಕ್ಕವಿಲ್ಲ
ನಿನ್ನ ಋಣ ಅಗಣಿತ.
ಪಾದಕಮಲಕೊಂದೆ ಹೂವು
ನನ್ನ ಪ್ರೀತಿ ಸೀಮಿತ ॥೬॥

ತಾಯಿ ಹರಕೆ ಮುಂದೆ ಜಗದಿ
ಯಾವುದಿಲ್ಲ ಮಿಗಿಲು ತಾನು
ಕಾಯೊ ಗುಣದ ದೇವರವ್ವ
ಅವ್ವ ನಿನ್ನ ಹೆಸರು ॥೭॥

**ಕವಿ ಕೃತಿ ಪರಿಚಯ :**



**ಲಲಿತಾ ಕೊಟ್ರೆಪ್ಪ ಹೊಸಪ್ಯಾಟಿ ೧೯೬೪ರಲ್ಲಿ** ಜನಿಸಿದರು. ತಂದೆ ಕೊಟ್ರೆಪ್ಪ, ತಾಯಿ ನೀಲಮ್ಮ. ಸರ್ಕಾರಿ ಪ್ರೌಢಶಾಲೆ ಹಿರೇಬಾದವಾಡಗಿ ಹುನಗುಂದ ತಾ. ಬಾಗಲಕೋಟೆ ಜಿಲ್ಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು **ಕಲ್ಪನಾಳಿಗೊಂದು ಎದೆಹಾಡು, ಹೂ ಮಾರುವ ಹುಡುಗಿ ಎಂಬ ಮಕ್ಕಳ** ಕವನ ಸಂಕಲನ. **ಪಟ್ಟಣಕ್ಕೆ ಬಂದ ಪುಟ್ಟ ಗುಬ್ಬಿ (ಮಕ್ಕಳ ನಾಟಕ) ಮಳೆಯಾದಳು ನೀರಾ, ಗೆಳೆಕಾರ ಹಕ್ಕಿಗಳು ಚಂದ್ರ ಚುಕ್ಕಿಗಳು** ಎಂಬ ಮಕ್ಕಳ ಕಥಾ ಸಂಕಲನಗಳನ್ನು ರಚಿಸಿದ್ದಾರೆ.

© KTBS NOT TO BE REPUBLISHED

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಕವಯಿತ್ರಿಯು ತಾಯಿಯ ಪಾದಕ್ಕೆ ಏನು ತರುತ್ತಾಳೆ?

೨. ಜಗತ್ತಿನಲ್ಲಿ ಮಿಗಿಲಾದುದು ಯಾವುದು?

೩. ತಾಯಿ ಮಗುವಿಗೆ ಏನನ್ನು ಕಲಿಸುತ್ತಾಳೆ?

೪. ಮಗು ಬಿದ್ದಾಗ ತಾಯಿ ಹೇಗೆ ರಮಿಸುತ್ತಾಳೆ?

೫. ತಾಯಿ ಮಗುವಿಗೆ ಏನನ್ನು ಕುಡಿಸುತ್ತಾಳೆ?

* * * * *